ಸಂಪಾದಕರು

ಪ್ರೊ. ಸ.ಚಿ. ರಮೇಶ

ಜಾನಪದ ವಸ್ತುಕೋಶ



ಗ್ರಾಮಕರ್ನಾಟಕ ಜಾನಪದ ವಸ್ತುಕೋಶ

ವಿಸ್ತರಣಾ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ, ರಾ. ಹೆ ೦೪
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

JANAPADA VASTUKOSHA

By
Dr. S.C. Ramesh
Karnataka Janapada Vishwavidyalaya
Gotagodi – 581 205
Shiggaon Taluk, Haveri Dist

Published by
Prof. S.C. Ramesh
Director
Centre for Extension and Consultancy
Karantaka Janapada University
Gotagodi - 581 205
Shiggavi Taluk, Haveri Dist, Karnataka
Phone: 0836 - 2255180
Pages: ___ + ____ **Price: ________**
www.janapadauni.in
First Impression : 2013
ISBN ______________________

ಬೆಲೆ : ಪಿಪಿಪಿಪಿಪಿಪಿಪಿ

ಮುಖಪುಟ: ___________

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೨೦೫, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಕಟ್ಟಡ
ನಂ. ೨/೧೦೬, ೩ನೇ ಮಹಡಿ, ೧೭ನೇ ಅಡ್ಡರಸ್ತೆ,
ಮಾಗಡಿ ಕಾರ್ಡ್‌ರಸ್ತೆ, ವಿಜಯನಗರ, ಬೆಂಗಳೂರು – ೫೬೦ ೦೪೦

ಮುದ್ರಣ
ಸ್ವಾನ್ ಪ್ರಿಂಟರ್ಸ್, ಬೆಂಗಳೂರು

ಕ್ಷೇತ್ರ ಸಹಾಯಕರು

ಡಾ. ಚಂದ್ರಪ್ಪ ಸೊಬಟಿ

ಡಾ. ಮಂಜು. ಹೆಚ್.

ಶ್ರೀ ಮೇಘನಾಥ. ಎ.ಕೆ.ಎನ್.

ಶ್ರೀ ಸಂಗಪ್ಪ ಎಸ್. ಗಣಿ

ಶ್ರೀ ಅರುಣ ಕುಮಾರ್ ಹೆಚ್.ಕೆ.

ಶ್ರೀ ಲಕ್ಷ್ಮಣ (ಸಹಾಯಕ)

ಬೇಸಾಯ

ಈ ವಿಭಾಗದಲ್ಲಿ ಕರ್ನಾಟಕದ ಜನಪದರ ಬದುಕಿನ ಬೆನ್ನುಲುಬಾದ ಬೇಸಾಯ ವೃತ್ತಿಗೆ ಸಂಬಂಧಿಸಿದ ಕೆಲವು ಉಪಕರಣಗಳನ್ನು ಪರಿಚಯಿಸಿದೆ. ಇಲ್ಲಿ ಆಯ್ದುಕೊಂಡ ವಸ್ತುಗಳು ಹಾವೇರಿ ಜಿಲ್ಲೆಯ ಬೇಸಾಯ ಪದ್ಧತಿಗೆ ಅಗತ್ಯವಾದ ಸಲಕರಣೆಗಳು. ಬಿತ್ತನೆಯಿಂದ ತೊಡಗಿ ಧಾನ್ಯ ಸಂಗ್ರಹಣೆಯ ತನಕ ಜನಪದರು ಬಳಸುವ ಸಾಧನಗಳಿವೆ. ಇವುಗಳಲ್ಲಿ ಕಾಷ್ಠನಿರ್ಮಿತ, ಲೋಹ ನಿರ್ಮಿತವಾದುವು, ಚರ್ಮದ ವಸ್ತುಗಳು, ನಾರು–ಬಳ್ಳಿಗಳಿಂದ ತಯಾರಾದವೂ ಇವೆ. ಅಂತೆಯೇ ಹಳೆಯ, ಹೊಸ ವಸ್ತುಗಳು ಕೂಡ. ದಕ್ಷಿಣ ಕರ್ನಾಟಕದ, ಕರಾವಳಿಯ ಅನೇಕರು ಕಂಡೂ ಕೇಳಿಯೂ ಇಲ್ಲದ ಅಪೂರ್ವ ಸಾಧನಗಳಿವೆ. ಹಾಗೆಂದು ಇವು ಹಾವೇರಿ ಜಿಲ್ಲೆಯಲ್ಲಿನ ಬೇಸಾಯ ಪದ್ಧತಿಯ ಸರ್ವ ಸಲಕರಣೆಗಳನ್ನೆಲ್ಲ ಒಳಗೊಂಡಿದೆಯೆಂಬ ಭ್ರಮೆ ನಮಗಿಲ್ಲ. ಮುಂದೆ ಕರ್ನಾಟಕದ ಕೃಷಿ ಬದುಕಿನ ಪರಿಕರಗಳ ಸಮಗ್ರ ಪರಿಚಯ ಮಾಡುವ ಉದ್ದೇಶವಿದೆ.

ಅಂಗಡ



ಜಾನುವಾರುಗಳ ಕೊರಳಿಗೆ ಕಟ್ಟುವ ದಪ್ಪನೆಯ ಹಗ್ಗದ ಸಲಕರಣೆ. ಈ ಹಗ್ಗವು ಸುಮಾರು ಒಂದೂವರೆಯಿಂದ ಎರಡಿಂಚು ಸುತ್ತಳತೆ/ದಪ್ಪಗಿರುತ್ತದೆ. ಹಗ್ಗವನ್ನು ಚರ್ಮ, ರಕ್ಕಸಬಳ್ಳಿಯ ನಾರು, ಪುಂಡೆನಾರುಗಳಿಂದ ಹೆಣೆದು/ಹೊಸೆದು ತಯಾರಿಸಿ ಕೊಳ್ಳುತ್ತಾರೆ. ಎತ್ತುಗಳ ಕೊರಳ ಕೆಳಭಾಗಕ್ಕೆ ಸರಿಹೊಂದುವಂತೆ ಅಂಗ್‌ಡಾದ ನಿರ್ದಿಷ್ಟ ಜಾಗದಲ್ಲಿ ಹೆಗ್ಗೆಜ್ಜೆಯೊಂದನ್ನು ಕಟ್ಟುತ್ತಾರೆ. ಕೆಲವೊಂದು ಅಂಗ್‌ಡಾಗಳಲ್ಲಿ ಇಂಥ ಮೂರು ಹೆಗ್ಗೆಜ್ಜೆಗಳನ್ನು ಪೋಣಿಸಿ ಅಂಗ್‌ಡಾವನ್ನು ನಿರ್ಮಾಣ ಮಾಡುತ್ತಾರೆ. ಅಂಗ್‌ಡಾಗಳನ್ನು ವಿಶೇಷ ಕೈಚಳಕದಿಂದ ವಿಭಿನ್ನ ವಿನ್ಯಾಸಗಳಲ್ಲಿ ರಚಿಸುವುದೂ ಇದೆ. ಚರ್ಮದ ಮಿಣಿಗಳು ಇದಕ್ಕೆ ಹೆಚ್ಚು ಸೂಕ್ತವಾಗಿದೆ. ಇತ್ತೀಚೆಗೆ ನೈಲೋನ್ ಹಗ್ಗಗಳನ್ನು ಬಳಸಿಯೂ ಅಂಗ್‌ಡಾಗಳನ್ನು ರಚಿಸುತ್ತಾರೆ. ಎಮ್ಮೆ, ಕೋಣಗಳ ಚರ್ಮವು ಬಳಕೆಯಾಗುತ್ತಿದ್ದು ಅಂಥ ಅಂಗ್‌ಡಾಗಳನ್ನು ಮಾದಾರರು ನಿರ್ಮಿಸಿಕೊಡುತ್ತಾರೆ. ಚರ್ಮದ ಮಿಣಿಗಳ ದೀರ್ಘ ಬಾಳಿಕೆಗಾಗಿ ವರ್ಷಕ್ಕೆ ಒಂದು ಬಾರಿ ಎಣ್ಣೆಯಲ್ಲಿ ಮುಳುಗಿಸಿ ಸಂರಕ್ಷಿಸುತ್ತಾರೆ.





ಜಾನುವಾರುಗಳನ್ನು ನಿಯಂತ್ರಿಸುವುದಕ್ಕೆ ಅಂಗ್‌ಡಾಗಳು ಬಳಕೆಯಾಗುತ್ತವೆ. ಅವುಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯುವಾಗ, ಗೂಟಕ್ಕೆ ಕಟ್ಟುವಾಗ, ಉಳುಮೆ ಮಾಡುವಾಗ ಅಂಗ್‌ಡಾಗಳು ಉಪಯೋಗಕ್ಕೆ ಬರುತ್ತವೆ. ಉಳುಮೆ ಮಾಡುವಾಗ ಅಂಗ್‌ಡಾಕ್ಕೆ ಒಂದು ಹಗ್ಗವನ್ನು ಕಟ್ಟಿ ಉಳುಮೆ ಮಾಡುವವನು ಅದನ್ನು ಬೇಕಾದಂತೆ ಬಳಸಿಕೊಂಡು ಎತ್ತನ್ನು ನಿಯಂತ್ರಿಸುತ್ತಾನೆ.

ಅಂಗ್‌ಡಾಗಳಲ್ಲಿನ ಹೆಗ್ಗೆಜ್ಜೆಗಳ ಶಬ್ದವು ಜಾನುವಾರುಗಳಿಗೆ ಉಪಟಳ ಕೊಡುವ ಕ್ರಿಮಿಕೀಟಗಳು, ಹುಳ ಹುಪ್ಪಟೆಗಳನ್ನು ದೂರ ಮಾಡುತ್ತವೆ ಎಂಬ ನಂಬುಗೆಯಿದೆ.



ಅಟ್ಟ/ಮ್ಯಾಟ



ಭತ್ತ, ರಾಗಿ, ಜೋಳ ಮುಂತಾದವನ್ನು ಒಕ್ಕಣೆ ಮಾಡುವ ಸಂದರ್ಭದಲ್ಲಿ ಧಾನ್ಯಗಳನ್ನು ತೂರಲು ಬಳಸುವ ಸಾಧನ. ಇದು ಸುಮಾರು ಮೂರು ಇಂಚು ದಪ್ಪದ ಹಲಗೆ. ಸುಮಾರು ಮೂರು ಅಡಿ ಉದ್ದವಿದ್ದು ಒಂದೂವರೆ ಅಡಿ ಅಗಲವಿರುತ್ತದೆ. ಹಲಗೆಯ ಸುಮಾರು ಮಧ್ಯಭಾಗದಲ್ಲಿ ಐದು ಇಂಚು ವ್ಯಾಸದ ಮೂರು ರಂಧ್ರಗಳಿವೆ. ಈ ರಂಧ್ರಗಳಿಗೆ ಸುಮಾರು ಹತ್ತರಿಂದ ಹನ್ನೆರಡು ಇಂಚು ವ್ಯಾಸದ ಮೂರು ಮರದ ತುಂಡುಗಳನ್ನು ಜೋಡಿಸಿ ಕಣದಲ್ಲಿ ನಿಲ್ಲಿಸುತ್ತಾರೆ. ಅಟ್ಟದ ಮೇಲೆ ನಿಂತುಕೊಂಡು ಧಾನ್ಯಗಳನ್ನು ತೂರುತ್ತಾರೆ. ಸಾಗುವಾನಿ ಮುಂತಾದ ಮರಗಳಿಂದ ಅಟ್ಟವನ್ನು ತಯಾರಿಸಲಾಗುತ್ತದೆ.

ಆಲೆಮೆನ ಕತ್ತಿ(ಹನುಮಂತ)

ಆಲೆಮನೆಯಲ್ಲಿ ಬೆಲ್ಲದ ಪಾಕವು ತಳಹಿಡಿಯುವುದನ್ನು ಕೆರೆಯುವ/ಎಬ್ಬಿಸುವ ಸಣ್ಣ ಕತ್ತಿ. ಕಬ್ಬಿಣದ ತಗಡು ತುದಿಗೆ ಸಾಗುತ್ತ ಅಗಲ ಹೆಚ್ಚುತ್ತಾ ಹೋಗುವಂತೆ ಇದರ ರಚನೆ ಇದೆ. ಸುಮಾರು ಹತ್ತು ಇಂಚು ಉದ್ದ. ತುದಿಯಲ್ಲಿ ಎರಡೂವರೆ



ಇಂಚು ಮತ್ತು ಬುಡದಲ್ಲಿ ಒಂದೂವರೆ ಇಂಚು ಅಗಲ. ತುದಿಯು ಚೂಪಾಗಿರದೆ ದೋಸೆ ಸಟ್ಟುಗದ ಆಕಾರದಲ್ಲಿದೆ. ಇದಕ್ಕೆ ಸರಳವಾದ ಒಂದು ಮರದ ಹಿಡಿಯಿದ್ದು ಇದು ಸುಮಾರು ಎಂಟು ಇಂಚು ಉದ್ದವಿದೆ. ಈ ಕತ್ತಿಯು ನಿಜವಾಗಿಯೂ ಬಹೂಪಯೋಗಿ. ಕಬ್ಬಿನ ಗದ್ದೆಗಳಲ್ಲಿ ಕಬ್ಬನ್ನು ಕಡಿಯಲು ಅದರ ಗರಿಗಳನ್ನು ಸವರಲು ಕೂಡ ಇದು ಉಪಯೋಗಕ್ಕೆ ಬರುತ್ತದೆ. ಆಲೆಮನೆ ಕತ್ತಿಯನ್ನು ಹೆಣ್ಮಕ್ಕಳು ಬಳಸಬಾರದೆಂಬ ನಿಷೇಧವಿದೆ. ಅದಕ್ಕಾಗಿಯೇ ಇದನ್ನು ತುಳಿಯಬಾರದು, ದಾಟಬಾರದು ಮುಂತಾದ ನಿಷೇಧಗಳೂ ಇವೆ. ಆಲೆಮನೆಯಲ್ಲಿ ಹೆಣ್ಮಕ್ಕಳಿಗೆ ಪ್ರವೇಶವೂ ನಿಷಿದ್ಧವಾಗಿದೆ. ಮಲೆನಾಡಿನಲ್ಲಿ ಈ ನಿಷೇಧವಿಲ್ಲ ಎಲ್ಲರಿಗೂ ಮುಕ್ತ ಅವಕಾಶವಿದೆ. ಇದಕ್ಕೆ ಹನುಮಂತ(ಬ್ರಹ್ಮಚಾರಿ) ಎಂಬ ಹೆಸರು ಇದೆ.

ಉಡಿ



ಬಿತ್ತನೆ ಮಾಡುವಾಗ ಸಣ್ಣ ಪ್ರಮಾಣದಲ್ಲಿ ಬೀಜಗಳನ್ನು ಇದರಲ್ಲಿ ತುಂಬಿಕೊಂಡು ರೈತರು ಸೊಂಟಕ್ಕೆ (ಹೊಟ್ಟೆಯಮೇಲೆ) ಕಟ್ಟಿಕೊಳ್ಳುತ್ತಾರೆ. ಇದರ ಮುಂಭಾಗದಲ್ಲಿ ಚೀಲದಂತಹ ರಚನೆ ಇದ್ದು, ಬಿತ್ತುವ ಬೀಜವನ್ನು ತುಂಬಿಕೊಳ್ಳುತ್ತಾರೆ. ಹಾಗೆ ತುಂಬಿಕೊಂಡಬಳಿಕ ಕೂರಿಗೆ/ರಂಟೆ/ಮಡಕೆ ಹೊಡೆಯುವವರ ಹಿಂದಿನಿಂದ ಉಡಿಯಿಂದ ಆಗಾಗ ಬೀಜಗಳನ್ನು ತೆಗೆದುಕೊಳ್ಳುತ್ತ ಬಿತ್ತನೆ ಮಾಡುತ್ತಾರೆ. ಕೆಲವು ಸಂದರ್ಭದಲ್ಲಿ ಕೂರಿಗೆ/ರಂಟೆ ಹೊಡೆಯುವವನು ಕೂಡಾ ಉಡಿಯನ್ನು ಬಳಸಿಕೊಂಡು ಬಿತ್ತನೆ ಮಾಡಬಹುದು. ಇದರಲ್ಲಿ ಸುಮಾರು ಮೂರು ನಾಲ್ಕು ಕೆ.ಜಿ ಬೀಜಗಳನ್ನು ತುಂಬಿಕೊಳ್ಳಬಹುದು.

ಎಡೆಕುಂಟೆ



ಇದು ಮುಖ್ಯವಾಗಿ ಬೆಳೆಗಳ ಸಾಲುಗಳ ಮಧ್ಯದಲ್ಲಿನ ಕಳೆಯನ್ನು ಕೀಳುವುದಕ್ಕೆ ಮತ್ತು ಬೆಳೆಗಳ ಬುಡಕ್ಕೆ ನಿರ್ದಿಷ್ಟ ಪ್ರಮಾಣದ ಮಣ್ಣನ್ನು ಹೇರುವುದಕ್ಕೆ ಬಳಕೆಯಾಗುತ್ತದೆ. ಅದಕ್ಕಾಗಿಯೇ ಇದಕ್ಕೆ ಎಡೆಕುಂಟೆ ಎಂದು ಹೆಸರು. ಎರಡು ಸಾಲುಗಳಲ್ಲಿ ಬೆಳೆದಿರುವ ಬೆಳೆಗಳ ಮಧ್ಯೆ ಇದನ್ನು ಹಾಯಿಸಿದಾಗ ಕಳೆಗಿಡಗಳು ಕಿತ್ತುಹೋಗಿ ನಾಶವಾಗುತ್ತವೆ. ಎರಡನೆ ಹಂತದಲ್ಲಿ ಇದರ ಬಳಕೆಯು ಬೆಳೆಯ ಕೆಲವು ಬೇರುಗಳನ್ನು ಹರಿಯುವುದಾಗಿರುತ್ತದೆ (ಜೊತೆಗೆ ಕಳೆಕೂಡಾ ನಾಶವಾಗುತ್ತದೆ). ಇದರಿಂದ ಬೆಳೆಯಲ್ಲಿ ಹೊಸ ಬೇರುಗಳು ಸಮೃದ್ಧವಾಗಿ ಮೂಡಿಬರುತ್ತವೆ ಎನ್ನವುದು ರೈತರ ಅಭಿಪ್ರಾಯ. ಮೂರನೆ ಹಂತದಲ್ಲಿ ಬೆಳೆಯ ಬುಡಕ್ಕೆ ನಿರ್ದಿಷ್ಟ ಪ್ರಮಾಣದಲ್ಲಿ ಎಡೆಯ ಮಣ್ಣನ್ನು ಒದಗಿಸುವುದೇ ಇದರ ಉದ್ದೇಶವಾಗಿರುತ್ತದೆ. ಒಂದನೇ ಎರಡನೇ ಹಂತಗಳಲ್ಲಿ ಎಡೆಕುಂಟೆಯ ತಾಳಿನ ರಂಧ್ರದಲ್ಲಿ ಮಣ್ಣು ಹಿಂದಕ್ಕೆ ಬೀಳುತ್ತಾ ಹೋದರೆ ಮೂರನೆ ಹಂತದಲ್ಲಿ ತಾಳಿನ ಈ ರಂಧ್ರವನ್ನು ಹಗ್ಗ/ಬಳ್ಳಿಯನ್ನು ಸುತ್ತಿ ಮುಚ್ಚಿಬಿಡುವುದರಿಂದ ಮಣ್ಣು ಹಿಂದಕ್ಕೆ ಬೀಳದೆ ಬದಿಗಳಿಂದ ಸರಿದು ಬೆಳೆಗಳ ಬುಡಕ್ಕೆ ಬೀಳುತ್ತದೆ.

ಎತ್ತುಗಳ ನೊಗಕ್ಕೆ ಎಡೆಕುಂಟೆಯನ್ನು ಹಗ್ಗದ ಸಹಾಯದಿಂದ ಕಟ್ಟಲಾಗುತ್ತದೆ. ಒಂದು ಕುಂಟೆಯನ್ನಷ್ಟೆ ಬಳಸುವಾಗ ನೊಗವು ಚಿಕ್ಕದಾಗಿರುತ್ತದೆ. ಮಣ್ಣನ್ನು ಬೆಳೆಯ ಬುಡಕ್ಕೆ ಹಾಕುವಾಗ ಸಾಮಾನ್ಯವಾಗಿ ಒಂದೇ ಕುಂಟೆಯನ್ನು ಕಟ್ಟುತ್ತಾರೆ. ಎರಡು ಅಥವಾ ಮೂರು ಮೂರು ಕುಂಟೆಗಳನ್ನು ಬಳಸುವಾಗ ದೊಡ್ಡ ನೊಗವನ್ನು (ಸುಮಾರು ಹನ್ನೆರಡು ಗೇಣು) ಕಟ್ಟುತ್ತಾರೆ. ಕುಂಟೆಯಲ್ಲಿ ಈಸು (ನೊಗಕ್ಕೆ ಜೋಡಿಸುವ ಭಾಗ), ತಾಳು (ದಿಂಡು ಮತ್ತು ಕುಡಗಳನ್ನು ಜೋಡಿಸುವ ಮರದ ಪಟ್ಟಿ), ಕುಡ(ಕಳೆಯನ್ನು ಕತ್ತರಿಸುವ ಮತ್ತು ಮಣ್ಣನ್ನು ಅಗೆಯುವ ಭಾಗ), ಮೇಳಿ (ಹಿಡಿಕೆ)–ಎಂಬ ಭಾಗಗಳಿವೆ. ಮಣ್ಣು ಗಟ್ಟಿಯಾಗಿದ್ದಾಗ ಕುಂಟೆಗೆ ಇನ್ನಷ್ಟು ಒತ್ತಡ ಹಾಕಲು ಬ್ಯಾಕೋಲು/ಕವೆಗೋಲು/ಕೊಕ್ಕೆಕೋಲನ್ನು ಬಳಸುತ್ತಾರೆ (ಇದು ಸುಮಾರು ಮೂರು, ಮೂರೂವರೆ ಅಡಿ ಎತ್ತರವಿರುತ್ತದೆ). ಅಗತ್ಯವಿದ್ದಾಗ ಬೆಳೆಗಳ ಮಧ್ಯೆ ನೀರು ಹರಿಸಿಕೊಂಡು ಎಡೆನಾಟಿ ಮಾಡುವಾಗಲೂ ಎಡೆಕುಂಟೆಯ ಉಪಯೋಗವಾಗುತ್ತದೆ.



ಏತರಾಟೆ/ಕಪ್ಪಿರಾಟೆ

ನೆಲಬಾವಿಯಿಂದ ಎತ್ತುಗಳ ಮೂಲಕ ಕಪ್ಪಿ ಹೊಡೆದು ನೀರನ್ನು ಮೇಲೆತ್ತಲು ಬಳಸುವ ಒಂದು ಸಾಧನ. ಸುಮಾರು ಹತ್ತು ಇಂಚು ವ್ಯಾಸ, ಆರು ಇಂಚು ದಪ್ಪದ ಮರದಿಂದ ತಯಾರಿಸಿದ್ದಾರೆ. ಇದು ವೃತ್ತಾಕಾರದಲ್ಲಿದ್ದು ಅದರ ಹೊರ ಅಂಚಿನಲ್ಲಿ ಹಗ್ಗವು ಅತ್ತಿತ್ತ ಹೊರ ಹೋಗದೆ ಸಲೀಸಾಗಿ

ಚಲಿಸಲು ಅನುಕೂಲವಾಗುವಂತೆ ಕೆತ್ತಿರುತ್ತಾರೆ. ರಾಟೆಯ ಮಧ್ಯಭಾಗದಲ್ಲಿ ಸುಮಾರು ಎರಡು ಇಂಚು ವ್ಯಾಸದ ರಂಧ್ರವಿರುತ್ತದೆ. ಅದಕ್ಕೆ ಬಲವಾದ ಸರಳನ್ನು ಜೋಡಿಸಲಾಗತ್ತದೆ. ಭಾರವಾದ ನೀರು/ವಸ್ತುವನ್ನು ಆಳದಿಂದ ಮೇಲೆತ್ತಲು ರಾಟೆಯ ತಂತ್ರವನ್ನು ಅಳವಡಿಸುವುದರಿಂದ ಶ್ರಮವು ತುಂಬಾ ಕಡಿಮೆಯಾಗುತ್ತದೆ.

ಕಂದ್ಲಿ



ಹೊಲಗದ್ದೆಗಳ ಬದುಗಳಲ್ಲಿ ಬೆಳೆದ ಮರಗಿಡಗಳ ರೆಂಬೆ ಕೊಂಬೆಗಳನ್ನು ಕಡಿಯಲು, ಸೌದೆ ಕಡಿಯಲು, ಮನೆಗಳಲ್ಲಿ ಮಾಂಸ ತುಂಡರಿಸಲು ಬಳಕೆ ಮಾಡುತ್ತಾರೆ. ಒಂದು ಅಡಿ ಉದ್ದವಿದ್ದು ಮುಂಭಾಗ ಸ್ವಲ್ಪ ಬಾಗಿರುತ್ತದೆ. ಇದನ್ನು ಕಬ್ಬಿಣದಿಂದ ತಯಾರಿಸಿದ್ದಾರೆ. ಕೊಡ್ಲಿ ಮತ್ತು ಮಚ್ಚುಗಳಿಂದ ಮಾಡುವ ಕೆಲಸಗಳನ್ನೂ ಈ ಆಯುಧದಿಂದ ಮಾಡುತ್ತಾರೆ.

ಕತ್ತಿ

ಎಮ್ಮೆ ಕೋಣಗಳ ಮೈಯ ಕೂದಲನ್ನು ಹೆರೆಯಲು ಬಳಸುವ ಕಿರುಗತ್ತಿ. ಇದರಲ್ಲಿ ಹಿಡಿಕೆಯು ಮರದ್ದಾಗಿದ್ದು ಕತ್ತಿಯು ಕಬ್ಬಿಣದಿಂದ ನಿರ್ಮಿತವಾಗಿದೆ. ಒಟ್ಟು ಉದ್ದ ಸುಮಾರು ಹತ್ತು ಇಂಚು. ಕತ್ತಿಯ ಅಲಗು ಕಬ್ಬಿಣದ ತೆಳುತಗಡಿನಿಂದ ರಚಿತವಾಗಿದೆ. ಎಮ್ಮೆ ಕೋಣಗಳ ಕೂದಲುಗಳನ್ನು ಹೆರೆಯದಿದ್ದರೆ. ಅದರಲ್ಲಿ ಕ್ರಿಮಿ–ಕೀಟ–ಹೇನುಗಳು ತುಂಬುವುದಲ್ಲದೆ ಕೊಳೆ, ಕೆಸರು ಕೂಡ ತುಂಬುತ್ತದೆ. ಇದರಿಂದ ಅವಕ್ಕೆ ಅಸ್ವಸ್ಥತೆಯುಂಟಾಗುತ್ತದೆ ಮತ್ತು ಕೊಳಕಾಗಿರುತ್ತವೆ. ಇದನ್ನು ನಿವಾರಿಸಲು ಕತ್ತಿಯ ಬಳಕೆ ಪಶುಪಾಲಕರಿಗೆ ತುಂಬ ಅಗತ್ಯ.

ಕದರು

ನೆಲಬಾವಿಯಿಂದ ಎತ್ತುಗಳ ಮೂಲಕ ಕಪ್ಲಿ ಹೊಡೆದು ನೀರನ್ನು ಮೇಲೆತ್ತಲು ಬಳಸುವ ಮತ್ತೊಂದು ಸಾಧನ. ಇದು



ಸುಮಾರು ಮೂರು ಅಡಿ ಉದ್ದದ ಕಂಭಾಕಾರದಲ್ಲಿದ್ದು ಒಂದು ಅಡಿ ಸುತ್ತಳತೆ ಇರುತ್ತದೆ. ಇದರ ಎರಡು ತುದಿಗಳಲ್ಲಿ ಸುಮಾರು ಅರ್ಧ ಅಡಿ ಉದ್ದದ ಕಬ್ಬಿಣದ ಸರಳನ್ನು ಜೋಡಿಸಲಾಗುತ್ತದೆ. ಕಂಭಾಕಾರದ ಮಧ್ಯಭಾಗದಲ್ಲಿ ಸುತ್ತಲೂ ತಿರುಪಿನಾಕಾರದಲ್ಲಿ ಕೊರೆದು ಅದರ ಮೂಲಕ ಹೂಟೆ ಹಗ್ಗವು ಸಲೀಸಾಗಿ ತಿರುಗಲು ಅನುವಾಗುವಂತೆ ರಚನೆ ಇರುತ್ತದೆ. ಕದರನ್ನು ಹುಣಸೆ ಮರದಿಂದ ತಯಾರಿಸುತ್ತಾರೆ. ಕಪ್ಲಿಬಾವಿಗಳು ವಿರಳವಾಗಿರುವುದರಿಂದ ಈಗ ಇವುಗಳ ಬಳಕೆ ನಿಂತು ಹೋಗುವ ಸ್ಥಿತಿಯಲ್ಲಿದೆ.

ಕಲ್ಲಿ/ಜಾನುವಾರುಗಳ ಮೈ ಉಜ್ಜುವ ಕಲ್ಲಿ



ಇದು ಪಶುಪಾಲನೆಗೆ ಸಂಬಂಧಿಸಿದ ಕೆಲಸಕ್ಕೆ ಬಳಸುವ ಸಾಧನ. ಎತ್ತು, ದನಕರುಗಳ ಮೈ ಉಜ್ಜಲು (ಮಾಲೀಸು) ಇದನ್ನು ಬಳಸುತ್ತಾರೆ. ಇದರಿಂದ ಅವುಗಳ ಚರ್ಮವು ಕಾಂತಿಯುತವಾಗುತ್ತದೆ. ಎತ್ತುಗಳು ದಣಿದಾಗ ಕೂಡ ಕಲ್ಲಿಯಿಂದ ಅವುಗಳ ಮೈ ಉಜ್ಜುತ್ತಾರೆ. ಇದರಿಂದ ಅವುಗಳ ಬಳಲಿಕೆ ಶಮನವಾಗುತ್ತದೆ. ಕಲ್ಲಿಯನ್ನು ತೆಂಗಿನನಾರನ್ನು ನೆಯ್ಗೆಮಾಡಿ ತಯಾರಿಸುತ್ತಾರೆ.



ಕುರ್ಚಿಗೆ

ಕಳೆ ಕೀಳಲು ವ್ಯಾಪಕವಾಗಿ ಬಳಕೆಯಾಗುವ ಸಾಧನ. ಇದಕ್ಕೆ ಮರದ ಹಿಡಿ, ಕಬ್ಬಿಣದ ಅಲಗು. ಅಲಗಿನ ಮುಂಭಾಗವು ತೆಳುವಾಗಿರುವುದರಿಂದ ಮಣ್ಣಿನ ಮೇಲ್ಪದರದಲ್ಲಿ ಹಬ್ಬಿರುವ ಕಳೆ ಗಿಡಗಳ

ಬೇರುಗಳನ್ನು ಕತ್ತರಿಸಲು ಯೋಗ್ಯವಾಗಿರುತ್ತದೆ. ಕುರ್ಚಿಗೆಗಳ ವಿನ್ಯಾಸಗಳಲ್ಲಿ ವ್ಯತ್ಯಾಸಗಳಿವೆ. ಬೆಳ್ಳುಳ್ಳಿಯ ಬೆಳೆಯಲ್ಲಿನ ಕಳೆಗಳನ್ನು ತೆಗೆಯಲು ಬಳಸುವ ಕುರ್ಚಿಗೆ ಚಿಕ್ಕದು. ಬಾಗಿದ ಅಲಗು ಒಟ್ಟು ಒಂದು ಅಡಿ ಉದ್ದವಿದೆ. ಬಾಗಿದ ಮುಂಭಾಗವು ಸಾಮಾನ್ಯವಾಗಿ ನಾಲ್ಕು ಇಂಚು ಉದ್ದವಿರುತ್ತದೆ. ಉಳುಮೆಯಾದ ನೆಲವನ್ನು ಸಮತಟ್ಟು ಮಾಡಲು ಮತ್ತು ಸಡಿಲು/ನುಸುಲುಗೊಳಿಸಲು ಬಳಸುವ ಕುಂಟೆಯಲ್ಲಿ ಸಿಕ್ಕಿಕೊಳ್ಳುವ ಬೇರು ನಾರುಗಳ ತೊಂದರೆಯನ್ನು ನಿವಾರಿಸಲು ಕೂಡ ಕುರ್ಚಿಗೆ ಬಳಕೆಯಾಗುತ್ತದೆ. ಕುರ್ಚಿಗೆಯನ್ನು ಹಳೆಯ/ಸವೆದ ಕುಡುಗೋಲುಗಳಿಂದಲೂ ತಯಾರಿಸಿಕೊಳ್ಳಬಹುದು.



ಕುಡುಗೋಲು/ಕತ್ತಿ



ಪೈರುಗಳ ಕಟಾವಿಗೆ, ಸೊಪ್ಪು, ಹುಲ್ಲು, ಕಳೆ ಇತ್ಯಾದಿಗಳನ್ನು ಕತ್ತರಿಸಲು ಬಳಸುವ ಸಾಧನ. ಇದಕ್ಕೆ ಮರದ ಹಿಡಿ, ಕಬ್ಬಿಣದ ಅಲಗು. ಅಲಗು ಬಾಗಿರುವುದರಿಂದ ಇದಕ್ಕೆ ಕುಡುಗೋಲು ಎಂಬ ಹೆಸರು. ಇದನ್ನು ಕಮ್ಮಾರರು ಪಾರಂಪರಿಕವಾಗಿ ತಯಾರಿಸುತ್ತಾರೆ. ಇದು ಬಾಗಿರುವುದರಿಂದ ಪೈರು ಮತ್ತು ಹುಲ್ಲಿನಂತಹ ಬೆಳೆಗಳನ್ನು ಕತ್ತರಿಸಲು ಅನುಕೂಲಕರವಾಗಿದೆ. ತರಕಾರಿ ಮತ್ತು ಮಾಂಸ ಹೆಚ್ಚುವುದಕ್ಕೂ ಬಳಕೆಯಾಗುತ್ತದೆ. ಇವುಗಳಲ್ಲಿ ನಾನಾ ಪ್ರಕಾರ/ಗಾತ್ರಗಳಿರುತ್ತವೆ.



ಕೂರಿಗೆ ತಾಳು

ಕೂರಿಗೆ ತಾಳನ್ನು ಕೂರಿಗೆಯ ದಿಂಡಿನ ಕೆಳಭಾಗದಲ್ಲಿ ಜೋಡಿಸಲಾಗುತ್ತದೆ. ಇದು ಸುಮಾರು ಒಂದೂವರೆ ಅಡಿ ಉದ್ದವಿದೆ. ಕೂರಿಗೆ ತಾಳಿನ ಹಿಂಭಾಗದಲ್ಲಿನ ಒಂದು ಅಡಿ ಕೂರಿಗೆ ದಿಂಡಿಗೆ ಜೋಡಣೆಯಾಗುವಂತೆ ಆಯಾತಾಕಾರದಲ್ಲಿದ್ದು ಅದರ ಮುಂಭಾಗದ ಚೂಪಾದ ರಚನೆಯು ಭೂಮಿಯನ್ನು ಉಳುವುದಕ್ಕೆ ಉಪಯೋಗವಾಗುತ್ತದೆ. ಮರದ ತಾಳು ಸವೆಯಬಾರದೆಂಬ ಕಾರಣಕ್ಕೆ ಸುಮಾರು ಅರ್ದ ಅಡಿ ಉದ್ದದ ಕಬ್ಬಿಣದ ಕುಳವನ್ನು ಜೋಡಿಸಲಾಗುತ್ತದೆ. ಇದು ಕಿತ್ತು ಹೋಗದಂತೆ ಅದಕ್ಕೆ 'U' ಆಕಾರದ ಜಿಗಳೆಯನ್ನು ಹೊಡೆದಿರುತ್ತಾರೆ. ಜಾಲಿ ಮುಂತಾದ ಗಟ್ಟಿಮರವನ್ನು ಕೂರಿಗೆ ತಾಳು ತಯಾರಿಸಲು ಬಳಸುತ್ತಾರೆ.



ಕೂರಿಗೆ ಬಟ್ಲು



ಕೂರಿಗೆಗೆ ಬಿದಿರಿನ ಕೊಳವೆಯಾಕಾರದ ಬಂಬುಗಳನ್ನು ಜೋಡಿಸಿಕೊಂಡು ಕಾಳುಗಳನ್ನು ಬಿತ್ತನೆ ಮಾಡಲಾಗುತ್ತದೆ. ಇದರಿಂದ ನಿಶ್ಚಿತ ಜಾಗದಲ್ಲಿ, ನಿಶ್ಚಿತ ಪ್ರಮಾಣದಲ್ಲಿ ಕಾಳುಗಳು ಬಿತ್ತನೆಗೆ ಒದಗುತ್ತವೆ. ಕೂರಿಗೆ ಬಟ್ಟಲಿನ ಮೇಲ್ಭಾಗವು ಒಂದು ಬಾಣಲೆಯ ಆಕಾರದಲ್ಲಿರುತ್ತದೆ. ಅದರ ಕೆಳಭಾಗದಲ್ಲಿ ಮೂರು ಅಥವಾ ನಾಲ್ಕು ರಂಧ್ರಗಳು ಇರುತ್ತವೆ. ಈ ರಂಧ್ರಗಳಿಗೆ ಬಿದಿರಿನ ಕೊಳವೆಯಾಕಾರದ ಬಂಬುಗಳನ್ನು ಜೋಡಿಸುವ ಮೂಲಕ ಕಾಳುಗಳು ಕೂರಿಗೆಯ ಸಾಲುಗಳನ್ನು ಸೇರಿಕೊಳ್ಳುವಂತೆ ಮಾಡಲಾಗುತ್ತದೆ. ಕೂರಿಗೆ ಬಟ್ಟಲಿನ ವ್ಯಾಸವು ಬಿತ್ತುವ ಧಾನ್ಯಗಳ ಗಾತ್ರಾನುಸಾರ ಬದಲಾಗುತ್ತದೆ. ಸಿರಿಧಾನ್ಯಗಳನ್ನು ಬಿತ್ತುವುದಾದರೆ ಬಟ್ಟಲು ಚಿಕ್ಕದಾಗಿರುತ್ತದೆ.





ಸಾಮಾನ್ಯವಾಗಿ ಕೂರಿಗೆ ಬಟ್ಟಲು ಸುಮಾರು ನಾಲ್ಕೂವರೆ ಇಂಚು ಎತ್ತರ, ಆರು ಇಂಚು ವ್ಯಾಸವಿರುತ್ತದೆ. ಕೂರಿಗೆ ಬಟ್ಟಲನ್ನು(ಬುಕ್ಕಗಳ ಸಹಿತ) ಗೊಬ್ಬರ ಹಾಕಲು, ಬೆಳ್ಳುಳ್ಳಿಯಂಥ ದೊಡ್ಡ ವಸ್ತುಗಳನ್ನು ಬಿತ್ತಲು, ಜೋಳ, ಹೆಸರು, ಉದ್ದು, ಗೋಧಿ ಮುಂತಾದ ಅತಿ ಕಿರುಕಾಳುಗಳನ್ನು ಬಿತ್ತಲೂ ಬಳಸಿಕೊಳ್ಳಲಾಗುತ್ತದೆ. ಹಿಂದೆಯೇ ಹೇಳಿದಂತೆ ಪ್ರಮಾಣಾನುಸಾರ ಬಟ್ಟಲಿನ ರಂಧ್ರ ಮತ್ತು ಗಾತ್ರಗಳಿರುತ್ತವೆ. ಕೂರಿಗೆ ಬಟ್ಟಲಿನ ಬಗೆಗೆ ರೈತರಲ್ಲಿ ಪೂಜ್ಯ ಭಾವನೆಯಿದೆ. ಅದನ್ನು ಬೋರಲು ಹಾಕುವುದು/ಕವುಚುವುದು, ತುಳಿಯುವುದು. ಒಡೆಯುವುದು, ಉರಿಸುವುದು–ಇತ್ಯಾದಿಗಳಿಗೆ ತೀವ್ರ ನಿಷೇಧವಿದೆ. ಕೂರಿಗೆ ಬಟ್ಟಲಲ್ಲಿ ಈ ಕಾರಣದಿಂದಲೇ ನಂದಿ,



ಆಂಜನೇಯ, ಈಶ್ವರ, ಸೂರ್ಯ, ಚಂದ್ರ ಮುಂತಾದ ಚಿತ್ರಗಳನ್ನು ಕೆತ್ತನೆ ಮಾಡಿರುವುದು ಕಂಡುಬರುತ್ತದೆ. ಕೂರಿಗೆ ಬಟ್ಟಲುಗಳನ್ನು ಸಾಗುವಾನಿ, ಶಿವನೆ(ನಿ) ಹತ್ತಿಮರ, ಜಾಲಿ ಮುಂತಾದ ಮರಗಳಿಂದ ರಚಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಟ್ರಾಕ್ಟರ್ ಮೂಲಕ ಕೂಡ ಫೈಬರಿನ ಕೂರಿಗೆ ಬಟ್ಟಲನ್ನು ಕಟ್ಟಿಕೊಂಡು ಬಿತ್ತನೆ ಮಾಡುತ್ತಾರೆ.

ಕೊಡಲಿ



ಕೊಡಲಿಯನ್ನು ರೈತರು ಮರ ಕಡಿಯಲು, ಕಟ್ಟಿಗೆ/ಸೌದೆ ಒಡೆಯಲು ಬಳಸುತ್ತಾರೆ. ಕೊಡಲಿಯು ಕಬ್ಬಿಣ ಹಾಗೂ ಮರದಿಂದ ತಯಾರಿಸಿದ ಆಯುಧ. ಕೊಡಲಿಯ ಅಲಗಿನ ತುದಿಯು ಹರಿತವಾಗಿದ್ದು ಅದರ ಬುಡದಲ್ಲಿ ಹಿಡಿಕೆಯನ್ನು ಜೋಡಿಸಿಕೊಳ್ಳಲು ಅನುಕೂಲವಾಗುವಂತೆ ರಚನೆಯಿರುತ್ತದೆ. ಎರಡು ಇಂಚು ಕೊಳವೆಗೆ ಎರಡೂವರೆ ಅಡಿ ಉದ್ದದ ಹಿಡಿಕೆ ಹಾಕಲಾಗಿರುತ್ತದೆ. ಕೊಡಲಿಗಳ ಗಾತ್ರ ಮತ್ತು ವಿನ್ಯಾಸಗಳಲ್ಲಿ ಸಾಕಷ್ಟು ವ್ಯತ್ಯಾಸವಿರುತ್ತದೆ.



ಗ್ವಾರೆ ಮಣೆ/ನೆಲ್ಲುಕೋರಿ



ಕಾಳು/ಧಾನ್ಯಗಳನ್ನು ಒಕ್ಕುವ ಸಂದರ್ಭದಲ್ಲಿ ತೆನೆಗಳಿಂದ ಪ್ರತ್ಯೇಕಿಸಲ್ಪಟ್ಟ ಕಾಳುಗಳನ್ನು ಒಂದೆಡೆ ಸೇರಿಸಲು ಬಳಸುವ ಉಪಕರಣ. ಇದರಲ್ಲಿ ಈಸು, ಮಣೆಗಳೆಂಬ ಭಾಗಗಳಿರುತ್ತವೆ. ಮಣೆಯ ಭಾಗದ ಮರದ ಹಲಗೆಯು ಅರ್ಧಚಂದ್ರಕಾರದಲ್ಲಿರುತ್ತದೆ. ಇದನ್ನು ಈಸಿನೊಂದಿಗೆ ಜೋಡಿಸಲಾಗುತ್ತದೆ. ಮಣೆಯು ಸುಮಾರು ಒಂದು ಅಡಿ ವ್ಯಾಸವಿರುತ್ತದೆ. ಈಸು ಸುಮಾರು ಐದು ಅಡಿ ಉದ್ದವಿರುತ್ತದೆ. ಗ್ವಾರಿಯನ್ನು ಒಣ ಅಡಕೆಯನ್ನು ಒಂದೆಡೆ ರಾಶಿ ಹಾಕುವುದಕ್ಕೂ ಬಳಸಿಕೊಳ್ಳುತ್ತಾರೆ. ಮಣೆಯನ್ನು ಸಾಗುವಾನಿ, ಹಲಸು ಮುಂತಾದ ಉತ್ತಮ ಜಾತಿಯ ಮರಗಳಿಂದ ತಯಾರಿಸಿಕೊಳ್ಳುತ್ತಾರೆ. ಮಣೆಯ ಒಂದು ಬದಿಯಲ್ಲಿ ಸೂರ್ಯ ಹಾಗೂ ಇನ್ನೊಂದು ಬದಿಯಲ್ಲಿ ಚಂದ್ರನ ಚಿತ್ರವನ್ನು ಕೊರೆದಿರುವುದಿದೆ. ಬ್ಯಾರಲ್‌ನ ಮುಚ್ಚಳವನ್ನು ಕತ್ತರಿಸಿಕೊಂಡು ಕೂಡ ಇತ್ತೀಚಿಗೆ ಗ್ವಾರಿಯನ್ನು ತಯಾರಿಸಿಕೊಳ್ಳುತ್ತಾರೆ.

ಗುದ್ದಿ





ಎತ್ತಿನಗಾಡಿ(ಟ್ರಾಕ್ಟರ್)ಗಳಲ್ಲಿ ಜೋಳದ ಪೈರು, ಭತ್ತ/ನವಣೆ/ರಾಗಿ–ಇವುಗಳ ಪೈರು ಅಥವಾ ಹುಲ್ಲು, ಹತ್ತಿ, ತೊಗರಿ ಮುಂತಾದವುಗಳ ದಂಟು/ಸೊಪ್ಪು ಮುಂತಾದುವನ್ನು ಸಾಗಾಣಿಕೆ ಮಾಡುವ ಸಂದರ್ಭದಲ್ಲಿ ಅವುಗಳನ್ನು ಬಿಗಿಯಾಗಿ ಕಟ್ಟಲು ನೆರವಾಗುವ ಒಂದು ಉಪಕರಣ. ಗುದ್ದಿಗಳಲ್ಲಿ ನಾನಾ ಪ್ರಕಾರಗಳಿವೆ. ಒಂದು ಮನೆ(ರಂಧ್ರ) ಗುದ್ದಿ, ಎರಡು ಮನೆಗುದ್ದಿ, ಮೂರು ಮನೆಗುದ್ದಿ ಮುಂತಾದವುಗಳು ಬಳಕೆಯಾಗುತ್ತವೆ. ಇವುಗಳ ಅಂಚಿನಲ್ಲಿ ಹಗ್ಗವನ್ನು ತೂರಿಸಿ ಹಗ್ಗವನ್ನು ಎಳೆದಾಗ ಹಗ್ಗವು ಬಿಗಿಯಾಗುತ್ತದೆ. ಉದ್ದನೆಯ ಆಕಾರದಲ್ಲೂ ಗುದ್ದಿಗಳಿದ್ದು ಅವುಗಳ ಎರಡು ತುದಿಗಳಲ್ಲೂ ರಂಧ್ರಗಳಿರುತ್ತವೆ. ಆಕಾರ ಯಾವುದಿದ್ದರೂ ಉಪಯೋಗವು ಒಂದೇ ಉದ್ದೇಶದ್ದಾಗಿದೆ. ಗುದ್ದಿಗಳನ್ನು ಸಾಗುವಾನಿ, ಜಾಲಿ, ಹುಣಸೆ, ಮುಂತಾದ ಮರಗಳಿಂದ ತಯಾರಿಸಲಾಗುತ್ತದೆ.



ಗೂಡೆ/ನೀರೆತ್ತುವ ಬುಟ್ಟಿ



ಕೆರೆ, ಕಟ್ಟೆ, ಗುಂಡೆ/ಗುಂಡಿ ಮುಂತಾದ ಸ್ಥಳಗಳಲ್ಲಿ ನಿಂತ ನೀರನ್ನು ಹೊರಹಾಕಲು ಬಳಸುವ ವಿಶಿಷ್ಟವಾದ ಸಾಧನ. ಬಿದಿರಿನ ತೆಳುಸೀಳುಗಳಿಂದ ಹೆಣೆದಿರುವ ಈ ಪರಿಕರವು ದೋಣಿಯ ಆಕಾರದಲ್ಲಿರುತ್ತದೆ. ಇದು ಸುಮಾರು ಮೂರು ಅಡಿ ಅಗಲವಿದ್ದು ಎರಡು ಅಡಿ ಉದ್ದವಿದೆ. ತಳಭಾಗದಿಂದ ಮೇಲ್ಭಾಗಕ್ಕೆ ಹೋದಂತೆಲ್ಲಾ ದೊಡ್ಡದಾಗಿರುತ್ತದೆ. ಕೆರೆ. ಕಟ್ಟೆ, ಬಾವಿಗಳಿಂದ ಅಕ್ಕಪಕ್ಕದ ಹೊಲಗದ್ದೆಗಳಿಗೆ ನೀರೆತ್ತಲು ಬಳಕೆ ಮಾಡುತ್ತಾರೆ. ಗೊಡೆಯು ಬಹಳ ಹಗುರವಾಗಿರುವುದರಿಂದ ನೀರೆತ್ತಲು ಬಹಳ ಸುಲಭವಿರುತ್ತದೆ. ಗೂಡೆಯು ಕುಮರಿ ಬೇಸಾಯವು ವ್ಯಾಪಕವಾಗಿದ್ದಾಗ

ಮತ್ತು ಅಂತರ್ಜಲವು ಧಾರಾಳವಾಗಿದ್ದಾಗ ಹೆಚ್ಚು ಬಳಕೆಯಾಗುತ್ತಿತ್ತು. ಇವೆರಡೂ ಈಗ ಕಡಿಮೆಯಾಗಿರುವುದರಿಂದ ಗೂಡೆ ಕೂಡ ಕಣ್ಮರೆಯಾಗುತ್ತಿದೆ.

ಚಕ್ಕಡಿ ಗಾಲಿ



ಚಕ್ಕಡಿಗಾಲಿಯು ಚಕ್ಕಡಿಯ ಒಂದು ಬಹುಮುಖ್ಯ ಭಾಗ. ವೃತ್ತಾಕಾರದಲ್ಲಿದ್ದು ಚಕ್ಕಡಿಯ ಎರಡು ಪಾರ್ಶ್ವಗಳಲ್ಲಿ ಮಧ್ಯದ ಬಟ್ಟಿ ಮರಕ್ಕೆ ಜೋಡಿಸಲಾಗಿರುತ್ತದೆ. ಗಾಲಿಯ ವ್ಯಾಸ ಐದು ಅಡಿ. ಮಧ್ಯಗುಂಬದ ವ್ಯಾಸ ಒಂದು ಅಡಿ, ಅಗಲ ಒಂದು ಅಡಿ, ಎಲೆ ಪಟ್ಟಿಯ ಅಗಲ ಮೂರು ಇಂಚು. ಹೊರಸುತ್ತಿನ ಅಗಲ ಏಳು ಇಂಚು ಹೊರ ಸುತ್ತಿನಲ್ಲಿ ಕಬ್ಬಿಣದ ಪಟ್ಟಿ ಇದೆ ಮಧ್ಯದ ಗುಂಬದಲ್ಲಿಯೂ ಎರಡೂ ಬದಿಗೆ ಎರಡೆರಡು ಬಳೆಗಳಿರುತ್ತವೆ. ಜಾಲಿಮರದಿಂದ ತಯಾರಿಸಲಾದ ಪಟ್ಟಿಗಳಿಂದ ಚಕ್ಕಡಿಯ ಗಾಲಿ ತಯಾರಿಸಲಾಗುತ್ತದೆ. ಚಕ್ಕಡಿಯು ಕೃಷಿ ಸಮುದಾಯದವರ ಅತ್ಯಗತ್ಯ ಸಲಕರಣೆಯಾಗಿದೆ.

ಚಕ್ಕಡಿ ಗುಂಭ/ಬಂಡಿಗುಂಭ



ಚಕ್ಕಡಿ ಗಾಲಿ ತಯಾರಿಕೆಗೆ ಪೂರಕವಾಗುವ ವಸ್ತು. ಇದು ಸುಮಾರು ಒಂದೂವರೆ ಅಡಿ ಎತ್ತರ ಅರ್ಧ ಅಡಿ ಅಗಲವಿದ್ದು, ವೃತ್ತಾಕಾರದಲ್ಲಿರುತ್ತದೆ. ಇದರ ಹೊರಬದಿಗೆ ಕಬ್ಬಿಣದ ಪಟ್ಟಿಯನ್ನು ಜೋಡಿಸಲಾಗುತ್ತದೆ. ಮಧ್ಯಭಾಗದಲ್ಲಿ ಹನ್ನೆರಡು ರಂಧ್ರಗಳಿರುತ್ತವೆ. ಅವುಗಳಿಗೆ ಸುಮಾರು ಎರಡೂವರೆ ಅಡಿಗಳಷ್ಟು ಉದ್ದದ ಮರದ ಎಲೆ/ಪಟ್ಟಿಗಳನ್ನು ಜೋಡಿಸಲಾಗುತ್ತದೆ. ಗುಂಭದ ಇಬ್ಬದಿಗಳಿಗೆ ಕೀಲುಎಣ್ಣೆ ಹಾಕಿರುತ್ತಾರೆ. ಗುಂಭವನ್ನು ಹೆಚ್ಚಾಗಿ ಜಾಲಿಮರದಿಂದ ತಯಾರಿಸುತ್ತಾರೆ.



ಜಂತಕುಂಟೆ



ಒಕ್ಕಲು ಮಾಡುವ ಸಂದರ್ಭದಲ್ಲಿ ಭತ್ತ, ರಾಗಿ, ಜೋಳ, ಸಜ್ಜೆ ಮುಂತಾದುವುಗಳ ಕಾಳುಗಳು ಬೇರ್ಪಟ್ಟ ಬಳಿಕ ಉಳಿಯುವ ಹುಲ್ಲು ಮತ್ತು ತೆನೆಯ ಅವಶೇಷ (ಕಂಕಿ)ಗಳನ್ನು ಬೇರ್ಪಡಿಸಿ ತೆಗೆಯಲು ಬಳಸುವ ಸಾಧನ. ಇದರ ದಿಂಡಿಗೆ ಸಾಮಾನ್ಯವಾಗಿ ಹಲ್ಲಿನಾಕಾರದ ನಾಲ್ಕು ಅಥವಾ ಆರು ರಚನೆಗಳನ್ನು ಜೋಡಿಸಿರುತ್ತಾರೆ. ಒಂದು ಈಸನ್ನೂ ಜೋಡಿಸುತ್ತಾರೆ. ಜಂತುಕುಂಟೆಯಿಂದ ಪ್ರತ್ಯೇಕಿಸಲ್ಪಟ್ಟ ಹುಲ್ಲು ಮತ್ತು ಕಂಕಿಯ ರಾಶಿಯನ್ನು ಆ ಬಳಿಕ ಅಲ್ಲಿಂದ ಸ್ಥಳಾಂತರಿಸಲಾಗುತ್ತದೆ. ಹೊಲದ 'ಮಡಿ' ಗಳನ್ನು ಸಮತಟ್ಟು ಮಾಡಿಕೊಳ್ಳುವುದಕ್ಕೂ ಜಂತುಕುಂಟೆಯು ಬಳಕೆಯಾಗುತ್ತದೆ. ಜಂತಕುಂಟೆಯನ್ನು ಮರದಿಂದ ತಯಾರಿಸುತ್ತಾರೆ. ಇತ್ತೀಚಿಗೆ ಕಬ್ಬಿಣದ ಜಂತಕುಂಟೆಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ.

ಜತಿಗೆ/ಪಟಗಾಣಿ



ಎತ್ತುಗಳ ಕೊರಳಿಗೆ ಕಟ್ಟುವ ಸಾಧನ. ಗಾಡಿಗೆ/ಉಳುಮೆಗೆ ಹೂಡಿದ ಎತ್ತುಗಳ ಕೊರಳಿಗೆ ಕಟ್ಟಿದ ನೊಗದ ಹಗ್ಗವು ಘರ್ಷಿಸಿ ಕೊರಳಿಗೆ ಗಾಯವಾಗಬಾರದೆಂಬ ಮತ್ತು ನೊಗದಿಂದ ಎತ್ತುಗಳು ಹೊರಕ್ಕೆ ಸರಿಯಬಾದರೆಂಬ ಉದ್ದೇಶದಿಂದ ಇವನ್ನು ಕಟ್ಟುತ್ತಾರೆ. ಇವು ಮಧ್ಯದಲ್ಲಿ ಸುಮಾರು ಏಳರಿಂದ ಎಂಟು ಇಂಚುಗಳಷ್ಟು ಅಗಲವಾಗಿದ್ದು ಸುಮಾರು ಇಪ್ಪತ್ತರಿಂದ ಇಪ್ಪತ್ತನಾಲ್ಕು ಇಂಚು ಉದ್ದವಿರುತ್ತವೆ. ಸರಳವಾದ ಚರ್ಮದ ಪಟ್ಟಿಗಳಿಂದ ತೊಡಗಿ ವಿಶೇಷ ವಿನ್ಯಾಸಗಳಿಂದಲೂ ಅಲಂಕಾರಿಕ ಹೆಣಿಗೆಗಳಿಂದಲೂ ಕೂಡಿದ ಜತಿಗೆಗಳನ್ನು ಚರ್ಮದಿಂದ ನಿರ್ಮಿಸುತ್ತಾರೆ.





ಜತಿಗೆಗಳನ್ನು ಚರ್ಮ, ನೂಲು, ಬೂತಾಳೆ/ಕತ್ತಾಳೆ ಪಟ್ಟಿ ಮುಂತಾದವುಗಳಿಂದ ತಯಾರಿಸುತ್ತಾರೆ. ಜತಿಗೆಯ ಎರಡು ಕೊನೆಗಳಲ್ಲಿಯೂ ರಂಧ್ರ ಮಾಡಿ ಹಗ್ಗಗಳನ್ನು ಜೋಡಿಸಿ ಎತ್ತುಗಳ ಕೊರಳುಗಳಿಗೆ ಕಟ್ಟಲಾಗುತ್ತದೆ.

ತತ್ರಾಣಿ



ಕುಡಿಯುವ ನೀರು ಹಾಕಿಡಲು ಬಳಸುವ ಮಣ್ಣಿನ ಸಾಧನ. ಇದನ್ನು ಹೊಲಗಳಲ್ಲಿ ಕೆಲಸ ಮಾಡುವಾಗ ಕುಡಿಯುವ ನೀರಿನ ಅಗತ್ಯವನ್ನು ಪೂರೈಸಿಕೊಳ್ಳುವುದಕ್ಕೆ ಬಳಸಿಕೊಳ್ಳುತ್ತಾರೆ. ತತ್ರಾಣಿಯು ಚಿಕ್ಕದಾಗಿದ್ದರೆ ಅದರ ಕುತ್ತಿಗೆಯ ಭಾಗಕ್ಕೆ ಹಗ್ಗ ಹಾಕಿ ಒಯ್ಯುಬಹುದು. ದೊಡ್ಡದಾಗಿದ್ದರೆ ಹಾಗೆ ಮಾಡಿದಾಗ ತತ್ರಾಣಿಯ ಮೇಲ್ಭಾಗವು ಕಿತ್ತುಕೊಳ್ಳುವ ಅಪಾಯವಿರುವುದರಿಂದ ಅದರ ಸುತ್ತಲೂ ಲಂಬವಾಗಿ ಹಗ್ಗವನ್ನು ಆಧಾರವಾಗಿ ಹಾಕಿಕೊಳ್ಳಲು ಪುಟ್ಟ ಓಣಿಯಂಥ ರಚನೆ ಇರುತ್ತದೆ.



ತತ್ರಾಣಿಯನ್ನು ಬಗಲಲ್ಲಿ ಹಾಕಿಕೊಂಡು ಒಯ್ಯವುದು ರೂಢಿ. ನೀರು ವ್ಯರ್ಥವಾಗದಂತೆ ಸರಿದುಕೊಳ್ಳಲು ತತ್ರಾಣಿಯ ಬಾಯಿಯ ಬಳಿ ಸಣ್ಣ ಕೊಳವೆಯಥ ರಚನೆ ಇದೆ. ಅದನ್ನು ಮುಚ್ಚಲು ಬೆಣೆ ಕೂಡ ಇರುತ್ತದೆ. ತತ್ರಾಣಿಯು ಆವೆ ಮಣ್ಣಿನಿಂದ ತಯಾರಾಗುವುದರಿಂದ ಅದರಲ್ಲಿ ಹಾಕಿಟ್ಟ ನೀರು ತಂಪಾಗಿರುತ್ತದೆ. ಪ್ಲಾಸ್ಟಿಕ್‌ಕ್ಯಾನ್, ವಾಟರ್‌ಬಾಟಲ್‌ಗಳು ತತ್ರಾಣಿಯ ಸ್ಥಾನವನ್ನು ಆಕ್ರಮಿಸಿರುವುದಾದರೂ ಅದರ ಗುಣಮಟ್ಟವನ್ನು ತಲುಪಲು ಸಾಧ್ಯವಾಗಿಲ್ಲ.

ನೆರಕೋಲು/ಒಕ್ಕಣೆಕೋಲು/ಒಕ್ಕಲುಕೋಲು



ಭತ್ತ, ರಾಗಿ, ಜೋಳ, ಸಜ್ಜೆ, ನವಣೆ ಮುಂತಾದವುಗಳ ಪೈರುಗಳಿಂದ ಧಾನ್ಯಗಳನ್ನು ಪ್ರತ್ಯೇಕಿಸುವ ಕ್ರಿಯೆಯಲ್ಲಿ ಇದು ಒಂದು ಅತ್ಯಗತ್ಯ ಸಲಕರಣೆ. ಈ ಪೈರು/ತೆನೆಗಳನ್ನು ಆಗಾಗ ಅಡಿಮೇಲಾಗಿ ಮಗುಚಿ ಅವುಗಳಿಂದ ಕಾಳುಗಳನ್ನು ಪ್ರತ್ಯೇಕಿಸಲು ಇದು ತುಂಬ ಸಹಾಯಕ. ತೆನೆ ಮತ್ತು ಹುಲ್ಲುಗಳನ್ನು ಒಣಗಿಸುವುದಕ್ಕೂ ಇದನ್ನು ಉಪಯೋಗಿಸುತ್ತಾರೆ. ಭತ್ತ ರಾಗಿ ಮುಂತಾದವುಗಳ ಪೈರುಗಳನ್ನು ಒಕ್ಕಲು ಇದು ಬಳಕೆಯಾಗುವುದರಿಂದ ಇದಕ್ಕೆ ಒಕ್ಕಲುಕೋಲು ಎಂಬ ಹೆಸರು ಬಂದಿದೆ. ಕಿರುಬಿದಿರು ಅಥವಾ ಮರದ ರೆಂಬೆಗಳಿಂದ ಇದನ್ನು ತಯಾರಿಸಲಾಗಿದೆ. ನೇರವಾದ ಕೋಲಿನ ತುದಿಯಲ್ಲಿ ಸ್ವಲ್ಪ ಬಾಗಿದ ಕೋಡಿನ ರಚನೆ ಇರುತ್ತದೆ. ನೆರೆಕೋಲು ಸುಮಾರು ಐದು/ಆರು ಅಡಿ ಉದ್ದವಿರುತ್ತದೆ. ಇದರ ಬಳಕೆ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು. ಕಣ ಒಕ್ಕಲು ಮಾಡುವುದಕ್ಕೆ ಯಂತ್ರಗಳು ಬಂದಿರುವುದರಿಂದ ಒಕ್ಕಣೆ ಕ್ರಿಯೆಯ ಸ್ವರೂಪವು ಈಗ ಬದಲಾಗಿಬಿಟ್ಟಿದೆ.

ನೊಗ



ಎರಡು ಎತ್ತು/ಕೋಣಗಳನ್ನು ಜತೆಯಾಗಿ ಬಳಸಿಕೊಳ್ಳುವಾಗ ಬಳಸುವ ಸಾಧನ. ಕುಸುರಿ ಕೆತ್ತನೆಯಿಂದ ಕೂಡಿದ ಈ ನೊಗದ ಮಧ್ಯಭಾಗದಲ್ಲಿ ಸುಮಾರು ನಾಲ್ಕು-ಐದು ಅಡಿ ಜಾಗದಲ್ಲಿ ಚಿತ್ತಾರದ ಕೆತ್ತನೆಗಳಿವೆ. ಇದನ್ನು ಮುಖ್ಯವಾಗಿ ಆರಾಧನೆ, ಜಾತ್ರೆ, ಉತ್ಸವಗಳಿಗೆ ಹೋಗುವಾಗ ಬಳಸುತ್ತಾರೆ. ಇದು ಸುಮಾರು ಆರು ಅಡಿ ಉದ್ದವಿರುತ್ತದೆ. ಇದರ ಎರಡು ತುದಿಗಳು ಎತ್ತುಗಳ ಹೆಗಲುಗಳ ಮೇಲೆ ಇಡುವುದಕ್ಕೆ ಅನುಕೂಲವಾಗುವಂತೆ ವಿನ್ಯಾಸಗೊಂಡಿವೆ. ತುದಿ ಭಾಗಗಳಲ್ಲಿ ನಿರ್ದಿಷ್ಟ ಅಂತರದಲ್ಲಿ ಒಂದು/ಎರಡು ಸಣ್ಣ ರಂಧ್ರಗಳನ್ನು ಕೊರೆದು ಅವುಗಳ ಮೂಲಕ ಕೊರಳ ಪಟ್ಟಿಯನ್ನು ಜೋಡಿಸಲಾಗುತ್ತದೆ. ನೊಗದ ಮಧ್ಯದಲ್ಲಿ ಪಟ್ಟಿಗಳನ್ನು ಕೊರೆದಿರುತ್ತಾರೆ. ಇದರಿಂದ ಎತ್ತುಗಳಿಗೆ ಪರಸ್ಪರ ಸಮಾನವಾಗಿ ಶ್ರಮವು ಹಂಚಿಹೋಗುತ್ತದೆ.





ನೊಗಗಳಲ್ಲಿ ನಾನಾ ಬಗೆಯವು ಇವೆ. ಇವುಗಳಲ್ಲಿ ಒಂಟೆತ್ತಿನ ನೊಗ, ಎಂಟು ಗೇಣಿನ ನೊಗ, ಹತ್ತು ಗೇಣಿನ ನೊಗ, ಹನ್ನೆರಡು ಗೇಣಿನ ನೊಗ ಮುಂತಾದುವು ಒಂದು ವಿಧದವು. ಎಂಟು ಗೇಣಿನ ನೊಗವು ರೆಂಟೆ ಹೊಡೆಯಲು, ಹತ್ತು ಗೇಣಿನ ನೊಗವು ಕುಂಟೆ ಹೊಡೆಯಲು, ಹನ್ನೆರಡು ಗೇಣಿನ ನೊಗವು ಕುಂಟೆ ಎಡೆಗುಂಟೆ ಹೊಡೆಯಲು ಬಳಕೆಯಾಗುತ್ತವೆ. ಕಬ್ಬಿಣದ ರೆಂಟೆಯನ್ನು ಉಪಯೋಗಿಸುವಾಗ ಕಡಿಮೆ ಉದ್ದದ ನೊಗವನ್ನು ಬಳಸಲಾಗುತ್ತದೆ. ಇದರ ಉದ್ದವು ಸುಮಾರು ನಾಲ್ಕೂವರೆ ಅಡಿ. ಬಂಡಿನೊಗವು ಇನ್ನೊಂದು ಬಗೆಯದು. ಇದು ಎತ್ತಿನ ಗಾಡಿಗಳಿಗೆ ಬಳಕೆಯಾಗುತ್ತದೆ. ಬಂಡಿ ನೊಗಗಳು ಸಾಮಾನ್ಯವಾಗಿ ಇತರ ನೊಗಗಳಂತೆ ಇರುತ್ತವಾದರೂ ವಿಶೇಷ ಸಂದರ್ಭಗಳಲ್ಲಿ (ಮದುವೆ ದಿಬ್ಬಣ, ಜಾತ್ರೆ, ಎತ್ತುಗಳ ಮೆರವಣಿಗೆ ಇತ್ಯಾದಿ) ಬಳಸುವ ನೊಗಗಳು

ಸಾಗುವಾನಿ, ಹೊನ್ನೆ ಮುಂತಾದ ಮರಗಳಿಂದ ತಯಾರಾಗುತ್ತವೆ. ಇಂಥ ನೊಗಗಳಲ್ಲಿ ಬಸವಣ್ಣ, ಸಿಂಹ, ಮುಂತಾದ ಚಿತ್ರಗಳಿವೆ. ನೊಗಗಳ ಕುರಿತಾಗಿ ಜನಪದರಲ್ಲಿ ವಿಶೇಷ ಗೌರವ, ನಂಬಿಕೆ, ವಿಧಿನಿಷೇಧಗಳಿವೆ. ಬಳಕೆಯಾಗುತ್ತಿರುವಾಗ ನೊಗ ಮುರಿದು ಹೋಗಬಾರದೆಂದು ಶ್ರದ್ಧೆ ವಹಿಸಲಾಗುತ್ತದೆ. ನೊಗಗಳನ್ನು ಸಾಮಾನ್ಯವಾಗಿ ಕಾಸರಕನ, ಅರೆಬೇವು, ತೇಗ ಮರಗಳಿಂದ ತಯಾರಿಸುತ್ತಾರೆ. ಅದನ್ನು ತುಳಿಯಬಾರದು, ಉರಿಸಬಾರದು ಎಂಬ ನಂಬಿಕೆಗಳಿವೆ.

ಪಿಕಾಸಿ/ಗುದ್ದಲಿ



ಕೃಷಿ ಹಾಗೂ ಕಾರ್ಮಿಕ ಕೆಲಸಗಳಲ್ಲಿ ಬಳಕೆಯಾಗುವ ಒಂದು ಮುಖ್ಯವಾದ ಸಲಕರಣೆ. ಅಗತ್ಯಕ್ಕೆ ತಕ್ಕಂತೆ ಮಣ್ಣಿನ ಗುಂಡಿ ತೆಗೆಯಲು, ಸಸಿಗಳನ್ನು ಬೇರು ಸಹಿತ ಕೀಳಲು ಹಾಗೂ ನೇಗಿಲಿನಿಂದ ಉಳುಮೆ ಮಾಡಲು ಸಾಧ್ಯವಿಲ್ಲದ ಸ್ಥಳವನ್ನು ಅಗೆಯಲು ಇದನ್ನು ಬಳಸಲಾಗುತ್ತದೆ. ಕಾರ್ಮಿಕರು ಪೈಪ್‌ಲೈನ್‌ಗಳ ಗುಂಡಿ ತೆಗೆಯಲು ಅಧಿಕವಾಗಿ ಬಳಸುತ್ತಾರೆ. ಇದರ ಎರಡು ತುದಿಗಳಲ್ಲೂ ಒಂದು ಇಂಚು ಅಗಲದ ಚೂಪಾದ ತುದಿಗಳಿದ್ದು ಮಧ್ಯಭಾಗದ ರಂಧ್ರದ ಮೂಲಕ ಹಿಡಿಕೆಯನ್ನು ಜೋಡಿಸಲಾಗುತ್ತದೆ. ಮರದ ಹಿಡಿಕೆಯು ಸುಮಾರು ಎರಡು ಇಂಚು ದಪ್ಪ, ಮೂರು ಅಡಿ ಉದ್ದವಿರುತ್ತದೆ. ಕಬ್ಬಿಣದಿಂದ ತಯಾರಿಸಲಾದ ಈ ಸಲಕರಣೆ ಜೆ.ಸಿ.ಬಿ. ಟ್ರ್ಯಾಕ್ಟರ್, ಟಿಲ್ಲರ್‌ಗಳು ಬಳಕೆಗೆ ಬಂದನಂತರವೂ ಇದರ ಬಳಕೆ ಕಡಿಮೆಯಾಗದಿರುವುದು ಇದರ ಅಗತ್ಯದ ಬಗೆಗೆ ಬೆರಳುಮಾಡಿ ಯಂತ್ರಗಳ ಅಸಹಾಯಕ ಸ್ಥಿತಿಯನ್ನು ಅಣುಕಿಸುವಂತಿದೆ.

ಬಂಕ





ಕೃಷಿಗೆ ಬಳಕೆಯಾಗುವ ಮಿಣಿ, ಹಗ್ಗ, ಬಾರುಕೋಲು ಇತ್ಯಾದಿಗಳನ್ನು ಗೆದ್ದಲು ತಿನ್ನದಂತೆ ಮತ್ತು ನಾಯಿಗಳಂಥ ಪ್ರಾಣಿಗಳು ಕಡಿಯದಂತೆ ಎತ್ತರದಲ್ಲಿ ತೂಗುಹಾಕಲು ಈ ಸಾಧನವು ಗ್ರಾಮೀಣರಲ್ಲಿ ಬಳಕೆಯಾಗುತ್ತದೆ. ಬಾಗಿದ ಬಿದಿರಿನಿಂದ ಇದನ್ನು ತಯಾರಿಸಲಾಗುತ್ತದೆ. ಇದೇ ಉದ್ದೇಶಕ್ಕೆ ಅಪರೂಪವಾಗಿ ಜಿಂಕೆಯ ಕೊಂಬುಗಳು ಕೂಡ ಬಳಕೆಯಾಗುತ್ತವೆ.

ಬಂಟ



ಎತ್ತಿನ ಗಾಡಿಯು ನಿಂತಿರುವ ಸಂದರ್ಭಗಳಲ್ಲಿ ಅದರ ಹೊರೆಯು ಎತ್ತುಗಳ ಮೇಲೆ ಬೀಳದಂತೆ ಮಾಡಲು ಈ ಸಾಧನವು ಬಳಕೆಯಾಗುತ್ತದೆ. ಮೂರಾಗಿ ಕವಲೊಡೆದು ಬೆಳೆದ ಮರದ ಕೊಂಬೆಯನ್ನಾಗಲಿ ಮರವನ್ನಾಗಲಿ ನಿರ್ದಿಷ್ಟ ಪ್ರಮಾಣಕ್ಕೆ ತುಂಡರಿಸಿಕೊಂಡು ಇದನ್ನು ತಯಾರು ಮಾಡಲಾಗುತ್ತದೆ. ಸುಮಾರು ಎರಡೂವರೆಯಿಂದ ಮೂರು ಅಡಿಗಳಷ್ಟು ಎತ್ತರವಿರುತ್ತದೆ. ಬಳಸುವಾಗ ಇದನ್ನು ತುದಿಕೆಳಗಾಗಿಟ್ಟು ಅದರ ಮೇಲೆ ಗಾಡಿಯ ಮೂಕಿಯು ನಿಲ್ಲುವಂತೆ ಇರಿಸಿಕೊಳ್ಳುತ್ತಾರೆ. ಅಪರೂಪಕ್ಕೆ ಬಂಟಕ್ಕೆ ಎರಡು ಕಾಲುಗಳಷ್ಟೇ ಇರುವುದೂ ಇದೆ. ಇದನ್ನು ನಾರುಳ್ಳ ಗಟ್ಟಿಮರಗಳಿಂದ ತಯಾರಿಸುತ್ತಾರೆ. ಹಳೆಕಾಲದ ಬಂಡಿಗಾಲಿಗಳ ಮುಂದೆ ಇದನ್ನಿಟ್ಟು, ಅಥವಾ ಹಟ್ಟಿಹಬ್ಬದಲ್ಲಿ ಇಟ್ಟು ಪೂಜೆ ಮಾಡುವುದು ರೂಢಿ.

ಬಂಡಿಗಾಲಿ (ಬೆಲ್ಲದ ಬಂಡಿಗಾಲಿ)



ವಿಶೇಷವಾಗಿ ಆಚರಣೆಯಲ್ಲಿ ಬಳಕೆಯಗುವ ಬಂಡಿಯ ಚಕ್ರಗಳು ಬಂಡಿಯನ್ನು ತಳಿರು, ತೋರಣ, ಬಾಳೆಗಿಡ, ಹೂಗಳಿಂದ ಶೃಂಗರಿಸಿ ಮೆರವಣಿಗೆ ಮಡುತ್ತಾರೆ. ಗಾಲಿಯ ಸುತ್ತಲೂ ಎಡೆಯಿಲ್ಲದೆ ಕಬ್ಬಿಣವನ್ನು ಹೆಚ್ಚು ಬಳಕೆಮಾಡಿ ರಚಿಸಿರುವ ಗಾಲಿ. ಚಕ್ಕಡಿಗಾಲಿಗಳ ಮಧ್ಯ ತುಂಬ ಖಾಲಿ ಎಡೆಗಳಿರುತ್ತವೆ. ಚಕ್ಕಡಿಗಾಲಿಗಿಂತ ಬಂಡಿಗಾಲಿಯು ಹೆಚ್ಚು ಭಾರವೂ ಗಟ್ಟಿಮುಟ್ಟಿನದೂ ಆಗಿರುತ್ತದೆ. ಗಾತ್ರದಲ್ಲಿ ಇದು ಚಕ್ಕಡಿಗಾಲಿಗಿಂತ ಸಣ್ಣದು.

ಬಡಿಮಣೆ/ಕೊಡತಿ/ಕೊಡಚಿ



ಬಡಿಮಣೆ ಕಣದಲ್ಲಿ ಒಕ್ಕಲು ಸಂದರ್ಭದಲ್ಲಿ ಔಡಲ, ಕಡಲೆ ಮುಂತಾದುವನ್ನು ಬಡಿಯುವುದಕ್ಕೆ, ನೆಲಕಡಲೆ (ಬುಡ್ಡಿ) ಮುಂತಾದುವನ್ನು ಒಡೆಯುವುದಕ್ಕೆ ಬಳಸುವ ಸಾಧನ. ಒಂದು ಕೈಯಿಂದ ಸಲೀಸಾಗಿ ಎತ್ತಿ ಬೇಕಷ್ಟೇ ಬಲವಾಗಿ ಬಡಿಯುವುದಕ್ಕೂ ಅನುಕೂಲವಾಗುವಂತೆ ಇದರ ವಿನ್ಯಾಸ ಮತ್ತು ಭಾರವಿದೆ. ಅಪವಾದ ರೂಪದಲ್ಲಿ ನೆಲ/ಗೋಡೆಗಳನ್ನು ತಟ್ಟಿ ಸಮತಟ್ಟು ಮಾಡುವುದಕ್ಕೂ ಇದನ್ನು ಬಳಸಲಾಗುತ್ತದೆ. ಇದರ ಹಿಂಭಾಗದಲ್ಲಿ ಒಂದು ಕೈಯೊಳಗೆ ಅಡಗುವಂತೆ ಹಿಡಿಕೆಯೂ ಅದರ ಮುಂಭಾಗದಲ್ಲಿ ಚಪ್ಪಟೆಯಾದ ಹಲಗೆಯ ಭಾಗವೂ ಇದೆ. ಇದನ್ನು ಹುಣಸೆ, ಕರಿಜಾಲಿ ಮುಂತಾದ ಮರಗಳಿಂದ ತಯಾರಿಸುತ್ತಾರೆ.



ಬ್ಯಾಕೋಲು/ಕವೆಗೋಲು



ಬೆಳೆಗಳ ಸಾಲುಗಳ ಮಧ್ಯ ಬೆಳೆದ ಕಳೆನಾಶದ ಮತ್ತು ಬೆಳೆಗಳ ಬುಡಕ್ಕೆ ಮಣ್ಣು ಹಾಕುವ/ಏರಿಸುವ ಉದ್ದೇಶಕ್ಕೆ ಇದು ಬಳಕೆಯಾಗುತ್ತದೆ. ಎಡೆಕುಂಟೆಹಾಕುವಾಗ ಕುಂಟೆ ಆಚೆ ಈಚೆ ಹೊರಳದಂತೆ ಹಿಡಿದು ಕೊಳ್ಳಲು ಕೂಡ ಬಳಕೆಯಾಗುತ್ತದೆ. ಕೊಕ್ಕೆ ಕೋಲು ಆಂಗ್ಲಭಾಷೆಯ 'Y' ಅಕ್ಷರದ ಆಕಾರ ಹೊಂದಿರುತ್ತದೆ. ಸುಮಾರು ೩ಅಡಿ ಉದ್ದವಿದ್ದು ತುದಿಯಲ್ಲಿ ಕವಲಾಗುತ್ತದೆ. ಭೂಮಿಯನ್ನು ಉಳುಮೆಮಾಡಿ, ಕುಂಟೆ ಹೊಡೆದನಂತರ ಅದರಲ್ಲಿ ಹತ್ತಿ, ಮೆಕ್ಕೆಜೋಳ ಮುಂತಾದ ಬೀಜಗಳನ್ನು ಬಿತ್ತುವುದಕ್ಕಾಗಿ, ಸಸಿಗಳನ್ನು ನಾಟಿ ಮಾಡುವುದಕ್ಕಾಗಿ ಸಾಲು ಹೊಡೆಯುವಾಗ ಎಡೆಕುಂಟೆ ಆಚೆ–ಈಚೆ ಹೋಗದಂತೆ ಮತ್ತು ಸಾಲನ್ನು ಆಳವಾಗಿ ಇಲ್ಲವೇ ಮೇಲಿಂದ ಮೇಲೆ ಉಳುಮೆಮಾಡಲೂ ಕೂಡ ಈ ಬ್ಯಾಕಟ್ಟಿಗೆಯನ್ನು ಬಳಸಲಾಗುವುದು.

ಬಾಯಿಕುಕ್ಕೆ/ಬಾಯಿಕಲ್ಲಿ



ಬೆಳೆಗಳ ಮಧ್ಯೆ ಬೆಳೆದ ಕಳೆನಾಶಕ್ಕಾಗಿ ಎಡೆಕುಂಟೆ ಹೊಡೆಯುವಾಗ, ಒಕ್ಕುಲು ಹಾಕುವಾಗ/ಹಂತಿ ತುಳಿಸುವಾಗ. ಎತ್ತು, ಆಕಳು(ದನ)ಗಳು ಬೆಳೆ, ತೆನೆ, ಹುಲ್ಲು ಇತ್ಯಾದಿಗಳನ್ನು ತಿನ್ನದಂತೆ ತಡೆಯಲು ಅವುಗಳ ಬಾಯಿಗೆ ಕಟ್ಟುವ ಸಾಧನ. ಅಲ್ಲದೆ ಜಾನುವಾರುಗಳ ದೇಹದಲ್ಲಾದ ಗಾಯಗಳಿಗೆ ಲೇಪಿಸಿದ ಔಷಧಿಯನ್ನು ನೆಕ್ಕದಂತೆ ತಡೆಯಲೂ ಸಹ ಅಪರೂಪವಾಗಿ ಬಳಸುತ್ತಾರೆ. ಇವುಗಳ ಬುಡದಲ್ಲಿ ದನ/ಎತ್ತುಗಳ ಕೊಂಬುಗಳಿಗೆ ಕಟ್ಟಲು ಬೇಕಾದಷ್ಟು ಉದ್ದದ ಹಗ್ಗವಿರುತ್ತದೆ. ಇದರಲ್ಲಿ ಭಿನ್ನ ವಿನ್ಯಾಸಗಳಿರುತ್ತವೆ. ಇದನ್ನು ಮುಖ್ಯವಾಗಿ ಬಳ್ಳಿಗಳು, ಹುರಿಹಗ್ಗ, ತೆಳ್ಳನೆಯ(ಸಪುರದ) ತಂತಿ ಇತ್ಯಾದಿಗಳಿಂದ ತಯಾರಿಸುತ್ತಾರೆ.



ಬಾರ್‌ಕೋಲು



ಬಂಡಿಹೊಡೆಯುವಾಗ, ಉಳುಮೆಮಾಡುವಾಗ ಜಾನುವಾರುಗಳನ್ನು ಹೊಡೆಯುವುದಕ್ಕೆ ಹಾಗೂ ಮುಂತಾದ ಸಂದರ್ಭಗಳಲ್ಲಿ ಬಳಸುವ ಸಾಧನ. ಉಳುಮೆ ಸಂದರ್ಭದಲ್ಲಿ ಎತ್ತುಗಳನ್ನು ದಂಡಿಸುವುದಕ್ಕೆ ಬಳಕೆಯಾಗುವುದು ಹೆಚ್ಚು. ಕೋಣ, ಎತ್ತುಗಳ ವೇಗವನ್ನು ಹೆಚ್ಚಿಸಲು, ಅವನ್ನು ನಿಯಂತ್ರಿಸಲು ಇದನ್ನು ಬಳಸುತ್ತಾರೆ. ಸುಮಾರು ಎರಡರಿಂದ ಮೂರು ಅಡಿ ಉದ್ದವಿರುತ್ತದೆ. ಹಿಡಿದುಕೊಳ್ಳಲು ಬಾರ್‌ಕೋಲಿನ ತಳಭಾಗದಲ್ಲಿ ಒಂದು ಗಂಟು ಇರುತ್ತದೆ. ತಳಭಾಗದಿಂದ ತುದಿಭಾಗದವರೆಗೆ ಸಣ್ಣದಾಗಿ ಸಾಗುವಂತೆ ಹೆಣೆಯಲಾಗುತ್ತದೆ. ಇದನ್ನು ಎತ್ತಿನ ಚರ್ಮದಿಂದ ತಯಾರಿಸಲಾಗುತ್ತದೆ. ಎತ್ತುಗಳಿಗೆ ಬಾರ್‌ಕೋಲಿನಿಂದ ಹೊಡೆದಾಗ ಚಟೀರ್ ಎಂಬ ಶಬ್ದ ಹೊರಡುತ್ತದೆ. ಪ್ಲಾಸ್ಟಿಕ ಬಾರ್ ಕೋಲು ಬಂದ ಮೇಲೆ ಚರ್ಮದ ಬಾರ್‌ಕೋಲುಗಳು ಕಣ್ಮರೆಯಾಗಿವೆ.

ಬುಕ್ಕ/ಶೆಡ್ಡಿಬುಕ್ಕ





ಕೂರಿಗೆ/ರಂಟೆಯಿಂದ ಹೊಲವನ್ನು ಉಳುಮೆ ಮಾಡುತ್ತಿರುವಾಗಲೇ ಕಾಳುಗಳನ್ನು ಬಿತ್ತನೆ ಮಾಡುವುದು ಉತ್ತರ ಕರ್ನಾಟಕದ ಬೇಸಾಯ ಪದ್ಧತಿ. ಅಕ್ಕಡಿ ಕಾಳುಗಳನ್ನು ಬಿತ್ತನೆ ಮಾಡಲು ಬಳಸುವ ಬಟ್ಟಲಿನ ಆಕಾರದ ಉಪಕರಣವೇ ಶೆಡ್ಡಿಬುಕ್ಕ, ಅಕ್ಕಡಿ ಕಾಳುಗಳಾದ ಮಡಿಕೆ, ತೊಗರಿ ಅಲಸಂದಿ, ಅವರೆ ಮುಂತಾದವು ಗಳನ್ನು ಬಿತ್ತನೆ ಮಾಡಲು ಬಳಸುವುದರಿಂದ ಇದಕ್ಕೆ ಅಕ್ಕಡಿ ಬುಕ್ಕವೆಂದು ಹೆಸರು ಮುಖ್ಯ ಬೆಳೆಗಳ ಜತೆಗೆ





ಮಿಶ್ರಬೆಳೆಯಾಗಿ ಹಾಗೂ ಮುಖ್ಯಬೆಳೆಯ ಆರನೆಯ/ಒಂಬತ್ತನೆಯ ಸಾಲಿಗೆ ಬಿತ್ತನೆ ಮಾಡುವ ಕಾಳುಗಳನ್ನು ಅಕ್ಕಡಿ ಕಾಳುಗಳೆಂದು ಕರೆಯುತ್ತಾರೆ. ಬುಕ್ಕವು ಸುಮಾರು ನಾಲ್ಕರಿಂದ ಐದು ಇಂಚು ಸುತ್ತಳತೆ, ಸುಮಾರು ೪ ಅಡಿ ಎತ್ತರ ಉಳ್ಳದ್ದಾಗಿದೆ. ಅಂತೆಯೇ ಗೊಬ್ಬರವನ್ನು



ಕೊಡಲು ಕೂಡ ಅಕ್ಕಡಿಬುಕ್ಕಗಳು ಬಳಕೆಯಾಗುತ್ತವೆ. ಇವು ಸಹಜವಾಗಿಯೇ ಅಧಿಕ ಸುತ್ತಳತೆಯದಾಗಿರುತ್ತವೆ. ಬಿದಿರು, ಪೊಳ್ಳುಮರಗಳಿಂದ ಇವನ್ನು ತಯಾರಿಸಿಕೊಳ್ಳಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಜಲವಾಹಿನಿ ಕೊಳವೆ (Pipe) ಗಳನ್ನು ಇದಕ್ಕಾಗಿ ಬಳಸಿಕೊಳ್ಳುವುದರಿಂದ ಪಾರಂಪರಿಕ ಅಕ್ಕಡಿ ಬುಕ್ಕಗಳ ಬಳಕೆ ಅಪರೂಪವಾಗಿದೆ.

ಬೆಲ್ಲದ ಬಂಡಿಗಾಲಿ



ಬೆಲ್ಲವನ್ನು ತಯಾರಿಮಾಡುವ ಸ್ಥಳವನ್ನು ಆಲೆಮನೆ ಎಂದು ಕರೆಯುತ್ತಾರೆ. ಈ ಆಲೆಮನೆಗಳಲ್ಲಿ ತಯಾರಾದ ಬೆಲ್ಲವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲು ಬಂಡಿಯನ್ನು ಬಳಸಲಾಗುತ್ತದೆ. ಆ ಬಂಡಿಯ ಗಾಲಿ ಸುಮಾರು ಹದಿನೈದು ಇಂಚು ವ್ಯಾಸ, ಒಂದು ಇಂಚು ದಪ್ಪವಿರುತ್ತದೆ. ನಡುಭಾಗದಲ್ಲಿ ಬಂಡಿಯ ಅಚ್ಚಿಗೆ ಜೋಡಿಸಿಕೊಳ್ಳಲು ಐದು ಇಂಚು ವ್ಯಾಸದ ರಂಧ್ರವಿರುತ್ತದೆ. ಜಾಲಿಮರದಿಂದ ಗಾಲಿಯನ್ನು ತಯಾರಿಸಿತ್ತಾರೆ. ಆಲೆ ಮನೆಗಳಲ್ಲಿ ಬಂಡಿಯ ಬಳಕೆಯು ಅಪರೂಪವಾಗುತ್ತಿರುವದರಿಂದ ಈ ವಸ್ತುವಿನ ಬಳಕೆಯೂ ಸಹಜವಾಗಿ ಅಪರೂಪವಾಗಿದೆ. ಇತ್ತೀಚಿನ ದಿನಗಳಲ್ಲಿ ಇಂತಹ ಗಾಲಿಗಳು ಸಿಕ್ಕರೆ ಮಕ್ಕಳು ಆಟಕ್ಕಾಗಿ ಬಳಸುತ್ತಿದ್ದಾರೆ.

ಮಚ್ಚು



ಗಿಡ, ಮರ, ಹಣ್ಣು, ಕಾಯಿ, ಇನ್ನಿತರ ಗಟ್ಟಿ ಪದಾರ್ಥಗಳನ್ನು ಕತ್ತರಿಸಲು ಬಳಸುವ ಸಾಧನ. ಇದರಿಂದ ಮಾಂಸ, ಮೂಳೆಯಂತಹ ಪದಾರ್ಥಗಳನ್ನೂ ಕತ್ತರಿಸಬಹುದು. ಕೋಳಿ, ಕುರಿ, ಮೇಕೆ ಹಾಗೂ ಇನ್ನಿತರ ಪ್ರಾಣಿಗಳನ್ನು ಬಲಿ ನೀಡಲು ಸಹ ಇದನ್ನು ಬಳಸುತ್ತಾರೆ. ಮಚ್ಚನ್ನು ರಕ್ಷಣಾ ಆಯುಧವನ್ನಾಗಿ ರೈತರು ಹೊಲಗಳು ಮತ್ತು ಅರಣ್ಯಗಳಲ್ಲಿ ಬಳಸುತ್ತಾರೆ. ಮನೆ ಬಳಕೆಯಲ್ಲಿ ತೆಂಗಿನಕಾಯಿ ಸಿಪ್ಪೆ ಸುಲಿಯಲು ಇದು ಉಪಯೋಗವಾಗುತ್ತದೆ. ಒಂದೇ ಕಬ್ಬಿಣದ ಪಟ್ಟಿಯಿಂದ ಇದನ್ನು ತಯಾರಿಸುತ್ತಾರೆ. ಕಬ್ಬಿಣದ ರಾಡಿನ ಹಿಂಭಾಗವನ್ನು ಕೊಳವೆಯಾಕಾರದ ಹಿಡಕೆಯನ್ನಾಗಿಸಿ ಕೊಳ್ಳಲಾಗುತ್ತದೆ. ಇದರ ಒಂದು ಅಂಚು ಅರ್ಧ ಇಂಚು ದಪ್ಪವಿದ್ದರೆ ಮತ್ತೊಂದು ಅಂಚು ಹರಿತವಾಗಿರುತ್ತದೆ. ಪ್ರಮುಖವಾಗಿ ಕೃಷಿ ಕೆಲಸಗಳಲ್ಲಿ ತುಂಬ ಬಳಕೆಯಾಗುವ ಮಚ್ಚು ಕಬ್ಬಿಣದಿಂದ ತಯಾರಾಗುತ್ತದೆ.

ಮುಂದೂಟಿ/ನೊಗಸುತ್ತು



ನೊಗ ಮತ್ತು ರಂಟೆ/ಕುಂಟೆ ಮುಂತಾದವುಗಳನ್ನು ಬಂಧಿಸಲು ಬಳಕೆಯಾಗುವ ವಸ್ತು. ಇದು ಸುಮಾರು ನಾಲ್ಕರಿಂದ ಐದು ಅಡಿ ಉದ್ದವಿರುತ್ತದೆ. ರೈತರು ಉಳುಮೆ ಮಾಡುವಾಗ ಇದನ್ನು ವಿಶಿಷ್ಟ ವಿನ್ಯಾಸದಲ್ಲಿ ನೊಗಕ್ಕೆ ಪೋಣಿಸುತ್ತಾರೆ. ಕುಂಟೆ, ನೇಗಿಲು, ಕೂರಿಗೆಗಳ ಈಸುಗಳನ್ನು ನೊಗಕ್ಕೆ ಬಂಧಿಸಲು ಕೂಡ ಇದನ್ನು ಬಳಸುತ್ತಾರೆ. ಇದರ ರಚನೆ ಮತ್ತು ವಿನ್ಯಾಸಗಳಲ್ಲಿ ವ್ಯತ್ಯಾಸಗಳಿವೆ. ಇವುಗಳನ್ನು ಚರ್ಮ, ನೂಲು, ರಕ್ಕಸಬಳ್ಳಿ, ತೊಂಡೆಬಳ್ಳಿ ಮುಂತಾದವುಗಳ ನಾರುಗಳಿಂದ ಹೆಣೆದುಕೊಳುತ್ತಾರೆ. ಇದು ಸುಮಾರು ಎರಡು ಇಂಚು ದಪ್ಪವಿರುತ್ತದೆ. ನೈಲಾನ್ ಹಗ್ಗಗಳ ಬಳಕೆ ಬಂದನಂತರ ಪಾರಂಪರಿಕ ಮುಂದೂಟಿಗಳ ಬಳಕೆ ಕಡಿಮೆಯಾಗಿದೆ. ಸೈಕಲ್ ಟಯರುಗಳನ್ನು ಬಳಸಿಯೂ ಮುಂದೂಟಿಗಳನ್ನು ಮಾಡಿಕೊಳ್ಳುತ್ತಾರೆ.

ಮೇಳಿ (ರಂಟಿ ಮೇಳಿ)



ರಂಟೆಹೊಡೆಯುವ ಸಂದರ್ಭದಲ್ಲಿ 'ಮಡಕೆ'ಯ[redacted] ಮೇಲ್ಭಾಗಕ್ಕೆ ಇದನ್ನು ಜೋಡಿಸಿಕೊಳ್ಳಲಾಗುತ್ತದೆ. ಸುಮಾರು ಮೂರೂವರೆ ಅಡಿ ಉದ್ದ ನಾಲ್ಕು ಇಂಚು ದಪ್ಪವಿರುತ್ತದೆ. ಕೆಳಭಾಗದಲ್ಲಿ ಸ್ವಲ್ಪ ಚಪ್ಪಟೆಯಾಗಿದ್ದು ಈಸುಗೆ ಸಿಕ್ಕಿಸಲು (ಜೋಡಿಸಲು) ರಂಧ್ರ ಹೊಂದಿರುತ್ತದೆ. ಇದರ ಸ್ವಲ್ಪ ಕೆಳಗೆ, ಮೇಲ್ತುದಿಯ ಹಿಂಭಾಗದಲ್ಲಿ ಸುಮಾರು ಹತ್ತು ಇಂಚು ಉಳ್ಳ ಬೆಣೆಯನ್ನು (ಗೂಟ) ಹಿಡಿಯಾಗಿ ಜೋಡಿಸಲಾಗುತ್ತದೆ. ಇದಿಲ್ಲದೆ ರಂಟೆಯ ರಚನೆ ಪೂರ್ತಿಯಾಗುವುದಿಲ್ಲ. ರಂಟೆ ಹೊಡೆಯುವಾಗ ಕೂಡ ಇದು ಮುಖ್ಯ ನಿಯಂತ್ರಕವಾಗಿ ಕೆಲಸ ಮಾಡುತ್ತದೆ. ಇವುಗಳ ಗಾತ್ರದಲ್ಲಿ ವಿಭಿನ್ನತೆಯನ್ನು ಕಾಣಬಹುದು. ಹೆಚ್ಚಾಗಿ ಜಾಲಿ, ಬೇವು ಮುಂತಾದ ಮರಗಳಿಂದ ತಯಾರಿಸುತ್ತಾರೆ.

ರಂಟೆ/ಮಡಕೆ



ಉಳುಮೆ ಮಾಡಲು ಬಳಸುವ ಸಾಧನ. ನೊಗಕ್ಕೆ ರಂಟೆಯನ್ನು ಕಟ್ಟಿಕೊಂಡು ಎತ್ತುಗಳ ಸಹಾಯದಿಂದ ರಂಟೆ ಹೊಡೆಯಲಾಗುತ್ತದೆ. ನೊಗಕ್ಕೆ ರಂಟೆ ಕಟ್ಟಿಕೊಳ್ಳಲು ಮಿಣಿ, ಹಗ್ಗ ಹಾಗೂ ಕೊರಳಪಟ್ಟಿ, ಪಟಗಾಣಿ ಇವುಗಳನ್ನು ಬಳಸಲಾಗುತ್ತದೆ. ರಂಟೆಯಲ್ಲಿ ಈಸು, ಮಡಕೆ, ಮೇಳಿ, ಜಿಗಳಿಗಳೆಂಬ ಭಾಗಗಳಿವೆ. ಕಾಳುಗಳನ್ನು ಬಿತ್ತನೆ ಮಾಡುವುದಕ್ಕಾಗಿ ಸಾಲುಗಳನ್ನು ಮಾಡಲು, ಪೈರಿನ ಬುಡಕ್ಕೆ ಮಣ್ಣು ಏರಿಸಲು/ಒಬ್ಬೆ ಏರಿಸಲು, ಬೆಳೆಯ ಸಾಲುಗಳ ಮಧ್ಯೆ ನೀರು ಹಾಯಿಸುವ ಹರಿಓಣಿಗಳನ್ನು ಮಾಡಲು ರಂಟೆಯು ಬಳಕೆಯಾಗುತ್ತದ. ಉತ್ತರ ಕರ್ನಾಟಕದಲ್ಲಿ ಇದರ ಬಳಕೆ ಹೆಚ್ಚು. ಬೇವು, ಕರಿಜಾಲಿ ಮುಂತಾದ ಮರಗಳಿಂದ ರಂಟೆಯನ್ನು ತಯಾರಿಸುತ್ತಾರೆ. ಕಬ್ಬಿಣದ ನೇಗಿಲು ಮತ್ತು ಟ್ರಾಕ್ಟರ್‌ನೇಗಿಲು ಬಳಕೆಗೆ ಬಂದ ನಂತರ ಇದರ ಬಳಕೆ ಕಡಿಮೆಯಾಗಿದೆ.

ರೋಣಗಲ್ಲು/ರೋಲ್‌ಗುಂಡು



ಕಣದಲ್ಲಿ ಒಕ್ಕಣೆ ಮಾಡುವ ಸಂದರ್ಭದಲ್ಲಿ ಬಳಸುವ ಒಂದು ಬಹುಮುಖ್ಯ ಪರಿಕರ. ಸುಮಾರು ಮೂರು ಅಡಿ ಉದ್ದ ಐದಡಿ ಸುತ್ತಳತೆ ಇರುತ್ತದೆ. ರೋಣುಗಲ್ಲಿನ ಎರಡು ತುದಿಗಳ ಮಧ್ಯ ಭಾಗದಲ್ಲಿ ಸುಮಾರು ಮೂರು ಇಂಚು ಸುತ್ತಳತೆಯ ರಂಧ್ರಗಳಿರುತ್ತದೆ. ಈ ರಂಧ್ರಗಳಿಗೆ ಕಬ್ಬಿಣದ/ಮರದ ಒಂದೊಂದು ಗೂಟವನ್ನು ಸೇರಿಸಿರುತ್ತಾರೆ. ಮರದ ಎರಡು ದಿಂಡುಗಳನ್ನು ಎತ್ತಿನ ನೊಗಕ್ಕೆ ಕಟ್ಟಿ ರೋಣುಗಲ್ಲಿನ ಗೂಟಗಳಿಗೆ ಕಟ್ಟುತ್ತಾರೆ. ಕಣದಲ್ಲಿ ರಾಗಿ, ಜೋಳ ಮುಂತಾದ ತೆನೆಗಳನ್ನು ಹಾಕಿ, ಅದರ ಮೇಲೆ ರೋಣುಗಲ್ಲನ್ನು ಉರುಳಿಸುತ್ತಾರೆ. ವಿಭಿನ್ನ ಗಾತ್ರದ ರೋಣುಗಲ್ಲುಗಳು ಬಳಕೆಯಲ್ಲಿವೆ. ಇತ್ತೀಚೆಗೆ ಯಂತ್ರಗಳಿಂದ ಒಕ್ಕಣೆ ಮಾಡುವುದರಿಂದ ಈ ರೋಣುಗಲ್ಲುಗಳು ಕಣ್ಮರೆಯಾಗುತ್ತಿವೆ. ಈ ಸಾಧನವನ್ನು ಬಿಳಿ ಮತ್ತು ಕಪ್ಪುಕಲ್ಲಿನಿಂದ ತಯಾರಿಸುತ್ತಾರೆ. ಭತ್ತಒಕ್ಕಣೆ ಹಾಗೂ ರಾಗಿಒಕ್ಕಣೆ ಮಾಡುವ ರೋಣಗಲ್ಲುಗಳ ವಿನ್ಯಾಸ ಹಾಗೂ ಆಕರಗಳು ಬೇರೆ ಬೇರೆ ಯಾಗಿರುತ್ತವೆ.

ವರ್ಜಿಮಿಣಿ



ಬಂಡಿಯಲ್ಲಿ ಹಾಕಿದ/ಹೇರಿದ ಹೇರುಗಳನ್ನು ಬಿಗಿಯಾಗಿ ಬಂಧಿಸಲು ಬಳಸುವ ಚರ್ಮದ ಹಗ್ಗ. ಇದು ಸುಮಾರು ಮೂವತ್ತು ಅಡಿ ಉದ್ದ ಇರುತ್ತದೆ. ಸುಮಾರು ಎರಡು ಇಂಚು ದಪ್ಪವಿರುತ್ತದೆ. ಎತ್ತಿನಗಾಡಿಯಲ್ಲಿ ಹುಲ್ಲು, ಸೊಪ್ಪೆ(ಜೋಳದ ದಂಟು), ಸೌದೆ, ದವಸ ಧಾನ್ಯಗಳ ಮೂಟೆಗಳನ್ನು ಹೇರಿಕೊಂಡು ಹೋಗುವಾಗ ಅವು ಕೆಳಗೆ ಬೀಳದಂತೆ ಬಿಗಿಯಾಗಿ ಕಟ್ಟಲು ಇದನ್ನು ಬಳಸುತ್ತಾರೆ. ಅಲ್ಲದೆ ಹೊನ್ನತ್ತೆಮ್ಮ ದೇವಿಯ ಬಂಡಿಯನ್ನು ಹೂಡುವಾಗ ಕೂಡ ಈ ಹಗ್ಗ ಬಳಕೆಯಾಗುತ್ತದೆ. ಹಿಂದೆ ಸ್ವರಾಜ್ಯ ಬಾವುಟ ಹಾರಿಸಲು ಚಕ್ಕಡಿ ಬಂಡಿಗೆ ಆನೆಯನ್ನು ಕಟ್ಟಿಕೊಂಡು ಹೋಗುವಾಗ ಕೂಡ ಇಂಥ ಮಿಣಿ ಬಳಕೆಯಾಗಿತ್ತೆಂದು ತಿಳಿದುಬರುತ್ತದೆ. ಇದನ್ನು ಎಮ್ಮೆ ಚರ್ಮದಿಂದ(ಮಾದಾರರು) ತಯಾರಿಸುತ್ತಾರೆ. ಇದು ಹೆಚ್ಚು ಬಾಳಿಕೆ ಬರುವಂತೆ ಇರಿಸಿಕೊಳ್ಳಲು ಔಡಲ ಎಣ್ಣೆಯನ್ನು ಲೇಪಿಸುತ್ತಾರೆ.

ಹತ್ತಿರಾಟೆ



ಹತ್ತಿಯಿಂದ ಕಾಳುಗಳನ್ನು ಬಿಡಿಸಲು ಬಳಸುವ ಸಾಧನ. ಇದು ಆಯತಾಕಾರದಲ್ಲಿದೆ. ಸುಮಾರು ಒಂದೂವರೆ ಅಡಿ ಉದ್ದ ಒಂದು ಅಡಿ ಅಗಲವಿದೆ. ನಾಲ್ಕು ಬದಿಗಳಲ್ಲೂ ಪರಸ್ಪರ ಬಲನೀಡುವ ರೀತಿಯಲ್ಲಿ ಸುಮಾರು ಎರಡೂವರೆ ಇಂಚು ಅಗಲದ ರೀಪುಗಳನ್ನು ಜೋಡಿಸಲಾಗಿದೆ. ಚೌಕಟ್ಟಿನ ಮಧ್ಯೆ ಎರಡು ಕಟ್ಟಿಗೆಯ ಸರಳುಗಳಿದ್ದು ಇವುಗಳನ್ನು ಬಳಸಿ ಹರಳೆ ಮತ್ತು ಬೀಜವನ್ನು ಬೇರ್ಪಡಿಸಲಾಗುತ್ತದೆ. ಇದನ್ನು ನೇಕಾರರು ಬಳಸುತ್ತಾರೆ.

ಹರ್ತಿಕುಡ/ಕುಂಟೆಕುಡ



ನೇಗಿಲು ಅಥವಾ ರಂಟೆ ಹೊಡೆದ ಭೂಮಿಯನ್ನು ಹರಗಲು (ಸಮತಟ್ಟು ಮಾಡಲು), ನಾಟಿ/ಬಿತ್ತನೆ ಮಾಡದ ಹೊಲ/ಗದ್ದೆಗಳಲ್ಲಿ ಬೆಳೆದ ಕಳೆಯನ್ನು ನಾಶಮಾಡಲು, ಕುಂಟೆಗೆ ಬಳಸುವ ಲೋಹದ ಸಾಧನ. ಕುಂಟೆಯ ದಿಂಡಿನ ಕೆಳಗೆ ಇರುವ ತಾಳುಗಳಿಗೆ ಈ ವಸ್ತುವನ್ನು ಜೋಡಿಸಿಕೊಳ್ಳಲಾಗುವುದು. ಹರಗುವುದರಿಂದ ಹೊಲದಲ್ಲಿನ ಗಿಡಗಂಟಿಗಳು ನಾಶವಾಗುತ್ತವೆ. ಇದು ಸುಮಾರು ನಾಲ್ಕು ಇಂಚು ಅಗಲ ಎರಡೂವರೆ ಅಡಿ ಉದ್ದ ಹೊಂದಿರುತ್ತದೆ. ಕುಂಟೆ ತಾಳುಗಳಿಗೆ ಸಿಕ್ಕಿಸಲು ಕುಡದ ಎರಡು ತುದಿಗಳಲ್ಲಿ ಕೊಕ್ಕೆ ರೂಪದ ಒಂದೂವರೆ ಇಂಚಷ್ಟು ಉದ್ದವುಳ್ಳ ಉಪಕರಣ ಇರುತ್ತದೆ. ಇದರ ಪ್ಲೇಟಿನ ಕೊನೆಯ ತುದಿ ಹರಿತವಾಗಿದೆ. ತುದಿ ಮೊಂಡಾದರೆ ಪುನಃ ಕಮ್ಮಾರರ ಬಳಿ ಕಾಯಿಸಿ ತಟ್ಟಿಸಿ ಹರಿತಮಾಡಿಸುತ್ತಾರೆ. ಇವುಗಳ ಸ್ವರೂಪದಲ್ಲಿ ವ್ಯತ್ಯಾಸಗಳಿವೆ.

ಹಾಳೆ ಕೊರೆಯುವ ಕುಡುಗೋಲು

ಹೊಲಗಳಲ್ಲಿನ ಬದುಗಳು ಮತ್ತು ಹುಲ್ಲನ್ನು ಕೊಯ್ಯಲು ಬಳಸಿಕೊಳ್ಳುವ ಉಪಕರಣ. ಇದು ಸು. ಎರಡು ಅಡಿಯಿಂದ ಐದು ಅಡಿಗಳಷ್ಟು ಉದ್ದವಿರುವ ಅಲಗು. ಅಲಗು ಸು.ಎರಡರಿಂದ ಮೂರು ಇಂಚು ಅಗಲವಿರುತ್ತದೆ, ಸಂಪೂರ್ಣ ಬಾಗಿರುತ್ತದೆ. ಅದರ ಒಳಭಾಗದ ಮಧ್ಯದಲ್ಲಿ ಹಲ್ಲುಗಳಿರುತ್ತವೆ. ಬುಡದಲ್ಲಿ ಸು. ಐದು/ಆರು ಇಂಚು ಉದ್ದದ, ನಾಲ್ಕು ಇಂಚು ಸುತ್ತಳತೆಯ ಮರದ ಹಿಡಿಕೆ ಇರುತ್ತದೆ.





ಹೊಲಗಳ ಬದುಗಳ ಬದಿಗಳನ್ನು ಹುಲ್ಲು ಸಮೇತ ಕೊಯ್ಯಲು, ಇದರ ಮುಖ್ಯ ಬಳಕೆ. ಹೊಲಗಳಲ್ಲಿನ ಬದುಗಳಿಂದ ನೀರು ಹರಿದು ಹೋಗುವಂತೆ ಮಾಡಲು ಈ ಉಪಕರಣದಿಂದ ಬದುವನ್ನು ಅಡ್ಡಕ್ಕೆ ಕೊಯ್ಯಲೂ ಸಹ ಇದನ್ನು ಬಳಸಿಕೊಳ್ಳಲಾಗುತ್ತದೆ. ಅಂತೆಯೇ ಬದುಗಳ ಬದಿಯಲ್ಲಿ ಎತ್ತರಕ್ಕೆ ಬೆಳೆದ ಹುಲ್ಲನ್ನು(ಒಬ್ಬನು ಬಾಗಿಸಿ ಹಿಡಿದುಕೊಂಡಾಗ) ಈ ಕುಡುಗೋಲಿನಿಂದ ಕೊಯ್ಯವುದಕ್ಕೂ ಬಳಕೆಯಾಗುತ್ತದೆ. ದೊಡ್ಡ ಕುಡಗೋಲುಗಳಾದರೆ ಕುಡಗೋಲಿನ

ಮುಂಭಾಗಕ್ಕೆ ಹಗ್ಗ ಕಟ್ಟಿಕೊಂಡು ಒಬ್ಬ ಹಿಡಿಕೆಯನ್ನು ಮತ್ತೊಬ್ಬ ಹಗ್ಗವನ್ನು ಹಿಡಿದು ಗರಗಸದಂತೆ ಬದುಗಳನ್ನು ಕತ್ತರಿಸುವ ವಿಧಾನಕ್ಕೂ ಬಳಸುತ್ತಾರೆ.

ಹೆಂಟೆಕೊಡತಿ



ಗದ್ದೆ, ಹೊಲಗಳಲ್ಲಿನ ಮಣ್ಣಿನ ಹೆಂಟೆಗಳನ್ನು ಹೊಡೆದು ಪುಡಿ ಮಾಡಲು ಬಳಸುವ ಮರದ ಸಾಧನ. ಇದರಲ್ಲಿ ಈಸು ಮತ್ತು ದಿಂಡು ಎಂಬ ಎರಡು ಭಾಗಗಳಿವೆ. ದಿಂಡು ಸುಮಾರು ಮುಕ್ಕಾಲರಿಂದ ಒಂದು ಅಡಿಯಷ್ಟು ಉದ್ದ, ಸುಮಾರು ಅರ್ಧ ಅಡಿ ಎತ್ತರದ್ದಾಗಿದೆ. ಈಸು ಸುಮಾರು ಐದು ಅಡಿ ಉದ್ದವಿದೆ. ಔಡಲ, ಅಲಸಂದೆ, ರಾಗಿ ಮುಂತಾದವುಗಳ ಕಾಳುಗಳನ್ನು ಬೇರ್ಪಡಿಸಿಕೊಳ್ಳುವುದಕ್ಕೂ ಹೆಂಟೆ ಕೊಡತಿಯು ಉಪಯೋಗವಾಗುತ್ತದೆ. ದಿಂಡನ್ನು ಸಾಗುವಾನಿಯಾಗಲಿ ಇತರ ನಾರುಜಾತಿಯ, ಭಾರವುಳ್ಳ, ಗಟ್ಟಿ ಮರಗಳಿಂದಾಗಲಿ ತಯಾರಿಸಲಾಗುತ್ತದೆ.

ಮನೆಬಳಕೆ

ಈ ವಿಭಾಗದಲ್ಲಿ ಸಂಗ್ರಹಿತವಾದ ಗೃಹೋಪಯೋಗಿ ವಸ್ತುಗಳಲ್ಲಿ ವಿಶಿಷ್ಟವಾದ ಕೆಲವನ್ನು ಆಯ್ದು ಅವುಗಳನ್ನು ಪರಿಚಯಿಸಿದೆ. ಇವು ಗ್ರಾಮೀಣ ಪ್ರದೇಶದ ಜನರು ಮನೆಗಳಲ್ಲಿ ತಮ್ಮ ದೈನಂದಿನ ಬಳಕೆಗೆ ಬಳಸುವ ವಸ್ತುಗಳು. ಮಣ್ಣು, ಶಿಲೆ, ಲೋಹ, ಬೆತ್ತ, ಬಿದಿರು, ಹಗ್ಗ ಇತ್ಯಾದಿ ಪ್ರಾಕೃತಿಕ ವಸ್ತುಗಳಿಂದ ನಿರ್ಮಿಸಿಕೊಂಡ ಸಾಮಗ್ರಿಗಳು ಇಲ್ಲಿವೆ. ಕೆಲವು ವಸ್ತುಗಳ ಬಳಕೆ ಈಗ ಬೇರೆ ಬೇರೆ ಕಾರಣಗಳಿಗೆ ತಪ್ಪಿಹೋಗಿದೆ. ಎತ್ತಿನಕೊಂಬಿನ ನಶ್ಯದಡಬ್ಬಿ, ಔಂಗುಗಡಿಗೆ, ಮಾನಿಚೇರಿ ಟೋಪಿಯಂಥ ಅಪೂರ್ವ ವಸ್ತುಗಳೂ ನಮ್ಮ ವಸ್ತುಸಂಗ್ರಹಾಲಯದಲ್ಲಿವೆ. ಅವುಗಳ ವಿವರಗಳು ಕೂಡ ಇಲ್ಲಿ ಸೇರ್ಪಡೆಯಾಗಿವೆ.

ಮನೆಬಳಕೆ

ಅಡಕತ್/ಅಡಕತ್ತರಿ





ಅಡಿಕೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಕತ್ತರಿಸಿಕೊಳ್ಳುವುದಕ್ಕೆ ಬಳಸುವ ಸಾಧನ. ಸಾಮಾನ್ಯವಾಗಿ ಇದರ ಮುಂಭಾಗವು ಗಿಳಿ ಕೊಕ್ಕಿನ ಆಕಾರದಲ್ಲಿರುತ್ತದೆ. ಅಡಕತ್‌ಗಳ ಗಾತ್ರದಲ್ಲಿ ಮತ್ತು ವಿನ್ಯಾಸಗಳಲ್ಲಿ ವ್ಯತ್ಯಾಸವಿದೆ. ಸುಮಾರು ಹದಿನೈದು ಇಂಚು ಉದ್ದ ನಾಲ್ಕು ಇಂಚು ಅಗಲದಿಂದ ಸುಮಾರು ನಾಲ್ಕು ಇಂಚು ಉದ್ದ ಒಂದು ಇಂಚು ಅಗಲದ ಅಡಕತ್‌ಗಳಿವೆ. ದೊಡ್ಡ ಗಾತ್ರದ ಅಡಕತ್‌ಗಳನ್ನು ಅಂಗಡಿಗಳಲ್ಲಿ ವ್ಯಾಪಾರಸ್ಥರು ಹೆಚ್ಚಾಗಿ ಬಳಸುತ್ತಾರೆ. ಅಡಕತ್‌ನ ಬುಡದಲ್ಲಿನ ಸರಳವಾದ ದಪ್ಪ ತಗಡಿನ ಎರಡು ತುದಿಗಳು ಹಿಡಿಕೆಯಾಗಿ ಬಳಕೆಯಾಗುತ್ತದೆ. ಇದೇ ತಗಡಿನಲ್ಲಿ ಹಿಡಿಯನ್ನುಳಿದಂತೆ ಉಳಿದ ಭಾಗವು ಅಲಗನ್ನು ಹೊಂದಿದೆ. ಇದು ಮತ್ತು ಬುಡದಲ್ಲಿ ಹಿಡಕೆಯಾಗಿರುವ ಇನ್ನೊಂದು ತಗಡು ಅಲಗಿನಡಿಗೆ ಸಮಾಂತರವಾಗಿ ಮುಂದುವರೆದು ಕೆಳಭಾಗದ ಅಲಗಿನ ತಗಡಿನೊಂದಿಗೆ ಮೊಳೆಯೊಂದರಿಂದ ಜೋಡಣೆಯಾಗುತ್ತದೆ.



ಅತ್ಯಂತ ಚಿಕ್ಕ ಅಡಕತ್‌ಗಳನ್ನು ವ್ಯಕ್ತಿಗಳು ತಮ್ಮ ಜೇಬಿನಲ್ಲಿ ಇಟ್ಟುಕೊಳ್ಳುತ್ತಾರೆ. ಉತ್ತರ ಕರ್ನಾಟಕದ ಕುರಿಗಾರರಲ್ಲಿ ಅಡಕತ್‌ನ್ನು ಕಿಸೆಯಲ್ಲಿಟ್ಟುಕೊಂಡು ಬಳಸುವ ರೂಢಿಯಿದೆ. ಮನೆಯಲ್ಲೂ ಇದನ್ನು ಬಳಸುತ್ತಾರೆ. ಮನೆಯಲ್ಲಿ ಸುಮಾರು ಐದರಿಂದ ಆರು ಇಂಚು ಉದ್ದದ ಸುಮಾರು ಎರಡರಿಂದ ಮೂರು ಇಂಚು ಅಗಲದ ಅಡಕತ್‌ಗಳನ್ನು ಬಳಸುತ್ತಾರೆ. ಅಡಕತನ್ನು ಕಬ್ಬಿಣ, ಕಂಚುಗಳಿಂದ ತಯಾರಿಸುತ್ತಾರೆ.



ಅಡಿಕೆ ಬುಟ್ಟಿ



ಅಡಿಕೆ ಬೆಳೆಯುವ, ಎಲೆ ಅಡಿಕೆ ಹಾಕಿಕೊಳ್ಳುವವರು ಅಡಿಕೆಯನ್ನು ಸಂಗ್ರಹಿಸಿಟ್ಟುಕೊಳ್ಳಲು ಬಳಸುವ ಬುಟ್ಟಿ. ಇದು ಸುಮಾರು ೧೦ ಇಂಚು ಎತ್ತರವಾಗಿದ್ದು, ಸುಮಾರು ೪ ಇಂಚು ವ್ಯಾಸವನ್ನು ಹೊಂದಿರುತ್ತದೆ. ಇದನ್ನು ಬೆತ್ತದ ಸಣ್ಣ ಸಣ್ಣ ಅಚ್ಚೆ (ಸೀಳು)ಯಿಂದ ಹೆಣೆದಿರುತ್ತಾರೆ. ಅಡಿಕೆಯನ್ನು ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿ ತಮ್ಮ ಉಪಯೋಗಕ್ಕೆ ಎಷ್ಟು ಬೇಕೋ ಅಷ್ಟನ್ನು ಸಂಗ್ರಹಿಸಿಕೊಳ್ಳುತ್ತಾರೆ. ಅಲ್ಲದೆ ಬೆತ್ತದ ಬುಟ್ಟಿಯಲ್ಲಿ ಎಲೆ, ಸುಣ್ಣದ ಡಬ್ಬಿ, ಕೊಬ್ಬರಿ ಚೂರು, ಏಲಕ್ಕಿ, ಲಾವಂಗ ಹಾಗೂ ತಂಬಾಕು ಇತ್ಯಾದಿ ತಾಂಬೂಲದ ಪರಿಕರಗಳು ಇರುತ್ತವೆ.

ಅಡ್ಡಣಿಗೆ



ಊಟ ಮಾಡುವಾಗ ತಟ್ಟೆಯನ್ನು ಅಗತ್ಯ ಎತ್ತರದಲ್ಲಿ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಬಳಸಿಕೊಳ್ಳುವ ಸಾಧನ. ಮರದಿಂದ ನಿರ್ಮಾಣಗೊಂಡ





ಅಡ್ಡಣಿಗೆಯು ತಟ್ಟೆ ಇಟ್ಟುಕೊಳ್ಳುವ ಭಾಗದಲ್ಲಿ ವೃತ್ತಾಕಾರದ/ಚೌಕಾಕಾರದ ಹಲಿಗೆಯನ್ನು ಹೊಂದಿರುತ್ತದೆ. ಕಬ್ಬಿಣದ್ದಾದರೆ ವೃತ್ತಾಕಾರದ ಪಟ್ಟಿಯನ್ನಷ್ಟೇ ಹೊಂದಿರುತ್ತದೆ. ಎರಡರಲ್ಲೂ ಮೂರು ಮೂರು ಕಾಲುಗಳಿರುತ್ತವೆ. ಅಡ್ಡಣಿಗೆಯನ್ನು ಮನೆಯ ಯಜಮಾನನಿಗಷ್ಟೆ ಬಳಸಿಕೊಳ್ಳುವ ಆದ್ಯತೆ ಇತ್ತು. ಈಗ ಅಡ್ಡಣಿಗೆಯ ಬಳಕೆ ಅಪರೂಪವಾಗಿದೆ.

ಅರನಾಳಿಗೆ/ಹೊರನಳಿಗೆ

ಮಾಳಿಗೆ ಮನೆಗಳ ಮಾಡಿನ ಮಳೆ ನೀರು ಎಲ್ಲಾ ಕಡೆ ಕೆಳಗಿಳಿಯದೆ ನಿರ್ದಿಷ್ಟವಾದ ಸ್ಥಳದಲ್ಲಷ್ಟೇ ಕೆಳಬೀಳುವಂತೆ



ಜೋಡಿಸುವ ನಳಿಗೆ. ಇದು ಸುಮಾರು ಎರಡು ಅಡಿಯಿಂದ ನಾಲ್ಕು ಅಡಿ ಉದ್ದ ಮತ್ತು ಸುಮಾರು ಐದು ಇಂಚು ಸುತ್ತಳತೆ ಇರುತ್ತದೆ.. ಇದು ಹೆಸರೇ ಹೇಳುವಂತೆ ಒಳಗೆ ಟೊಳ್ಳಾದ ಕೊಳವೆ/ನಳಿಗೆ. ಇದನ್ನು ಆವೆಮಣ್ಣಿನಿಂದ ನಿರ್ಮಿಸಿ, ಸುಟ್ಟು ಬಳಸಿಕೊಳ್ಳುತ್ತಾರೆ. ಪ್ಲಾಸ್ಟಿಕ್‌ಪೈಪುಗಳು ಬಂದ ಬಳಿಕ ಇವು ಕಣ್ಮರೆಯಾಗುತ್ತಿವೆ. ಈಗಿನ ಕಾಂಕ್ರೀಟ್ ಮನೆಗಳಲ್ಲಿ ಇದರ ಬಳಕೆ ಇಲ್ಲದ್ದು ಮರೆಯಾಗಲು ಇನ್ನೊಂದು ಕಾರಣವಾಗಿದೆ.



ಇಲಿಬೋನು/ಬಲೆ



ಪೈರು ಧಾನ್ಯಗಳನ್ನು ತಿಂದು ಹಾಳುಮಾಡುವ ಇಲಿಗಳನ್ನು ಹಿಡಿಯಲು ಗ್ರಾಮೀಣರು ಆವಿಷ್ಕರಿಸಿಕೊಂಡಿರುವ ಒಂದು ಉಪಕರಣ. ಇದು ನೀಳವಾದ ಒಂದು ಪುಟ್ಟ ಬುಟ್ಟಿಯಾಕಾರದಲ್ಲಿದ್ದು ಅದರ ಮುಂಭಾಗದಲ್ಲಷ್ಟೆ ತೆರೆದುಕೊಂಡಿರುತ್ತದೆ. ಇದು ಫಕ್ಕನೆ ಮುಚ್ಚಿಕೊಳ್ಳುವಂತೆ ಸೂಕ್ತ ಪ್ರಮಾಣದ ಲೋಹದ ತಗಡೊಂದನ್ನು ನಿರ್ಮಿಸಿ ಅದರ ಒಂದು ಬದಿಯನ್ನು ಕಡ್ಡಿ/ಸ್ಪ್ರಿಂಗ್ ಒಂದರಿಂದ ಜೋಡಿಸಿ ಬೋನಿನ ಒಳಭಾಗದಲ್ಲಿ ಎಳೆದು ಕಟ್ಟಲಾಗುತ್ತದೆ. ಇಲಿಯು ಬೋನಿನೊಳಗೆ ಪ್ರವೇಶಿಸಿ ಒಂದಿಷ್ಟು ಅತ್ತಿತ್ತ ಸರಿದಾಡಿದಾಗ ಈ ಜೋಡಣೆಯು ತಪ್ಪಿಹೋಗಿ ಬೋನಿನ ಬಾಗಿಲು ಒಮ್ಮೆಲೆ ಮುಚ್ಚುಕೊಳ್ಳುತ್ತದೆ. ಇಲಿಯು ಒಳಗೆ ಬಂದಿಯಾಗುತ್ತದೆ.



ಈರುಳ್ಳಿ ಬುಟ್ಟಿ



ಈರುಳ್ಳಿ ಸಂಗ್ರಹಿಸಿಡಲು ಬಳಸುವ ಸಾಧನ. ಇದು ಸುಮಾರು ಒಂದು ಅಡಿ ಎತ್ತರವಿದ್ದು, ಒಂದು ಅಡಿ ವ್ಯಾಸವನ್ನು ಹೊಂದಿರುತ್ತದೆ. ಈ ಬುಟ್ಟಿಯನ್ನು ಕಬ್ಬಿಣದ ಸಣ್ಣ ಸಣ್ಣ ತಂತಿಗಳಿಂದ ಹೆಣೆಯಲಾಗಿರುತ್ತದೆ. ಬುಟ್ಟಿಯ ಮೇಲ್ಭಾಗದಲ್ಲಿ ಮುಚ್ಚಲು ಒಂದು ಮುಚ್ಚಳವಿದ್ದು, ಹಿಡಿದುಕೊಳ್ಳಲು ತಂತಿ ಹಿಡಿಕೆ ಇರುತ್ತದೆ. ಬುಟ್ಟಿಯಲ್ಲಿಟ್ಟಿರುವ ಈರುಳ್ಳಿಗೆ ಗಾಳಿ ಆಡುವುದರಿಂದ ಈರುಳ್ಳಿಯು ದೀರ್ಘಕಾಲ ಬಾಳಿಕೆ ಬರುತ್ತವೆ. ಪ್ಲಾಸ್ಟಿಕ್ ಬುಟ್ಟಿಗಳು ಬಂದ ಮೇಲೆ ಇದರ ಬಳಕೆ ಕಡಿಮೆಯಾಗುತ್ತಿದೆ.

ಈಳಿಗೆ ಮಣೆ/ ಮೆಟ್ಟುಕತ್ತಿ





ತರಕಾರಿ, ಮಾಂಸ ಮುಂತಾದುವನ್ನು ಹೆಚ್ಚಲು ಇದು ಬಳಕೆಯಾಗುತ್ತದೆ. ಇದರಲ್ಲಿ ಲೋಹದ ಈಳಿಗೆ ಮತ್ತು ಅದನ್ನು ಜೋಡಿಸಲು ಮರದ ಹಲಗೆ/ಮಣೆಯು ಇರುತ್ತದೆ. ಕೆಲವೊಂದು



ಈಳಿಗೆಯ ತುದಿಗೆ ತೆಂಗಿನ ಕಾಯಿ, ಸೌತೆ ಮುಂತಾದುವನ್ನು ತುರಿಯಲು 'ತುರಿ' ಯನ್ನೂ ನಿರ್ಮಿಸಿರುತ್ತಾರೆ. ಈಳಿಗೆಯ ಗಾತ್ರಕ್ಕೆ ತಕ್ಕಹಾಗೆ ಮಣೆಯಗಾತ್ರವೂ ವ್ಯತ್ಯಾಸವಾಗುತ್ತದೆ. ಈಳಿಗೆ ಮಣೆಗಳಲ್ಲಿ ಈ ಗಾತ್ರ ಮತ್ತು ವಿನ್ಯಾಸಗಳು ಬೇರೆ ಬೇರೆಯಿರುತ್ತವೆ.

ಊರುಗೋಲು



ವಯಸ್ಸಾದವರು ಸ್ವತಂತ್ರವಾಗಿ ನಡೆಯಲು ಸಾಧ್ಯವಾಗದೇ ಹೋದಾಗ ಸಹಾಯಕ್ಕಾಗಿ ಬಳಸುವ ಮರದ ದೊಣ್ಣೆ. ಇದು ಸುಮಾರು ಮೂರರಿಂದ ಐದು ಅಡಿಗಳಷ್ಟು ಎತ್ತರವಿದೆ. ಎರಡು ಇಂಚಿನಿಂದ ಮೂರು ಇಂಚಿನಷ್ಟು ಸುತ್ತಳತೆ ಇದೆ. ಊರುಗೋಲುಗಳನ್ನು ಬೆತ್ತ, ಬಿದಿರು, ಜೋಣಿಗಿಡದಂಥ ಗಿಡಗಳ ಕೋಲುಗಳಿಂದ ಮಾಡಲಾಗುತ್ತದೆ. ಕೋಲಿನ ತುದಿಗೆ ಕಬ್ಬಿಣದ ಬಳೆಯನ್ನು ಜೋಡಿಸಿರುತ್ತಾರೆ. ಶ್ರೀಮಂತರು ಕಂಚಿನ ಬಳೆಗಳನ್ನು ಹಾಕಿರುವುದೂ ಉಂಟು. ಹಿಡಿಯ ಮೇಲ್ಭಾಗದಲ್ಲಿ ಬಾಗಿದ ಹಿಡಿಕೆ ನಾಗರ ಹೆಡೆಯಾಕಾರದಲ್ಲಿಯೂ ಇರುತ್ತದೆ.

ಊರುಗೋಲು ಕತ್ತಿ



ಪಾಳೇಗಾರರು, ಊರಿನ ಗೌಡರು, ಶ್ರೀಮಂತರು, ತಮ್ಮ ಆತ್ಮರಕ್ಷಣೆಗಾಗಿ ಬಳಸುವ ಸಾಧನ. ಇದು ಸುಮಾರು ಎರಡರಿಂದ ಎರಡೂವರೆ ಅಡಿ ಉದ್ದವಿದ್ದು ಅರ್ಧ ಅಡಿ ಮರದ ಹಿಡಿಕೆ ಹೊಂದಿರುತ್ತದೆ. ಕತ್ತಿಯ ಎರಡು ಪಾರ್ಶ್ವಗಳೂ ಹರಿತವಾಗಿರುತ್ತವೆ, ತುದಿ ಚೂಪಾಗಿರುತ್ತದೆ. ಇದನ್ನು ಕಣ್ಣಿಗೆ ಕಾಣದ ಹಾಗೆ ಊರುಗೋಲ ಒಳಗಡೆ ಅಳವಡಿಸಿರುತ್ತಾರೆ. ಅವಶ್ಯಕತೆ ಬಂದಾಗ ಮಾತ್ರ ಅದನ್ನು ಹೊರಗೆ ತೆಗೆಯುತ್ತಾರೆ. ಕಳ್ಳಕಾಕರು, ದರೋಡೆಕೋರರು, ಶತ್ರುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ಮಾತ್ರ ಈ ಕತ್ತಿಯನ್ನು ಬಳಸುತ್ತಾರೆ. ನೋಡುಗರಿಗೆ ಕೇವಲ ಆಸರೆ, ದರ್ಪ, ಘನತೆಗಾಗಿ ಈ ಊರುಗೋಲನ್ನು ಬಳಸುತ್ತಾರೆಂದು ತೋರಿದರೂ ಇದರ ಒಳಗಡೆ ಕತ್ತಿ ಇರುತ್ತದೆ.

ಎತ್ತಿನ ಕೊಂಬಿನ ನಶ್ಯಡಬ್ಬಿ



ನಶ್ಯ ಹಾಕುವವರು ನಶ್ಯ ತುಂಬಿಟ್ಟುಕೊಳ್ಳಲು ಬಳಸುವ ಡಬ್ಬಿ. ಇದು ಸುಮಾರು ೨.೪ ಇಂಚು ಎತ್ತರವಿದೆ. ಸುಮಾರು ೩ ಇಂಚು ವ್ಯಾಸವನ್ನು ಹೊಂದಿದೆ. ಎತ್ತಿನ ಕೊಂಬಿನಿಂದ ತಯಾರಿಸಿದ್ದಾರೆ. ಎತ್ತಿನ ಕೊಂಬಿನ ತುದಿಭಾಗವು ಇದಕ್ಕೆ ಉಪಯೋಗವಾಗಿದೆ. ಇತ್ತೀಚೆಗೆ ಲೋಹದ ನಶ್ಯ ಡಬ್ಬಿಗಳು ಬಂದ ಮೇಲೆ ಇದರ ಬಳಕೆ ಬಹಳ ಕಡಿಮೆಯಾಗಿದೆ. ವಿವಿಧ ರೂಪದ ನಶ್ಯ ಡಬ್ಬಿಗಳನ್ನು ನೋಡಬಹುದಾಗಿದೆ. ಬೆಳ್ಳಿ, ಸಿಲ್ವರ್, ತೆಂಗಿನ ಚಿಪ್ಪು,ಗಾಜು, ಪ್ಲಾಸ್ಟಿಕ್‌ಗಳಿಂದ ಕೂಡ ನಶ್ಯಡಬ್ಬಗಳುಳ್ಳ ನಿರ್ಮಾಣಗೊಳ್ಳುತ್ತವೆ.

ಎರ್ಮ್ಮಳ್ಳು/ಹೆರೆಮಣೆ



ತೆಂಗಿನ ಕಾಯಿ ತುರಿಯಲು ಬಳಸುವ ವಸ್ತು. ತೆಂಗಿನಕಾಯಿಯನ್ನು ಇದರ ಹಲ್ಲುಗಳಿಂದ ತುರಿದಾಗ ಕಾಯಿ ಸಣ್ಣ ಸಣ್ಣ ತುರಿಗಳಾಗಿ ಕೆಳಗೆ ಉದುರುತ್ತದೆ. ಕಬ್ಬಿಣದ ತಗಡನ್ನು ಅಲ್ಲಿಲ್ಲಿ ಮೇಲ್ಮುಖವಾಗಿ ಬಾಗಿಸಿ ಸಾಲು ಸಾಲು ಹಲ್ಲುಗಳು ಬರುವಂತೆ ರಚನೆ ಮಾಡಿರುತ್ತಾರೆ. (ಇದು ಇತ್ತೀಚಿನ ಚೌಕ/ಆಯತಾಕಾರದ ತುರಿಮಣೆಗಳಲ್ಲಿರುತ್ತವೆ). ಆಯತಾಕಾರದಲ್ಲಿರುವ ಇದರ ಮಣೆಯ ನಾಲ್ಕು ಮೂಲೆಗಳು ಭದ್ರವಾಗಿ ನೆಲದಲ್ಲಿ ಸ್ಥಾಪಿತವಾಗಲು ಕಾಲುಗಳನ್ನು ಜೋಡಿಸುತ್ತಾರೆ. ಉದ್ದಗಲಗಳು 6x4 ಇಂಚು, ಎರಡು ಇಂಚು ಎತ್ತರ ಇರುತ್ತವೆ.



ಒನಕೆ



ಭತ್ತ ಕುಟ್ಟಿ ಅಕ್ಕಿ ಮಾಡುವುದಕ್ಕೆ ಬಳಕೆಯಾಗುತ್ತಿದ್ದ ಪಾರಂಪರಿಕ ಸಾಧನ. ಅಂತೆಯೇ ಜೋಳ, ನವಣೆ, ಗೋಧಿ ಮುಂತಾದ ಧಾನ್ಯಗಳ ಹೊಟ್ಟನ್ನು ತೆಗೆಯುವುದಕ್ಕೂ ಒನಕೆಯು ಬಳಕೆಯಾಗುತ್ತದೆ. ಇದು ಸುಮಾರು ನಾಲ್ಕರಿಂದ ಐದು ಅಡಿಗಳಷ್ಟು ಎತ್ತರವಾಗಿದ್ದು ಸುಮಾರು ಐದರಿಂದ ಎಂಟು ಇಂಚು ಸುತ್ತಳತೆಯುಳ್ಳದ್ದಾಗಿರುತ್ತದೆ. ಇದರ ತಳಭಾಗದಲ್ಲಿ ಕಬ್ಬಿಣದ ಬಳೆಯನ್ನು ಹಾಕಲಾಗುತ್ತದೆ. ಒರಳಿನಲ್ಲಿ ಧಾನ್ಯಗಳನ್ನು ಹಾಕಿ ನಿಂತುಕೊಂಡು ಒನಕೆಯಿಂದ ಕುಟ್ಟುತ್ತಾರೆ. ಒನಕೆಯನ್ನು ಸಾಗುವಾನಿ, ಬಾರಿ, ಬೋರೆ, ತಾಳೆ, ಜಾಲಿ ಮುಂತಾದ ಭಾರವಾದ ಮತ್ತು ಗಟ್ಟಿಮುಟ್ಟಾದ ಮರಗಳಿಂದ ತಯಾರಿಸುತ್ತಾರೆ.



ಒನಕೆಯಿಂದ ಕುಟ್ಟುವ ಒರಳಿನ ಬಳಿ ಒಬ್ಬಾಕೆ ಕುಳಿತುಕೊಂಡು ಮತ್ತು ಇನ್ನೊಬ್ಬಾಕೆ ನಿಂತುಕೊಂಡು (ಒಂದೇ ಒನಕೆಯಿಂದ) ಕುಟ್ಟಬಹುದು. ಇದಲ್ಲದೆ ಪ್ರತ್ಯೇಕ ಒನಕೆಗಳನ್ನು ತೆಗೆದುಕೊಂಡು ಒಂದು ಒರಳಲ್ಲಿ ಇಬ್ಬರು ಅಥವಾ ಕೆಲವೊಮ್ಮೆ ಮೂರು ಮಂದಿ ಕೂಡಾ ಕುಟ್ಟಬಹುದು. ಇದಕ್ಕೆ ಸ್ವಲ್ಪ ಪರಿಣತಿಯ ಅಗತ್ಯವಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಒಬ್ಬ ವ್ಯಕ್ತಿಯೇ ಕುಳಿತುಕೊಂಡು ಕುಟ್ಟುವುದಕ್ಕೆ ಕಿರು ಒನಕೆಗಳು ಬಳಕೆಯಾಗುತ್ತವೆ. ಇದು ಸುಮಾರು ಮೂರು ಅಡಿಗಳಷ್ಟು ಎತ್ತರವಿರುತ್ತದೆ ಅಷ್ಟೆ.

ಒರಳುಕಲ್ಲು



ಜೋಳದ ಜರಗು, ಭತ್ತ, ಗೋಧಿ ಮುಂತಾದುವನ್ನು ಕುಟ್ಟುವುದಕ್ಕೂ ಚಟ್ನಿ, ಹಿಂಡಿ(ಖಾರ ತಿಂಡಿ) ಇತ್ಯಾದಿಗಳನ್ನು ಅರೆಯುವುದಕ್ಕೂ ಬೇಳೆ ಹೂರಣವನ್ನು ರುಬ್ಬುವುದಕ್ಕೂ ಬಳಸುವ ಸಾಧನ. ಒರಳುಕಲ್ಲನ್ನು ಮನೆಯಲ್ಲಿ ಮುಖ್ಯವಾಗಿ ಎರಡು ಕಡೆಗಳಲ್ಲಿ ಸ್ಥಾಪಿಸುತ್ತಾರೆ–ಅಡುಗೆಮನೆ ಮತ್ತು ಪಡಸಾಲೆಗಳಲ್ಲಿ. ಅಡುಗೆ ಮನೆಯಲ್ಲಿನ ಒರಳು ಕಲ್ಲಿನಲ್ಲಿ ಹೆಚ್ಚಾಗಿ ರುಬ್ಬುವ ಮತ್ತು ಅರೆಯುವ ಕ್ರಿಯೆಗಳು ನಡೆಯುತ್ತವೆ. ಪಡಸಾಲೆ ಅಥವಾ ಕಟ್ಟೆಗಳ ಮೇಲೆ ಇಟ್ಟಿರುವ ಒರಳು ಕಲ್ಲು ಕುಟ್ಟುವುದಕ್ಕೆ ಬಳಕೆಯಾಗುತ್ತದೆ. ಸಾಮಾನ್ಯವಾಗಿ ರುಬ್ಬುವ ಮತ್ತು ಅರೆಯುವ ಒರಳು ಕಲ್ಲುಗಳು ಸುಮಾರು ಆರು ಇಂಚು ವ್ಯಾಸ ಮತ್ತು ಸುಮಾರು ಆರರಿಂದ ಎಂಟು ಇಂಚು ಆಳವಿರುತ್ತವೆ. ರುಬ್ಬುಗುಂಡುಗಳನ್ನು ಮತ್ತು ಮಡ್ಡೊನಕೆ/ಮೊಂಡೊನಕೆಯನ್ನು ಬಳಸಿಕೊಂಡು ರುಬ್ಬುವ, ಅರೆಯುವ ಕೆಲಸ ಮಾಡುತ್ತಾರೆ.



ಒರಳು ಕಲ್ಲಿನ ಬಾಯಿಯು ಸುಮಾರು ಅರ್ಧ ಅಡಿ ವ್ಯಾಸವಿರುತ್ತದೆ. ಒನಕೆಗಳನ್ನು ಬಳಸಿ ಇದರಲ್ಲಿ ಕುಟ್ಟುವ ಕೆಲಸವನ್ನು ಮಾಡುತ್ತಾರೆ. ಒರಳು ಕಲ್ಲಿಗೆ ಸಂಬಂಧಿಸಿ ಅದರ ಮೇಲೆ ಕುಳಿತುಕೊಳ್ಳಬಾರದು, ಅದನ್ನು ತುಳಿಯಬಾರದು ಮುಂತಾದ ನಿಷೇಧಗಳಿವೆ. ಮದುವೆಯಂಥ ಸಮಾರಂಭಗಳಲ್ಲಿ ಇದನ್ನು ಪೂಜಿಸುವ ಸಂಪ್ರದಾಯ ಜನಪದರಲ್ಲಿದೆ. ಒರಳು ಕಲ್ಲುಗಳನ್ನು ಕಗ್ಗಲ್ಲಿಂದಲೇ ತಯಾರಿಸಲಾಗುತ್ತದೆ. ರೈಸ್ ಮಿಲ್ಲುಗಳು, ಮಿಕ್ಸಿ–ಗ್ರೈಂಡರ್‌ಗಳು ಬಂದ ಬಳಿಕ ಒರಳು ಕಲ್ಲುಗಳ ಬಳಕೆ ಮೂಲೆಗುಂಪಾಗತೊಡಗಿವೆ. ಆದರೆ ಆಚರಣೆಯಲ್ಲಿ ಉಳಿದಿದೆ. ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿನ ಪ್ರತಿ ಮನೆಗಳ ಅಡುಗೆಮನೆಯ ಮೂಲೆಯಲ್ಲಿ ಒರಳು ಕಲ್ಲನ್ನು ಪ್ರತಿಷ್ಠಾಪಿಸುದನ್ನು ಈಗಲೂ ಕಾಣಬಹುದು.

ಔಂಗು ಗಡಿಗೆ



'ಅರಿವಿ' ಎಂಬ ಸಿಹಿ ಪದಾರ್ಥ ಮಾಡುವಾಗ (ಗೋಧಿ ಹಿಟ್ಟು, ಬೆಲ್ಲವನ್ನು ನೀರಿನಿಂದ ಮಿಶ್ರಣ ಮಾಡಿ ಸುಮಾರು ಮೂರು ನಾಲ್ಕು ತಾಸು ಬಿಡುತ್ತಾರೆ) ಬಳಕೆಯಾಗುವ ವಸ್ತು. ಇದು ಸುಮಾರು ಹದಿನಾಲ್ಕು ಇಂಚು ಎತ್ತರ, ಕಂಠದ ಬಾಯಿಯ ವ್ಯಾಸ ಒಂಭತ್ತು ಇಂಚು, ನಡು ಪಟ್ಟಿಯ ಸುತ್ತಳತೆ ಐವತ್ತು ನಾಲ್ಕು ಇಂಚು ಇರುತ್ತದೆ. ಕಂಠದ ಕೆಳಭಾಗದಲ್ಲಿ ಸುತ್ತಲೂ ನಾಲ್ಕು ಕಡೆ ಬಾಣ, ಸಂಕಲನ ಚಿಹ್ನೆ, ತ್ರಿಭುಜ, ವೃತ್ತಾಕಾರದ ರಂಧ್ರಗಳಿರುತ್ತವೆ. ಈ ಔಂಗು ಗಡಿಗೆಯನ್ನು ಒಲೆ ಮೇಲೆ ಬೋರಲು ಹಾಕಿ ತೆಳುವಾದ ಬಟ್ಟೆಯನ್ನು ಅದರ ಮೇಲೆ ಹಾಸಿ ನೆನಸಿಟ್ಟು, ಲಟ್ಟಿಸಿದ 'ಅರಿವಿ'ಯನ್ನು ಸುಡಲು ಈ ಗಡಿಗೆಯನ್ನು ಬಳಸುತ್ತಾರೆ.

ಕರ್ಜಿಕಾಯಿ ಒತ್ತೊಳ್ಳು



ಹಬ್ಬ ಹರಿದಿನ, ಜಾತ್ರೆ, ಉತ್ಸವ, ಮದುವೆ, ಮುಂಜಿಗಳಲ್ಲಿ ಕರ್ಜಿಕಾಯಿ ಮಾಡಲು ಬಳಸುವ ಪರಿಕರ. ಈ ಸಾಧನವು ಸುಮಾರು ಒಂದು ಅಡಿ ಉದ್ದವಿರುತ್ತದೆ. ಇದರ ಮಧ್ಯಭಾಗದಲ್ಲಿ ಸುಮಾರು ಐದು ಇಂಚಿನ ಸುಮಾರು ಅರ್ಧಚಂದ್ರಾಕಾರದ ಎರಡು ಒರಳುಗಳಿವೆ. ಇದರ ಎರಡು ಕಡೆಗೂ ಕಬ್ಬಿಣದ ಕೊಂಡಿಗಳನ್ನು ಹಾಕಿದ್ದಾರೆ. ಒರಳಿನ ಅರ್ಧವೃತ್ತಾಕಾರ ಭಾಗದಲ್ಲಿ ಗರಗಸದ ಮೊಟ್ಟ ಹಲ್ಲುಗಳಂತೆ ಕಬ್ಬಿಣದ ತಗಡನ್ನು ಜೋಡಿಸಿರುತ್ತಾರೆ. ಹೆಚ್ಚಾಗಿ ವಿಶೇಷ ದಿನಗಳಲ್ಲಿ ವಿಶೇಷ ಅಡುಗೆ ಮಾಡುವ ಸಂದರ್ಭದಲ್ಲಿ ಈ ಸಲಕರಣೆಯನ್ನು ಬಳಸುತ್ತಾರೆ. ಮರ, ಲೋಹ, ಪ್ಲಾಸ್ಟಿಕ್‌ನಿಂದ ಇದನ್ನು ತಯಾರಿಸುತ್ತಾರೆ.



ಕಡಬತ್ ಕಲ್ಲು

ಕಾರ, ಹಿಂಡಿ (ಒಂದು ತೆರನ ಚಟ್ನಿ) ಮಸಾಲೆ, ಕಷಾಯಹುಡಿ, ಚಟ್ನಿ ಮುಂತಾದವುಗಳನ್ನು ಅರೆಯಲು, ಕುಟ್ಟಲು ಬಳಸುವ ಪರಿಕರ. ಇದು ಒಂದು ಚಿಕ್ಕ ದೋಣಿಯಾಕಾರದಲ್ಲಿರುತ್ತದೆ. ಒಂದು ಅಡಿ ಉದ್ದ ಅರ್ಧ ಅಡಿ ಎತ್ತರವಿರುತ್ತದೆ. ಕಡಬತ್ ಕಲ್ಲುಗಳಲ್ಲಿ ವ್ಯತ್ಯಾಸಗಳಿವೆ. ಈ ಕಲ್ಲಿನಿಂದ ಮಸಾಲೆ ಅರೆದು ಸಾಂಬಾರು ಮಾಡಿದರೆ ಬಹಳ ರುಚಿಯಾಗಿರುತ್ತದೆ ಹಾಗೂ ಹೆಚ್ಚುಕಾಲ ಕೆಡದಂತೆ



ಇರತುತದೆ ಎನ್ನವುದು ಜನಪದರ ಅನುಭವ. ಗ್ರಾಮೀಣ ಪ್ರದೇಶದ ಜನರು ಇಂದಿಗೂ ಈ ಕಲ್ಲಿನಲ್ಲೇ ಕಾರ, ಮಸಾಲೆ ಅರೆಯುತ್ತಾರೆ. ಬಳಪದ ಕಲ್ಲಿನಿಂದ ಇದನ್ನು ತಯಾರಿಸುತ್ತಾರೆ.



ಕಡೆಗೋಲು/ ಮಂತು



ಮೊಸರು ಕಡೆಯಲು ಸಾರ್ವತ್ರಿಕವಾಗಿ ಬಳಸುವ ಸಾಧನ. ಕಡೆಯುವ (ಮೊಸರನ್ನು) ಕೋಲು ಎಂಬುದೇ ಕಡೆಗೋಲು ಎಂದು ಸ್ವರೂಪ ಪಡೆಯಿತು. ಇದರಲ್ಲಿ ಮೊಸರನ್ನು ಕಡೆಯುವ ಮುದ್ದೆ/ಗಡ್ಡೆಯು ಮೂರು ಕಿರು ಹಂತಗಳಲ್ಲಿ ಎಸಳೆಸಳಾಗಿ ವಿನ್ಯಾಸಗೊಂಡಿರುತ್ತದೆ. ಮರದ ಒಂದೇ ತುಂಡಿನಿಂದ ಕಡೆಗೋಲನ್ನು ತಯಾರಿಸುತ್ತಾರೆ. ಕಡೆಗೋಲು ಮುದ್ದೆಯನ್ನು ತಯಾರಿಸಿ ಹಿಡಿಕೆಯನ್ನು ಜೋಡಿಸುವ ಕ್ರಮವೂ ಇದೆ. ಈ ಹಿಡಿಕೆ ಕೂಡ ಎರಡು ಅಂಗೈಗಳ ನಡುವೆ ಇರಿಸಿ ಅತ್ತಿತ್ತ ತಿರುಗಿಸುವಾಗ ಜಾರದಂತೆ 'ಹಿಡಿತ'ಯನ್ನು ಉಳಿಸಿಕೊಳ್ಳುವ ತೆರನ ವಿನ್ಯಾಸವುಳ್ಳದ್ದು. ಕಡೆಗೋಲುಗಳು ವಿಭಿನ್ನ ಗಾತ್ರಗಳಲ್ಲಿರುತ್ತವೆ. ಸಣ್ಣ ಪ್ರಮಾಣದ ಅಂದರೆ ಸುಮಾರು ಎರಡು ಲೀಟರ್‌ನಷ್ಟು ಮೊಸರನ್ನು ಸಣ್ಣ ಕಡೆಗೋಲಿನಿಂದ ಕಡೆಯಬಹುದು. ಇಂಥ ಕಡೆಗೋಲಿನ ಬೊಡ್ಡೆಯು ಸುಮಾರು ಎಂಟರಿಂದ ಹತ್ತು ಇಂಚುಗಳ ಸುತ್ತಳತೆಯದಾಗಿದ್ದು ಹಿಡಿಕೆಯು ಸುಮಾರು ಒಂದರಿಂದ ಒಂದೂವರೆ ಅಡಿ ಎತ್ತರವಿರುತ್ತದೆ. ಇನ್ನೂ ಹೆಚ್ಚು ಪ್ರಮಾಣದ ಮೊಸರನ್ನು ಕಡೆಯಲು ಮಧ್ಯಮ ಗಾತ್ರದ ಕಡೆಗೋಲು ಬಳಕೆಯಾಗುತ್ತದೆ. ಮೊಸರಿನ ಪ್ರಮಾಣವೂ ತುಂಬ ಹೆಚ್ಚಾಗಿದ್ದಾಗ ಅದನ್ನು ಸುಮಾರು ನಾಲ್ಕು ಅಡಿ ಎತ್ತರದ ಬಿದಿರ ಅಂಡೆ/ಮರ ಅಥವಾ ಲೋಹದ ಪಾತ್ರೆಗಳಲ್ಲಿ ಹಾಕಿ ಬೃಹತ್ ಗಾತ್ರದ ಕಡೆಗೋಲಿನಿಂದ ನಿಂತುಕೊಂಡು ಕಡೆಯಲಾಗುತ್ತದೆ. ಇಂಥ ಕಡೆಗೋಲುಗಳ ಬೊಡ್ಡೆಯು ಸುಮಾರು ಒಂದರಿಂದ ಒಂದೂವರೆ ಅಡಿಗಳಷ್ಟು ಸುತ್ತಳತೆಯದಾಗಿದ್ದು ಅದರ ಹಿಡಿಕೆಯು ಸುಮಾರು ಐದು ಅಡಿಗಳಷ್ಟು ಉದ್ದವಿರುತ್ತದೆ.





ಕಡೆಗೋಲನ್ನು ವಿಶಿಷ್ಟ ಜಾತಿಯ ಮರಗಳಿಂದ ನಿರ್ಮಿಸುತ್ತಾರೆ. ಸಾಮಾನ್ಯವಾಗಿ ತೇಗ, ಹಲಸು ಮುಂತಾದ ಮರಗಳನ್ನು ಬಳಸಲಾಗುತ್ತದೆ. ಮಂತಿನ ರಚನೆಯಲ್ಲೂ ಬಡಗಿಗಳು ಕಾಷ್ಠ ಕೌಶಲವನ್ನು ತೋರುವುದಿದೆ. ಇದರ ಗಡ್ಡೆಯ ಎಸಳುಗಳು ಸಮ ಸಂಖ್ಯೆಯಲ್ಲೆ

ಇರುತ್ತವೆ. ಮೊಸರು ಕಡೆಯಲು ಯಂತ್ರಗಳು ಬಂದ ಬಳಿಕ ಪಾರಂಪರಿಕ ಕಡೆಗೋಲುಗಳು ವಸ್ತು ಸಂಗ್ರಹಾಲಯದ ಸಾಧನಗಳಾಗಿ ತಮ್ಮ ಜಾಗವನ್ನು ತೆರವು ಮಾಡುತ್ತಿವೆ. ಜತೆಗೆ, ಮುಂಜಾನೆಯ ತಂಪು ಹೊತ್ತಿನಲ್ಲಿ ಮೊಸರು ಕಡೆಯುತ್ತ ಜನಪದ ಮಹಿಳೆಯರು ಹಾಡಿಕೊಳ್ಳುತ್ತಿದ್ದ ಉದಯರಾಗ/ಜನಪದ ಹಾಡುಗಳೂ ಮರೆಯಾಗುತ್ತಿವೆ.

ಕಲ್ಬಟ್ಟಿ/ಕಲ್ಪಟ್ಟಿ



ಉಪ್ಪಿನಕಾಯಿ, ಚಟ್ನಿಪುಡಿ, ಖಾರದ ಹಿಂಡಿ, ಅರಸಿನ ಪುಡಿ, ಖಾರಪುಡಿ (ಮೆಣಸಿನಪುಡಿ) ಮುಂತಾದವುಗಳನ್ನು ಜೋಪಾನವಾಗಿಡಲು ಬಳಸುವ ಸಾಧನ. ಇದರ ಗಾತ್ರ, ಆಕಾರಗಳಲ್ಲಿ ವ್ಯತ್ಯಾಸ ಇರುತ್ತದೆ. ಬೆಣ್ಣೆಯನ್ನು ಕೂಡ ಕಲ್ಬಟ್ಟಿಯಲ್ಲಿ ಜೋಪಾನವಾಗಿ ಇಟ್ಟುಕೊಳ್ಳಬಹುದು. ಕೆಲವು ಕಲ್ಬಟ್ಟಿಗಳಿಗೆ ಕಲ್ಲಿನದೇ ಮುಚ್ಚಳ ಕೂಡ ಇರುತ್ತದೆ. ಇದನ್ನು ಕರಿಕಲ್ಲಿನಿಂದ ತಯಾರಿಸುತ್ತಾರೆ. ಇದರಲ್ಲಿರಿಸಿದ ವಸ್ತುಗಳು ಬೇಗ ಕೆಡುವುದಿಲ್ಲ ಎಂಬುದು ಜನಪದರ ಅನುಭವ.



ಕಲ್ಲು ಕುಡಿಕೆ



ಚಟ್ನಿ, ಕಾರ, ಮೊಸರು ಮಂತಾದುವುಗಳನ್ನು ಇಡಲು ಬಳಸುವ ಪರಿಕರ. ಇದು ಸುಮಾರು ಅರ್ಧ ಅಡಿಯಿಂದ ಒಂಭತ್ತು ಇಂಚು ಎತ್ತರವಿರುತ್ತದೆ. ತಳಭಾಗ ಸಮತಟ್ಟಾಗಿದ್ದು ಮೇಲ್ಭಾಗವು ಸುಮಾರು ಐದರಿಂದ ಎಂಟು ಇಂಚು ವ್ಯಾಸವಿರುತ್ತದೆ. ಬಾಯಿಯ ಹೊರ ಅಂಚಿಗೆ ಅರ್ಧ ಇಂಚಿನ ಪಟ್ಟಿ ಇರುತ್ತದೆ. ತಳಭಾಗದಿಂದ ಮೇಲ್ಭಾಗಕ್ಕೆ ಹೋದಂತೆಲ್ಲಾ ಸುತ್ತಳತೆಯು ಚಿಕ್ಕದಾಗುತ್ತಾ ಹೋಗುತ್ತದೆ. ಇದರಲ್ಲಿ ಚಟ್ನಿ, ಕಾರ, ಮೊಸರು ಮುಂತಾದುವನ್ನು ಹಾಕಿಟ್ಟರೆ ಬಹಳ ದೀರ್ಘಕಾಲ ಕೆಡುವುದಿಲ್ಲ. ಕಲ್ಲು, ಕುಡಿಕೆಗಳ ಗಾತ್ರದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿರುತ್ತದೆ. ಇಂತಹ ಕುಡಿಕೆಗಳನ್ನು ಗ್ರಾಮೀಣ ಪ್ರದೇಶದ ಕೆಲವು ಮನೆಗಳಲ್ಲಿ ಇಂದಿಗೂ ಬಳಸುತ್ತಾರೆ. ಕಲ್ಲುಕುಡಿಕೆಯನ್ನು ಬಳಪದ ಕಲ್ಲಿನಿಂದ ತಯಾರಿಸುತ್ತಾರೆ.'

ಕಲ್ಲು ಚಟಗೆ



ಸಣ್ಣ ಪ್ರಮಾಣದಲ್ಲಿ ಉಪ್ಪು, ಖಾರ, ಉಪ್ಪಿನಕಾಯಿ ಮುಂತಾದುವನ್ನು ಹಾಕಿಡಲು ಬಳಸುವ ಬಳಪ ಕಲ್ಲಿನಿಂದ ಸಣ್ಣ ಪಾತ್ರೆ. ಇದರ ತಳವು ಚಪ್ಪಟೆಯಾಗಿರುವುದರಿಂದ ಭದ್ರವಾಗಿ ಸಮತಟ್ಟಾದ ಜಾಗದಲ್ಲಿ ಇಡುವುದಕ್ಕೆ ಅನುಕೂಲವಾಗಿದೆ. ತಳದ ವ್ಯಾಸವು ಹೆಚ್ಚು, ಬಾಯಿಯ ವ್ಯಾಸವು ಸ್ವಲ್ಪ ಕಡಿಮೆ ಇರುತ್ತದೆ. ಸುಮಾರು ನಾಲ್ಕು ಇಂಚು ವ್ಯಾಸದಿಂದ ಸುಮಾರು ಎಂಟು ಇಂಚಿನ ತನಕ ಬಾಯಿಯ ವ್ಯಾಸವಿರುತ್ತದೆ. ಚಟಿಗೆಯ ಗಾತ್ರಕ್ಕನುಸಾರವಾಗಿ ಅದರಲ್ಲಿ ಹಾಕಿಡುವ ವಸ್ತುಗಳ ಪ್ರಮಾಣವೂ ನಿರ್ಧರಿತವಾಗುತ್ತದೆ. ಆಮ್ಲ, ಕ್ಷಾರ, ಲವಣರಸಗಳನ್ನು ತಡೆದುಕೊಳ್ಳುವ ಈ ಚಟಿಗೆಗಳನ್ನು ಬಳಪದ ಕಲ್ಲಿನಿಂದ (ಬಿಜಾಪುರದ ಭೀಮಾನದಿ ತೀರದಲ್ಲಿ ಲಭ್ಯ) ತಯಾರಿಸುತ್ತಾರೆ. ಅದುರಿಂದಲೇ ಇದರಲ್ಲಿರಿಸಿದ ಉಪ್ಪು,



ಉಪ್ಪಿನಕಾಯಿ, ಖಾರಪುಡಿಗಳು ತುಂಬಕಾಲ ಕೆಡದೆ ಉಳಿಯುತ್ತವೆ. ಕಲ್ಲು ಚಟಿಗೆಯು ಗಾತ್ರದಲ್ಲಿ ಇನ್ನೂ ದೊಡ್ಡದಾಗಿದ್ದರೆ ಅದನ್ನು ಕಲ್ಬಾನಿ ಎಂದು ಕರೆಯುತ್ತಾರೆ.

ಕಲ್ಬಾನಿ /ಕಲ್ಲುಬಾನಿ



ಕಲ್‌ಗಚ್ಚು ನೀರನ್ನು (ದ್ರವ ವಸ್ತುಗಳನ್ನು) ಸಂಗ್ರಹಿಸಿಡುವ ಸಾಧನ. ಇದು ಸುಮಾರು ಎಂಟು ಇಂಚು ಉದ್ದವಿದ್ದು ತಳಭಾಗವು ಸುಮಾರು ೬ ಇಂಚು ವ್ಯಾಸವಿದೆ, ಹಿಡಿಯಲು ಎರಡು ಕಡೆಗೂ ಹಿಡಿಕೆಗಳಿವೆ. ಒಣ ಮೆಣಸಿನಕಾಯಿ, ಸಾವಿಗೆ, ಉಪ್ಪಿನಕಾಯಿ ಹಾಗೂ ಇದರಲ್ಲೇ ಸ್ವಲ್ಪದೊಡ್ಡ ಬಾನಿಗಳು ದನ, ಕರು, ಎತ್ತು, ಎಮ್ಮೆಗಳಿಗೆ ಕುಡಿಯಲಿಕ್ಕೆ ಮನೆ ಮುಸುರೆ ತುಂಬಿಡಲು ಹಾಗೂ ಅನ್ನ, ಹುರುಳಿ ಬಸಿಯಲಿ ಬಳಕೆಯಾಗುತ್ತದೆ. ಅಲ್ಲದೇ ಉಂಡಿ(ಸಿಹಿ ತಿಂಡಿಗಳು) ಮುಂತಾದವುಗಳನ್ನು

ಹಾಕಿಡಲೂ ಸಹ ಬಳಸುತ್ತಾರೆ. ಕಲ್ಬಾನಿಯನ್ನು ಬಳಪದ ಕಲ್ಲಿನಿಂದ ತಯಾರಿಸಲಾಗುತ್ತದೆ.

ಕಾಗದದ ಬುಟ್ಟಿ/ರದ್ದಿಬುಟ್ಟಿ



ಅಡುಗೆ ಮನೆಯಲ್ಲಿ ಸಂಬಾರ ಪದಾರ್ಥಗಳು, ಸಾಂಬಾರ್ ಪುಡಿ, ಕಾಳುಗಳು, ಹಿಟ್ಟು, ಇತ್ಯಾದಿಗಳನ್ನು ಇಟ್ಟುಕೊಳ್ಳಲು ಬಳಸುವ ಸಾಧನ. ಬಿದಿರ ಬುಟ್ಟಿ ಮಾಡುವ ಎಲ್ಲ ಕೆಲಸಗಳನ್ನು ಕಾಗದದ ಬುಟ್ಟಿಯು ಕೂಡ ಮಾಡುತ್ತದೆ. ಆದರೆ ಬಿದಿರ ಬುಟ್ಟಿಯಷ್ಟು ಕಾಗದದ ಬುಟ್ಟಿಯು ಗಟ್ಟಿಮುಟ್ಟಾಗಿರುವುದಿಲ್ಲ.

ರದ್ದಿಕಾಗದವನ್ನು ಚಿಕ್ಕ ಚಿಕ್ಕ ಚೂರುಗಳಾಗಿ ಮಾಡಿ ಮೆಂತೆ ಕಾಳುಗಳಜೊತೆ ನೀರಿನಲ್ಲಿ ನೆನೆಹಾಕಲಾಗುತ್ತದೆ. ಇವು ಚೆನ್ನಾಗಿ ನೆನೆದ ಬಳಿಕ ಕಲ್ಲಿನ ಒರಳಲ್ಲಿ ಇದನ್ನು ಹಾಕಿ ಅರಿಸಿಣ ಪುಡಿಯನ್ನು ಮಿಶ್ರಮಾಡಿ ಚೆನ್ನಾಗಿ ರುಬ್ಬುತ್ತಾರೆ. ಮಡಕೆಯೊಂದನ್ನು ಕವುಚಿ ಅದರ ಮೇಲೆ ಹತ್ತಿಯ ಬಟ್ಟೆಯನ್ನು ನೀರಲ್ಲಿ ಅದ್ದಿ ಹಾಸಿ, ರುಬ್ಬಿದ ಹಿಟ್ಟನ್ನು ನಿಧಾನವಾಗಿ ಮಡಕೆಯ ತಳದ ಹೊರಮೈ ಆಕಾರದಲ್ಲಿ ಹಚ್ಚುತ್ತಾರೆ. ಇದು ಒಣಗಿದ ಬಳಿಕ ಬುಟ್ಟಿಯ ಆಕಾರವು ಪ್ರಾಪ್ತವಾಗುತ್ತದೆ. ಬಳಿಕ ಅಲ್ಲಲ್ಲಿ ತೇಪೆ ಏನಾದರೂ ಬೇಕಾದಲ್ಲಿ ಅದೇ ಹಿಟ್ಟಿನಿಂದ ತೇಪೆ ಹಾಕಿ ಒಣಗಿಸುತ್ತಾರೆ. ಆಗ ಬುಟ್ಟಿ ಸಿದ್ಧವಾಗುತ್ತದೆ. ಮೆಂತೆಯು ಅಂಟಿನ ಗುಣವನ್ನು, ಅರಿಶಿಣವು ಕ್ರಿಮಿನಾಶಕ ಗುಣವನ್ನು ಹೊಂದಿರುವುದನ್ನು ತಿಳಿದ ಜನಪದರು ಸರಳ ತಂತ್ರಜ್ಞಾನವನ್ನು ಬಳಸಿ ಇಂಥ ಉಪಯೋಗಕಾರಿ ಸಾಧನಗಳನ್ನು ತಯಾರಿಸಿಕೊಳ್ಳುತ್ತಾರೆ ಎನ್ನುವುದು ವಿಶೇಷ.

ಕಾಗಡಿ/ಕಾಗ್ಡಿ



ಚಿಕ್ಕಮಕ್ಕಳನ್ನು (ಸುಮಾರು ಒಂದು ವರ್ಷದಿಂದ ಮೂರು ವರ್ಷ ಪ್ರಾಯ) ಕುಳಿತುಕೊಳ್ಳಿಸಿ ತೂಗಲು/ಆಡಿಸಲು ಬಳಸುವ ಸಾಧನ. ಸುಮಾರು ಒಂದೂವರೆ ಅಡಿ ಎತ್ತರದ ನಾಲ್ಕು ಚೌಕಟ್ಟಿನ ಕಾಲುಗಳಿಗೆ, ತಳಭಾಗ ಮತ್ತು ನಾಲ್ಕು ಬದಿಗಳೂ ಮುಚ್ಚುವಂತೆ ಕೆತ್ತನೆ/ಅಲಂಕಾರ ಮಾಡಿದ ಮರದ ಹಲಗೆಗಳಿಂದ ಕೂಡಿರುತ್ತದೆ. ಈ ಆವರಣ ಹಲಿಗೆಗಳಲ್ಲಿ ಒಂದು ಬದಿಯದು ಮಗುವಿನ ಎರಡು ಕಾಲುಗಳನ್ನು ಹೊರಗೆ ಹಾಕಿ ಜೋತಾಡಿಸಲು ಅನುಕೂಲವಾಗುವಂತೆ ರಚನೆಯಾಗಿದೆ. ಕಾಗಡಿಯ ನಾಲ್ಕು ಚೌಕಟ್ಟಿನ ಕಾಲುಗಳಿಗೆ ಹಗ್ಗ ಹಾಕಿ, ಮೇಲೆ ಮರದ ಜಂತೆಗಳಿಗೆ ಕಟ್ಟಿ, ಕಾಗಡಿಯಲ್ಲಿ ಮಗುವನ್ನು ಕುಳ್ಳಿರಿಸಿ ತೂಗುತ್ತಾರೆ. ಅಗತ್ಯವಿದ್ದಲ್ಲಿ ಒಂದು ಉದ್ದದ ಹಗ್ಗವನ್ನು ಅದಕ್ಕೆ ಕಟ್ಟಿ ಅದನ್ನು ಎಳೆಯುತ್ತಾ ಇದ್ದರೆ ಕಾಗ್ಡಿಯೂ ತೂಗುತ್ತದೆ.



ಇನ್ನೂ ಚಿಕ್ಕಮಕ್ಕಳನ್ನು ಕುಳ್ಳಿರಿಸಿ ತೂಗಲು ಇನ್ನೂ ಚಿಕ್ಕ ಕಾಗ್ಡಿಗಳಿವೆ. ತುಂಬ ಸರಳವಾಗಿಯೂ(ಕೇವಲ ನಾಲ್ಕಾರು ಹಲಗೆ ತುಂಡು, ನಾಲ್ಕಾರು ಕೋಲುಗಳನ್ನು ಜೋಡಿಸಿ)ಕಾಗ್ಡಿಯನ್ನು ತಯಾರಿಸುತ್ತಾರೆ. ಅವಕ್ಕೆ ಹಗ್ಗಹಾಕಿ ಜೋತಾಡಿಸಿದರೆ ಅದು ಉಯ್ಯಾಲೆಯಂತೆ ಹೆಚ್ಚು ಹೊತ್ತು ಹಿಂದೆ ಮುಂದೆ ಚಲಿಸುತ್ತಿರುತ್ತದೆ. ಇದರಿಂದ ತಾಯಂದಿರು ಇತರ ಕೆಲಸಗಳನ್ನು ಮಾಡುತ್ತಲೇ ಹಾಡುಗಳನ್ನು ಹಾಡುತ್ತ ಮಗುವನ್ನು ನೋಡಿಕೊಳ್ಳಬಹುದು. ಕಾಗ್ಡಿಯು ಪೂರ್ತಿಯಾಗಿ ಮರಮಟ್ಟುಗಳಿಂದಲೇ ತಯಾರಾಗುತ್ತದೆ. ಕಾಗ್ಡಿಯ ಬಳಕೆ ಉತ್ತರ ಕರ್ನಾಟಕದಲ್ಲಿಯೇ ಹೆಚ್ಚು.



ಕಾಲು ದೀಪ/ದೀಪದ ಕಾಲು



ಸೀಮೆಎಣ್ಣೆ ಬುಡ್ಡಿ, ಹಣತೆ ಮುಂತಾದ ದೀಪಗಳನ್ನು ಎತ್ತರದಲ್ಲಿ ಇರಿಸಲು ಬಳಸುವ ಮರದ ಸಾಧನ. ಇದು ಸುಮಾರು ಒಂದರಿಂದ ಐದು ಅಡಿ ಎತ್ತರವಿರುತ್ತದೆ. ಇದರ ಕೆಳಭಾಗವನ್ನು ಕೆಳಪೀಠವೆಂದೂ ಅತೀ ಮೇಲಿನ ಭಾಗವನ್ನು ಮೇಲು ಪೀಠವೆಂದೂ ಕರೆಯುತ್ತಾರೆ. ದೀಪಗಳನ್ನು ಅಗತ್ಯವಾದ ಎತ್ತರದಲ್ಲಿ ಇರಿಸಿಕೊಳ್ಳಲು ಅನುಕೂಲವಾಗುವಂತೆ ಇದರ 'ಪಟ್ಟಿ'ಗೆ(ಗರಗಸಾಕಾರದ ಮರದ ತುಂಡು) ಕೊಕ್ಕೆಗಳುಳ್ಳ ಅಡ್ಡಪಟ್ಟಿಯನ್ನು








ಜೋಡಿಸಿ ಕೊಳ್ಳುವ ಅದರಲ್ಲಿ ದೀಪವಿರಿಸುವ ತಂತ್ರಜ್ಞಾನವೂ ಜನಪದರಲ್ಲಿ ರೂಢಿಯಲ್ಲಿದೆ. ಕೆಳಪೀಠದ ಮೇಲಿನ ಭಾಗವನ್ನು ಪಟ್ಟಿಯೆಂದೂ ಅತೀ ಮೇಲಿನ ಭಾಗವನ್ನು ಮೇಲು ಪೀಠವೆಂದೂ ಕರೆಯುತ್ತಾರೆ.

ಕ್ವಿಂಟಾಲ್ ಬುಟ್ಟಿ/ಗೂಡೆ



ಜೋಳ, ರಾಗಿ, ಭತ್ತ, ಮುಂತಾದ ದವಸ ಧಾನ್ಯಗಳನ್ನು ತುಂಬಿಡಲು ಇದನ್ನು ಬಳಸುತ್ತಾರೆ. ಸುಮಾರು ಎರಡೂವರೆ ಅಡಿ ಅಗಲವಿದ್ದು ಸುಮಾರು ಒಂದೂವರೆ ಅಡಿ ಎತ್ತರವಿದೆ. ತಳಭಾಗವು ಸಮತಟ್ಟಾಗಿದ್ದು ಒಂದೂವರೆ ಅಡಿ ವ್ಯಾಸವಿದೆ. ಈ ಬುಟ್ಟಿಯನ್ನು ಬಿದಿರನ ಸೀಳುಗಳಿಂದ ಹೆಣೆಯಲಾಗಿದ್ದು ಇದಕ್ಕೆ ಹತ್ತಿ ಬಟ್ಟೆಯನ್ನು ಸುಟ್ಟು ಗೇರು ಎಣ್ಣೆಯಲ್ಲಿ ಮಿಶ್ರಣಮಾಡಿ ಸವರಿರುತ್ತಾರೆ. ಇದು ಬುಟ್ಟಿಗಳಲ್ಲಿಯೇ ಅತ್ಯಂತ ದೊಡ್ಡದು. ಈ ಬುಟ್ಟಿಯಲ್ಲಿ ಸುಮಾರು ಒಂದು ಕ್ವಿಂಟಾಲ್ ಧಾನ್ಯಗಳನ್ನು ಸಂಗ್ರಹಿಸಬಹುದು. ಇದನ್ನು ರೈತರು ಕ್ವಿಂಟಾಲ್ ಬುಟ್ಟಿ ಎಂದೇ ಕರೆಯುತ್ತಾರೆ. ಈ ಬುಟ್ಟಿಯನ್ನು ಕಣದಲ್ಲಿನ ಕಾಳುಗಳನ್ನು ಮನೆಗೆ ತಂದು ಹಾಕುವುದಕ್ಕೂ ಹೊಲದಲ್ಲಿ ಜೋಳ, ಸಜ್ಜೆ, ತೆನೆಗಳನ್ನು ಹೊತ್ತು ಹಾಕುವುದಕ್ಕೂ ಬಳಸುತ್ತಾರೆ. ಭತ್ತವನ್ನು ಅಕ್ಕಿಮಾಡಿಸಲು ಗಿರಣಿಗೆ ಹೊತ್ತುಕೊಂಡು ಹೋಗಲು ಕೂಡ ಬಳಸುತ್ತಾರೆ.

ಕುಟಾಣಿ/ಕುಟ್ನಿ



ಎಲೆ ಅಡಿಕೆ ಕುಟ್ಟಿಕೊಳ್ಳಲು ಬಳಸುವ ಲೋಹದ ಸಾಧನ. ಇದು ಒರಳಿನ ಆಕಾರವಿದ್ದು, ಎತ್ತರ ಸುಮಾರು ನಾಲ್ಕು ಇಂಚು. ಒರಳಿನ ಆಳ ಸುಮಾರು ಮೂರುವರೆ ಇಂಚು. ಇದಕ್ಕೆ ಪೂರಕವಾಗಿ ಒಂದು ಅಡಿ ಉದ್ದದ ಕಬ್ಬಿಣದ ಕೋಲು ಇದೆ. ಇದರ ಬುಡ ದಪ್ಪವಿದ್ದು ತುದಿಗೆ ಹೋದಂತೆಲ್ಲಾ ಗಾತ್ರದಲ್ಲಿ ಚಿಕ್ಕದಾಗುತ್ತದೆ. ತುದಿ ದುಂಡಗಿರುತ್ತದೆ. ಅಡಿಕೆ ಎಲೆಅಡಕೆ ತಿನ್ನುವ ಅಭ್ಯಾಸ ಉಳ್ಳವರು, ಅದರಲ್ಲೂ ಬಾಯಲ್ಲಿ ಹಲ್ಲಿಲ್ಲದವರು ಇದನ್ನು ಎಲೆಅಡಕೆ ಕುಟ್ಟಿಕೊಳ್ಳಲು ಬಳಸುತ್ತಾರೆ. ಇನ್ನಿತರ ಸಣ್ಣ ಪ್ರಮಾಣದ ಘನವಸ್ತುಗಳನ್ನು ಪುಡಿಮಾಡಲು ಕೂಡ ಇದು ಉಪಯೋಗವಾಗುತ್ತದೆ. ಇದರ ಸ್ವರೂಪದಲ್ಲಿ ವ್ಯತ್ಯಾಸ ಕಂಡು ಬರುತ್ತವೆ.



ಕುಂದಣಿಗೆ



ಒರಳಿನಲ್ಲಿ ಕಾಳುಗಳನ್ನು, ಕಾರವನ್ನು ಕುಟ್ಟುವಾಗ ಕಾಳುಗಳು, ಕಾರ ಆಚೆ ಈಚೆ ಸಿಡಿದು ಹೋಗದಂತೆ ತಡೆಯಲು ಬಳಸುವ ಸಾಧನ. ಇದು ಚಕ್ರಾಕಾರದಲ್ಲಿದ್ದು ಸುಮಾರು ಒಂದು ಅಡಿ ಎತ್ತರ, ಕಂಠ ಸುಮಾರು ಎರಡು ಇಂಚು ದಪ್ಪ ಇರುತ್ತದೆ. ಸುಮಾರು ಇಪ್ಪತ್ತು ಇಂಚು ಸುತ್ತಳತೆ ಇದೆ. ಇದನ್ನು ಒರಳು ಕಲ್ಲಿನ ಮೇಲೆ ಇಟ್ಟು ಧಾನ್ಯಗಳನ್ನು ಕುಟ್ಟುತ್ತಾರೆ. ಇದರ ತಳಭಾಗ ಒರಳುಕಲ್ಲಿನ ಬಾಯ ಅಳತೆಗೆ ಹೊಂದಿಕೆಯಾಗುವಂತೆ ಇದ್ದು ಮೇಲ್ಭಾಗ ಸ್ವಲ್ಪ ಹೆಚ್ಚು ಅಗಲವಿರುತ್ತದೆ. ಕೆಲವೊಮ್ಮೆ ಇದರ ತಳಭಾಗದ ಸುತ್ತಲೂ ಸುಂದರ ಕೆತ್ತನೆ ಕೆಲಸ ಮಾಡಿರುತ್ತಾರೆ.

ಕೆರ್ಸಿ/ಗೆರಸೆ



ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬಹರಿದಿನ, ಜಾತ್ರೆ, ಉತ್ಸವ ಮುಂತಾದ ವಿಶೇಷ ದಿನಗಳಲ್ಲಿ ಕರಿದ ತಿಂಡಿಗಳನ್ನು ಹಾಕಿಡಲು ಬಳಸುವ ಪರಿಕರ. ಇದು ಸುಮಾರು ಐದು ಇಂಚು ಎತ್ತರವಿದ್ದು ಸುಮಾರು ಹದಿಮೂರು ಇಂಚು ವ್ಯಾಸವಿರುತ್ತದೆ. ಇದನ್ನು ಬೆತ್ತದಿಂದ ಹೆಣೆದು ಗೇರೆಣ್ಣೆಯನ್ನು ಹಚ್ಚಲಾಗಿರುತ್ತದೆ. ವಿಶೇಷ ದಿನಗಳಲ್ಲಿ ಬಜ್ಜಿ, ಬೋಂಡ, ವಡೆ, ಮಿರ್ಚಿ ಮುಂತಾದ ಎಣ್ಣೆಯಲ್ಲಿ ಕರಿದ ತಿಂಡಿಗಳನ್ನು ಹಾಕಿಡಲು ಬಳಸುತ್ತಾರೆ. ಬೆತ್ತದ ಕೆರ್ಸಿಗಳಲ್ಲಿ ಹಾಕಿರಿಸಿದ ಕರಿದ ತಿಂಡಿಗಳು ಬಹಳ ಬೇಗ ಕೆಡುವುದಿಲ್ಲ. ಗಾಳಿ ಚೆನ್ನಾಗಿ ಆಡುತ್ತದೆ. ಕೆರ್ಸಿಯನ್ನು ಆಯತಾಕಾರದಲ್ಲಿ ಹೆಣೆಯಲಾಗುತ್ತದೆ.



ಕೈಪೆಟ್ಟಿಗೆ/ಆಭರಣ ಪೆಟ್ಟಿಗೆ



ಬೆಲೆಬಾಳುವ ಒಡವೆ ಮತ್ತು ಹಣವನ್ನು ಸಂರಕ್ಷಿಸಲು ಬಳಸುವಂತಹ ಸಾಧನ. ಸುಮಾರು ಏಳು ಇಂಚು ಅಗಲ, ಹತ್ತೂವರೆ ಇಂಚು ಉದ್ದ, ಮೂರೂವರೆ ಇಂಚು ಎತ್ತರವನ್ನು ಹೊಂದಿ ಆಯತಾಕಾರದಿಂದ ಕೂಡಿದೆ. ಬೀಗ ಹಾಕುವ ವ್ಯವಸ್ಥೆ ಹೊಂದಿದೆ. ಇದನ್ನು ಒಂದುಕಡೆಯಿಂದ ಮತ್ತೊಂದು ಕಡೆಗೆ ಕೊಂಡೊಯ್ಯಲು ಮೇಲ್ಭಾಗದಲ್ಲಿ ಹಿಡಿಯೂ ಇದೆ. ಹಣ ಒಡವೆಗಳನ್ನು ಕಳ್ಳ ಕಾಕರಿಂದ ಸಂರಕ್ಷಿಸಲು ಈ ಪೆಟ್ಟಿಗೆ ಬಳಕೆಯಾಗುತ್ತಿತ್ತು. ಇದನ್ನು ಲೋಹದಿಂದ (ಕಬ್ಬಿಣ) ತಯಾರಿಸಿದ್ದಾರೆ. ಈಗ ಈ ತರಹದ ಪೆಟ್ಟಿಗೆಗಳ ಬಳಕೆ ಕಡಿಮೆ.

ಕೊಣಮಿಗೆ



ರೊಟ್ಟಿ ಮಾಡುವುದಕ್ಕೆ, ಹಿಟ್ಟು ಕಲಸಿಕೊಳ್ಳಲು ಮತ್ತು ಆ ಬಳಿಕ ರೊಟ್ಟಿ ಬಡಿಯಲು/ತಟ್ಟಲು ಬಳಸಿಕೊಳ್ಳುತ್ತಾರೆ. ಇದರ ಆಕಾರ ಮತ್ತು ಗಾತ್ರಗಳಲ್ಲಿ ವ್ಯತ್ಯಾಸ ಇರುತ್ತದೆ. ವೃತ್ತಾಕಾರದ ಕೊಣಮಿಗೆಯು ರೊಟ್ಟಿ ತಯಾರಿಸಿಕೊಳ್ಳಲು ಬಳಕೆಯಾದರೆ ಆಯತಾಕಾರದವುಗಳಲ್ಲಿ ಅನ್ನ ಮೊಸರು ಕಲಸಿಕೊಳ್ಳಲು ಬಳಕೆಯಾಗುತ್ತದೆ. ಇವನ್ನು ಕಗ್ಗಲ್ಲು, ಮರ ಮತ್ತು ಲೋಹಗಳಿಂದ ತಯಾರಿಸುತ್ತಾರೆ. ಸಾಗುವಾನಿ, ಮಾವು, ಅತ್ತಿ ಮುಂತಾದ ಮರಗಳು ತಯಾರಿಕೆಗೆ ಬಳಕೆಯಾಗುತ್ತವೆ. ರೊಟ್ಟಿ ಮಾಡುವ ಯಂತ್ರವು ಬಂದ ಮೇಲೆ ಕೊಣಮಿಗೆ ಬಳಕೆ ಕಡಿಮೆಯಾಗುತ್ತಾ ಬಂದಿದೆ.



ಗಂಧ ತೇಯುವ ಕಲ್ಲು/ಸಾಣೆಕಲ್ಲು

ಶ್ರೀಗಂಧ, ಚಂದನ, ಔಷಧದ ಬೇರು–ನಾರು, ಬಜೆ, ಗೋರಂಧ ಮುಂತಾದವುಗಳನ್ನು ತೇಯಲು ಬಳಸುತ್ತಾರೆ. ಚಿಕ್ಕ ಮಕ್ಕಳಿಗೆ ಗದ್ದಕಟ್ಟು(ಕೆನ್ನೆಬಾವು/ಕೆಪ್ಪಟ್ರಾಯ) ಆದಾಗ ನಾಮದಂಡೆಯನ್ನು ತೇಯಲು ಬಳಸುತ್ತಾರೆ. ಇದನ್ನು ವಿಶಿಷ್ಟವಾದ ಬಳಪದ ಕಲ್ಲಿನಿಂದ ತಯಾರಿಸಿದೆ. ಇದರ ಮೇಲೆ ತೇಯ್ದ ಔಷಧವನ್ನು ಕುಡಿಸುವುದರಿಂದ ಮಕ್ಕಳು ಬೇಗ ಆರೋಗ್ಯವಂತರಾಗುತ್ತಾರೆ ಎಂಬ ನಂಬಿಕೆ ಜನಪದರದು. ಈ ವಸ್ತುವು ಸುಮಾರು ಒಂದು ಅಡಿ ವ್ಯಾಸವಿದ್ದು ವೃತ್ತಾಕಾರದಲ್ಲಿರುತ್ತದೆ. ಇದರ ಮಧ್ಯಭಾಗವು ಸ್ವಲ್ಪ ತಗ್ಗಾಗಿರುತ್ತದೆ. ನೆಲದಲ್ಲಿಟ್ಟರೆ ಅಲುಗಾಡದಂತೆ ಅದರ ತಳವು ವಿನ್ಯಾಸಗೊಂಡಿದೆ. ಇವುಗಳ ಗಾತ್ರದಲ್ಲಿ ವ್ಯತ್ಯಾಸವಿರುತ್ತವೆ. ಕಲ್ಲಿನಲ್ಲಿ ಗಂಧತೇಯುವ ಘಟ್ಟಿವಳ್ತಿಯರ ಕುರಿತಾಗಿ ಹಳೆಯ ಕಾವ್ಯಗಳು ವಿವರಗಳನ್ನು ಕೊಡುತ್ತವೆ.





ಗುಳಬುಟ್ಟಿ



ಮನೆಗಳಲ್ಲಿ ಸಣ್ಣಗಾತ್ರದ ತರಕಾರಿ, ಕಾಳುಗಳು, ಕರಿದ ತಿಂಡಿ ಮುಂತಾದುವನ್ನು ಇರಿಸಿಕೊಳ್ಳಲು ಬಳಸುವ ಪುಟ್ಟ ಬುಟ್ಟಿ. ಇದು ಇತರ ಬುಟ್ಟಿಗಳಿಗಿಂತ ಗಾತ್ರದಲ್ಲಿ ಕುಳ್ಳಗೆ ಇರುವುದರಿಂದ ಇದಕ್ಕೆ ಗುಳಬುಟ್ಟಿ ಎಂದು ಹೆಸರು. ಇದರ ತಳವು ಚಪ್ಪಟೆಯಾಗಿದ್ದು ಸು. ನಾಲ್ಕರಿಂದ ಎಂಟು ಇಂಚು ವ್ಯಾಸ ಹೊಂದಿರುತ್ತದೆ. ತಳದಿಂದ ಮೇಲಕ್ಕೆ ಹೋದಂತೆ ಸ್ವಲ್ಪ ಅಗಲವಾಗುತ್ತ ಸು. ಆರರಿಂದ ಹತ್ತು ಇಂಚುಗಳಷ್ಟು ವ್ಯಾಸವನ್ನು ಪಡೆಯುತ್ತದೆ. ಇದರ ಮೇಲೆ ಅಷ್ಟೇ ವ್ಯಾಸದಲ್ಲಿ ಸುಮಾರು ಒಂದು ಇಂಚು ಅಗಲ ಇದರ ಬಾಯಿಯು ನಿರ್ಮಾಣವಾಗುತ್ತದೆ. ಇದು ಬಿದಿರಿನ ಸಣ್ಣ ಸೀಳುಗಳಿಂದ ಹೆಣೆಯಲ್ಪಟ್ಟು ಗೇರೆಣ್ಣೆ/ಅಗಸಿ ಎಣ್ಣೆಯಲ್ಲಿ ಹಳೇಬಟ್ಟೆಯನ್ನು ಸುಟ್ಟ ಬೂದಿಯನ್ನು ಮಿಶ್ರಣಮಾಡಿ ಲೇಪಿತವಾಗಿರುತ್ತದೆ. ಹೀಗೆ ಲೇಪಿಸುವುದರಿಂದ ಬುಟ್ಟಿಯು ಕ್ರಿಮಿಕೀಟಗಳನ್ನು ತಡೆದುಕೊಳ್ಳುತ್ತದೆ ಮತ್ತು ಸುಂದರವಾಗಿ ಕಾಣುತ್ತದೆ. ದೀರ್ಘಕಾಲ ಬಾಳಿಕೆ ಬರುತ್ತದೆ.





ಗೂಡೆ/ಎಣ್ಣೆಬು(ಪು)ಟ್ಟಿ

ಮನೆಗಳಲ್ಲಿ ಕಾಳುಗಳು ಮುಂತಾದುವನ್ನು ಇರಿಸಿಕೊಳ್ಳಲು ಬಳಸುವ ಬುಟ್ಟಿ. ಹಿಟ್ಟಿನ ಗಿರಣಿಗೆ, ಕಣದಿಂದ ಮನೆಗೆ



ಕಾಳುಗಳನ್ನು ಒಯ್ಯಲು ಕೂಡ ಬಳಕೆಯಾಗುತ್ತದೆ. ಇದು ಗುಳಬುಟ್ಟಿಗಳಿಗಿಂತ ಗಾತ್ರದಲ್ಲಿ ದೊಡ್ಡದಾಗಿರುತ್ತದೆ. ಇದರ ತಳವು ಚಪ್ಪಟೆಯಾಗಿದ್ದು ಸುಮಾರು ಎಂಟರಿಂದ ಹದಿನಾರು ಇಂಚು ವ್ಯಾಸ ಹೊಂದಿರುತ್ತದೆ. ತಳದಿಂದ ಮೇಲಕ್ಕೆ ಹೋದಂತೆ ಸ್ವಲ್ಪ ಅಗಲವಾಗುತ್ತ ಸು. ಹನ್ನೆರಡರಿಂದ ಇಪ್ಪತ್ತು ಇಂಚುಗಳಷ್ಟು ವ್ಯಾಸವನ್ನು ಪಡೆಯುತ್ತದೆ. ಇದರ ಮೇಲೆ ಅಷ್ಟೇ ವ್ಯಾಸದಲ್ಲಿ ಸುಮಾರು ಒಂದು ಇಂಚು ಎತ್ತರದ ಬಾಯಿಯು ನಿರ್ಮಾಣವಾಗುತ್ತದೆ. ಪುಟ್ಟಿಗಳ ಗಾತ್ರದಲ್ಲಿ ಸಾಕಷ್ಟು ವ್ಯತ್ಯಾಸಗಳಿರುತ್ತವೆ. ಇದು ಬಿದಿರಿನ ಸಣ್ಣ ಸೀಳುಗಳಿಂದ ಹೆಣೆಯಲ್ಪಟ್ಟು ಗೇರೆಣ್ಣೆ/ಅಗಸಿ ಎಣ್ಣೆಯಲ್ಲಿ ಹಳೇಬಟ್ಟೆ ಸುಟ್ಟ ಬೂದಿಯನ್ನು ಮಿಶ್ರಣಮಾಡಿ ಲೇಪಿತವಾಗಿರತ್ತದೆ. ಹೀಗೆ ಲೇಪಿಸುವುದರಿಂದ ಬುಟ್ಟಿಯು ಕ್ರಿಮಿಕೀಟಗಳನ್ನು ತಡೆದುಕೊಳ್ಳುತ್ತದೆ ಮತ್ತು ಸುಂದರವಾಗಿ ಕಾಣುತ್ತದೆ. ದೀರ್ಘಕಾಲ ಬಾಳಿಕೆಯೂ ಬರುತ್ತದೆ.



ಚಂಚಿ/ಸಂಚಿ



ತಾಂಬೂಲದ ವಸ್ತುಗಳನ್ನು, ಹಣವನ್ನು ಇರಿಸಿಕೊಳ್ಳಲು ಗ್ರಾಮೀಣರು ಬಳಸಿಟ್ಟಕೊಳ್ಳುವ ಕಿರುಚೀಲಗಳು. ಸಾಮಾನ್ಯವಾಗಿ ಮನೆಯಿಂದ ಹೊರಗೆ ಹೋಗುವಾಗ ಗ್ರಾಮೀಣ ಮಹಿಳೆಯರು ಸೊಂಟದ ಪಟ್ಟಿ(ವಂಕಿ)ಗೆ ಚಂಚಿಯ ಕಸಿಯ ಮೂಲಕ ಕಟ್ಟಿಕೊಳ್ಳುತ್ತಾರೆ. ಎಲೆ, ಅಡಿಕೆ, ಸುಣ್ಣದ ಡಬ್ಬಿ, ತಂಬಾಕು ಮುಂತಾದವನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಸಂಚಿಗಳ ಒಳಗೆ ಸಣ್ಣ ಸಣ್ಣ ಅರೆಗಳಿರುತ್ತವೆ.



ಚಕ್ಕುಲಿ ಒತ್ತೊಳ್ಳು/ಒತ್ತೊರಳು



ಚಕ್ಕುಲಿ, ಕಾರಕಡ್ಡಿ ಮುಂತಾದ ತಿಂಡಿಗಳಿಗೆ ರೂಪುಕೊಡುವ ಸಾಧನ. ಸುಮಾರು ಮೂರು ಇಂಚು ಚೌಕಾಕಾರದ ಒರಳು ಮತ್ತು ಅದೇ ಅಳತೆಯ/ ಆಕಾರದ ಒತ್ತು ಇದರ ಅವಿಭಾಜ್ಯ ಅಂಗಗಳು. ಅವಕ್ಕೆ ಇಬ್ಬದಿಗಳಲ್ಲೂ ಹಿಡಿಕೆಗಳು. ಒರಳಲ್ಲಿ ಸುಮಾರು ಎರಡು ಇಂಚು ವ್ಯಾಸ ಮೂರು ಇಂಚು ಆಳದ ರಂಧ್ರ. ರಂಧ್ರದ ಕೆಳಗಿನ ಭಾಗದಲ್ಲಿ ಚಕ್ಕುಲಿ, ಕಾರಕಡ್ಡಿಯಂಥ ತಿಂಡಿಗಳಿಗೆ ಅನುಸಾರವಾಗಿ ಹಿಟ್ಟನ್ನು ಹೊರಹಾಕುವ ಲೋಹದ ಬಿಲ್ಲೆಗಳನ್ನು ಅಳವಡಿಸುವ ಅನುಕೂಲತೆ. ಚಕ್ಕುಲಿ 'ಹುರಿ'ಯ ಗಾತ್ರವೈವಿಧ್ಯವನ್ನು ಆಗುಮಾಡುವಂತೆ ಬಿಲ್ಲೆಗಳಲ್ಲಿ ರಂಧ್ರವ್ಯತ್ಯಾಸವಿರುತ್ತದೆ. ಕಡಿಮೆ ಸುತ್ತಳತೆಯ, ರಂಧ್ರದ ಆಳದಷ್ಟೇ ಉದ್ದದ ಒತ್ತನ್ನು ಜೋಡಿಸಲಾಗುತ್ತದೆ. ಒತ್ತೊಳ್ಳನ್ನು ಬಳಸಲು ಕಡಿಮೆ ಬಲ ಸಾಕು. ಒತ್ತೊರಳುಗಳು ಸಾಗುವಾನಿ, ಹಲಸು ಮುಂತಾದ ಮರಗಳಿಂದ ತಯಾರಿಸಲಾಗುತ್ತದೆ.





ಚಿಬ್ಲು/ಚಿಬ್ಲಿ



ಗಡಿಗೆಯಿಂದ ಅನ್ನ ಬಸಿಯುವ ಸಾಧನವಾದರೂ ಅದು ಹೋಳಿಗೆ ಒಬ್ಬಟ್ಟು ಮುಂತಾದ ಕರಿದ ತಿಂಡಿಗಳನ್ನು ಬಿಸಿಯಿದ್ದಾಗ ಹಾಕಲು, ರೊಟ್ಟಿ ಚಪಾತಿ ಮುಂತಾದುವನ್ನು ಸುಡುವ/ಬೇಯಿಸುವ ಮುನ್ನ ಮತ್ತು ಬಳಿಕ ಅವನ್ನು ಹಾಕಲು, ಪಾತ್ರೆಗಳಿಗೆ ಮುಚ್ಚಲು ಬಳಸುತ್ತಾರೆ. ಇದು ಬಿದಿರಿನ ಚಿಕ್ಕ ಚಿಕ್ಕ ಸೀಳುಗಳಿಂದ ಹೆಣೆದ ವೃತ್ತಾಕಾರದ ವಸ್ತು. ಸುಮಾರು ಒಂದು ಅಡಿಯಿಂದ ಒಂದೂವರೆ ಅಡಿಗಳಷ್ಟು ವ್ಯಾಸವುಳ್ಳದ್ದಾಗಿದೆ. ಇದರ ಮೂಲಕ ಗಾಳಿಯು ಚೆನ್ನಾಗಿ ಆಡುವುದರಿಂದ ವಸ್ತುಗಳು ಬೇಗನೆ ಒಣಗಲು ಅನುಕೂಲ. ಸಾಕಷ್ಟು ಸಂದು/ಎಡೆಗಳಿರುವುದರಿಂದ ಗಂಜಿ, ಎಣ್ಣೆ, ನೀರು ಕೆಳಗೆ ಸುರಿಯುತ್ತದೆ ಮತ್ತು ಇದರ ಮೇಲೆ ಉಳಿದ ವಸ್ತುಗಳು ಗರಿಗರಿಯಾಗಿರಲು ಅನುಕೂಲವಾಗುತ್ತದೆ. ತುಂಬ

ಹಗುರವಾಗಿರುವುದರಿಂದ ಬಳಸಲು ಯೋಗ್ಯವಾಗಿದೆ. ಅಡುಗೆ ಮನೆಯಲ್ಲಿ ಇದು ಮಹಿಳೆಯರಿಗೆ ಪ್ರಿಯವೂ, ಪೂಜನೀಯವೂ, ಬಹೂಪಯೋಗಿಯೂ ಆದ ವಸ್ತುಗಳಲ್ಲೊಂದಾಗಿದೆ.

ಟೊಪ್ಪಿಗೆ



ಗ್ರಾಮೀಣ ಪ್ರದೇಶಗಳಲ್ಲಿ ದನ, ಎಮ್ಮೆ, ಆಡು, ಕುರಿ ಮೇಯಿಸುವವರು ಟೊಪ್ಪಿಗೆಯನ್ನು ಬಳಸುತ್ತಾರೆ. ಮಾನಿಚೇರಿ ಹುಲ್ಲಿನ ಕಡ್ಡಿಯಿಂದ ಹೆಣೆಯುತ್ತಾರೆ. ಈ ಹುಲ್ಲಿನ ಕಡ್ಡಿಯು ಒಂದು ಹಂತಕ್ಕೆ ಬೆಳೆದು ಬಂದಾಗ ಅಂದರೆ ಹೆಚ್ಚು ಎಳೆಯದೂ ಅಲ್ಲ, ಹೆಚ್ಚು ಬಲಿತಿರುವುದೂ ಅಲ್ಲದೆ, ಹೆಣೆಯಲು ಅನುಕೂಲವಾಗುವಂತಹ ಅವಧಿಯಲ್ಲಿ ಅವನ್ನು ಕತ್ತರಿಸಿ ಕೊಂಡು ಹೆಣೆಯುತ್ತಾರೆ. ವರ್ಷದ ಒಂದು ಅವಧಿಯಲ್ಲಿ ಮಾತ್ರ ಈ ಮಾನಿಚೇರಿ ಹುಲ್ಲಿನ ಕಡ್ಡಿಸಿಗುತ್ತದೆ. ಪೋಲಿಸರ ಟೊಪ್ಪಿಗೆಯಂತೆಯೇ ಇದರ ಆಕಾರ ಇರುತ್ತದೆ. ಇದನ್ನು ಹಾಕಿಕೊಳ್ಳುವುದರಿಂದ ಇದು ಬಿಸಿಲಿನ ತಾಪವನ್ನು ತಡೆದು ದೇಹಕ್ಕೆ ಹಿತನೀಡುತ್ತದೆ. ಹುಲ್ಲನ್ನು ಸಂಗ್ರಹಿಸಿ, ಬಿಸಿಲಿನಲ್ಲಿ ಒಂದು ಹದಕ್ಕೆ ಒಣಗಿಸಿ ಟೊಪ್ಪಿಗೆ ಹೆಣೆಯುವುದು ಒಂದು ವಿಶೇಷ ಕರಕುಶಲ ಕಲೆಯಾಗಿದೆ.

ತಾಬಂಡಿ



ಊಟ ಮಾಡಲು ಜನಪದರು ಬಳಸುವ ತಟ್ಟೆ. ಇದು ಸಾಮಾನ್ಯ ತಾಟು/ಬಟ್ಟಲುಗಳಿಗಿಂತ ದೊಡ್ಡ ಗಾತ್ರದಲ್ಲಿದೆ. ತಳದಿಂದ ಮೇಲೇಳುವ ಅಂಚು ಅನುಕ್ರಮವಾಗಿ ತುಸು ಹೊರಕ್ಕೆ, ನೇರವಾಗಿ ಮತ್ತು ತುಸು ಒಳಕ್ಕೆ ಬಾಗಿರುತ್ತದೆ. ಏನಿದ್ದರೂ ಈ ಅಂಚು ಸುಮಾರು ಒಂದೂವರೆ ಇಂಚಷ್ಟೆ ಇದೆ. ತಾಬಂಡಿಗಳ ಗಾತ್ರದಲ್ಲಿ ವ್ಯತ್ಯಾಸಗಳಿವೆ, ಸಹಜವಾಗಿ ತೂಕದಲ್ಲೂ. ಸಾಮಾನ್ಯ ತಾಬಂಡಿ ಸುಮಾರು ಒಂದು ಕೆ.ಜಿ. ಭಾರವಿರುತ್ತದೆ. ತಾಬಂಡಿಯನ್ನು ದಪ್ಪ ಕಂಚಿನ ತಗಡಿನಿಂದ ನಿರ್ಮಿಸಲಾಗಿರುತ್ತದೆ. ಇದನ್ನು ಬಳಸಿ ಊಟ ಮಾಡುವುದು ಆರೋಗ್ಯದಾಯಕವೆಂಬುದು ಜನಪದರ ಅನುಭವ. ಅಡ್ಡಣಿಗೆಯ ಮೇಲೆ ತಾಬಂಡಿಯನ್ನು ಇರಿಸಿಕೊಂಡು ಊಟ ಮಾಡುವುದೇ ಜನಪದರಿಗೆ ಸಂತೃಪ್ತಿಯ ಒಂದು ವಿಚಾರ.

ತೀಡೋಗಣೆ/ಬೇಳೆಗುಂಡು



ಬೇಳೆ ಕಾಳುಗಳನ್ನು ಬೇಯಿಸಿದ ಬಳಿಕ ಅದನ್ನು ತೀಡುಗಣೆ ಬಳಸಿಕೊಂಡು ಒಂದಿಷ್ಟು ಮಸೆದು, ಜಜ್ಜಿ ಕೊಳ್ಳುತ್ತಾರೆ. ತುರ್ತಾಗಿ ಒಂದಿಷ್ಟು ಚಟ್ನಿ ಅರೆದುಕೊಳ್ಳುವುದಕ್ಕೂ ತೀಡುಗಣೆಯು ಬಳಕೆಯಾಗುತ್ತದೆ. ಇದರ ಗಾತ್ರದಲ್ಲಿ ವ್ಯತ್ಯಾಸಗಳಿವೆ. ಇದರ ಹಿಡಿಕೆಯು ಸುಮಾರು ಒಂದು ಅಡಿ ಉದ್ದವಿದ್ದು ಬುಡದಲ್ಲಿ ಸಣ್ಣ ಗಡ್ಡೆಯಂತಹ ರಚನೆ ಇರುತ್ತದೆ. ಗಡ್ಡೆಯು ಸುಮಾರು ಎರಡು ಇಂಚಿನಿಂದ ನಾಲ್ಕು ಇಂಚುಗಳ ವ್ಯಾಸವಿರುತ್ತದೆ. ಇದನ್ನು ಇಂಗಳಾರದ ಮರದಿಂದ ತಯಾರಿಸುತ್ತಾರೆ. ಇಂಗಳಾರ ಔಷಧಿ ಗುಣವುಳ್ಳ ಮರ.



ತುಪ್ಪದ ಕುಡಿಕೆ–ಚಟಿಗೆ



ತುಪ್ಪ ಹಾಕಿಡಲು ಬಳಸುವ ಮಣ್ಣಿನ ಸಾಧನ. ಇದು ಸುಮಾರು ಆರು ಇಂಚು ಎತ್ತರವಿದ್ದು ಮೇಲ್ಭಾಗದ ವ್ಯಾಸವು ಸುಮಾರು ನಾಲ್ಕು ಇಂಚು ಹೊಂದಿರುತ್ತದೆ. ಇದು ದೀರ್ಘಕಾಲದ ವರೆಗೂ ತುಪ್ಪ ಕೆಡದಂತೆ ಕಾಪಾಡುವ ಗುಣ ಹೊಂದಿದೆ ಎನ್ನುವುದು ಜನಪದರ ಅನುಭವ.

ತವೆ/ಹೆಂಚು



ರೊಟ್ಟಿ ಬೇಯಿಸಲು ಬಳಸುವ ಲೋಹದ ಸಾಧನ. ಇದರ ವ್ಯಾಸ ಸುಮಾರು ಒಂಭತ್ತು ಇಂಚು ತೆಳುವಾಗಿದೆ. ಇದು ಸುಮಾರಾಗಿ ತೆಪ್ಪದ ಆಕಾರದಲ್ಲಿರುತ್ತದೆ. ದನಿಯಾ, ಮೆಣಸಿನಕಾಯಿ, ಕಡಲೆಬೀಜ ಇತ್ಯಾದಿಗಳನ್ನು ಹುರಿಯಲು ಕೂಡ ಬಳಕೆಯಾಗುತ್ತದೆ. ತವೆಗಳ ಗಾತ್ರದಲ್ಲಿ ವ್ಯತ್ಯಾಸವಿದೆ. ಲೋಹದಿಂದ ಕೂಡ ತವೆಗಳನ್ನು ನಿರ್ಮಿಸುತ್ತಾರೆ.



ತೊಟ್ಟಿಲು



ಮಕ್ಕಳನ್ನು ತೂಗಿ ಮಲಗಿಸಲು ಬಳಸುವ ಸಾಧನ. ಇದು ಸುಮಾರು ಒಂದೂವರೆ ಅಡಿ ಎತ್ತರ, ಮೂರು ಅಡಿ ಉದ್ದ, ಒಂದೂವರೆ ಅಡಿ ಅಳತೆಯುಳ್ಳದ್ದಾಗಿರುತ್ತದೆ. ಇದರ ಒಳಭಾಗದಲ್ಲಿ ಹಲಗೆಗಳನ್ನು ಜೋಡಿಸಲು ಎರಡು ಪಟ್ಟಿಗಳಿರುತ್ತವೆ. ಹಲಗೆಗಳನ್ನು ಜೋಡಿಸಲು ಕ್ರಮವಾಗಿ ನಾಲ್ಕು ಕಂಬಗಳಿದ್ದು, ಕೆಲವು ತೊಟ್ಟಿಲುಗಳಲ್ಲಿ ಇದರ ಮೇಲೆ ಬುಗುರಿಯಾಕಾರದ ಮಣಿಗಳಿರುತ್ತವೆ. ಮಕ್ಕಳ ನಾಮಕರಣದ ಬಳಿಕ ಸಾಮಾನ್ಯವಾಗಿ ತೊಟ್ಟಲಿನ ಬಳಕೆಯಾಗುತ್ತದೆ. ಆರ್ಥಿಕತೆಗನುಗುಣವಾಗಿ ತೊಟ್ಟಿಲನ್ನು ಬಳಕೆಮಾಡುತ್ತಾರೆ. ತೊಟ್ಟಿಲನ್ನು ಸಾಮಾನ್ಯವಾಗಿ ತೇಗ, ಹಲಸು ಮುಂತಾದ ಮರದಿಂದ ತಯಾರಿಸುತ್ತಾರೆ. ತೊಟ್ಟಿಲುಗಳನ್ನು ಕಲಾತ್ಮಕವಾಗಿ ರಚಿಸುತ್ತಾರೆ. ಲೋಹಗಳಿಂದಲೂ ತೊಟ್ಟಿಲುಗಳನ್ನು ನಿರ್ಮಿಸುತ್ತಾರೆ.



ತೊರಳಿ ಕಲ್ಲು/ತೊಳಲಿಕಲ್ಲು



ಭತ್ತವನ್ನು ಅಕ್ಕಿ ಮಾಡಿಕೊಳ್ಳಲು ಬಳಸುವ ಒಂದು ವಿಧದ ಬೀಸುವಕಲ್ಲು. ಇದರಲ್ಲೂ ಬೀಸುಕಲ್ಲಿನ ಹಾಗೆಯೇ ಎರಡು ಮುಖ್ಯ ಭಾಗಗಳಿವೆ–ಅಡಿಗಲ್ಲು ಮತ್ತು ತಿರುಗಲ್ಲು. ಅಡಿಗಲ್ಲಿನ ಮೇಲ್ಭಾಗ ಮತ್ತು ತಿರುಗಲ್ಲಿನ ಕೆಳಭಾಗದಲ್ಲಿ ಭತ್ತವು ಸಾಧಾರಣವಾಗಿ ಅಡಗಬಲ್ಲಷ್ಟು ಗಾತ್ರದ ಅನೇಕ ಗೆರೆಗಳನ್ನು ಕೊರೆಯಲಾಗಿರುತ್ತದೆ. ಆದರೆ ಅವು ಭತ್ತವನ್ನು ಹಿಡಿದಿಡದೆ ಜಾರುವುದಕ್ಕೆ ಅನುಕೂಲವಾಗುವಂತೆ ವಿನ್ಯಾಸಗೊಂಡಿರುತ್ತವೆ. ಈ ತಂತ್ರಜ್ಞಾನದಿಂದ ಈ ಬೀಸುಗಲ್ಲನ್ನು ತಿರುಗಿಸಿದಾಗ ಭತ್ತದ ಹೊಟ್ಟಷ್ಟೆ ಕಳಚಿಕೊಂಡು ಅಕ್ಕಿಯು ಸಿದ್ಧವಾಗುತ್ತದೆ ಮಾತ್ರವಲ್ಲ, ಅಕ್ಕಿಯು ತುಂಡಾಗುವುದು ಕಡಿಮೆ. ತಿರುಗಲ್ಲಿನ ಇನ್ನೊಂದು ವೈಶಿಷ್ಟವೆಂದರೆ ಅದರ ರಂಧ್ರವು ತುಂಬ ದೊಡ್ಡದಾಗಿದ್ದು ಹೆಚ್ಚು ಪ್ರಮಾಣದ ಭತ್ತವನ್ನು ಸುರಿಯಲು ಅನುಕೂಲವಾಗುವಂತಿರುತ್ತದೆ. ತೊರಳಿ ಕಲ್ಲುಗಳು ಉಳಿದ ಬೀಸುಕಲ್ಲುಗಳಿಗಿಂತ ಗಾತ್ರದಲ್ಲಿ ದೊಡ್ಡದಿರುತ್ತವೆ ಹಾಗೂ ಇವುಗಳ ಗಾತ್ರದಲ್ಲಿ ವ್ಯತ್ಯಾಸಗಳಿವೆ. ಇದನ್ನು ಸಾಮಾನ್ಯವಾಗಿ ಇಬ್ಬರು ಸೇರಿಕೊಂಡು ಬೀಸುತ್ತಾರೆ.





ಇದನ್ನು ಮರದಿಂದಲೂ, ಕಲ್ಲಿನಿಂದಲೂ ತಯಾರಿಸುತ್ತಾರೆ. ಕರ್ನಾಟಕದ ಗದಗ, ಧಾರವಾಡ, ಹಾವೇರಿ ಮುಂತಾದ ಜಿಲ್ಲೆಗಳಲ್ಲಿ ಇದನ್ನು ಹೆಚ್ಚಾಗಿ ಬಳಸುತ್ತಾರೆ. ರೈಸ್ ಮಿಲ್ಲುಗಳು ಮತ್ತು ಗಿರಣಿಗಳು ಬಂದ ಬಳಿಕ ತೊರಳಿ ಕಲ್ಲುಗಳು ನಿಧಾನವಾಗಿ ಕಣ್ಮರೆಯಾಗುತ್ತಿವೆ.

ದಿನಸಿ ಬಟ್ಟಲು



ಅಡುಗೆ ಮನೆಯಲ್ಲಿ ಸಂಬಾರ ಪದಾರ್ಥಗಳನ್ನು ಇಟ್ಟುಕೊಳ್ಳಲು ಬಳಸುವ ಸಾಧನ. ಇದು ಸುಮಾರು ೨೦ ಇಂಚು ವ್ಯಾಸವನ್ನು ಹೊಂದಿರುತ್ತದೆ. ಇದರಲ್ಲಿ ಸುಮಾರು ಐದು ಇಂಚು ವ್ಯಾಸದ ಐದು ಗುಳಿಗಳಿವೆ. ದಿನಸಿಬಟ್ಟಲು ದುಂಡಾಗಿದ್ದು, ಹಿಡಿದುಕೊಳ್ಳಲು ಹಿಡಿಕೆ ಇರುತ್ತದೆ. ಸಾಗುವಾನಿ, ಬೇವು ಮುಂತಾದ ಮರಗಳಿಂದ ತಯಾರಿಸುತ್ತಾರೆ. ಈ ಸಾಧನದಲ್ಲಿ

ಸಂಬಾರ ಪದಾರ್ಥಗಳನ್ನು ಇಡುವುದರಿಂದ ಅವು ಬಹಳ ದೀರ್ಘಕಾಲ ಬಾಳಿಕೆ ಬರುತ್ತವೆ ಎನ್ನುವುದು ಬಳಕೆದಾರರ ಅನುಭವ. ಪ್ಲಾಸ್ಟಿಕ್, ಸ್ಟೀಲ್, ಸಿಲ್ವರ್, ತಾಮ್ರ, ಕಂಚಿನ ಬಟ್ಟಲು ಬಂದಮೇಲೆ ಈ ವಸ್ತುವಿನ ಬಳಕೆ ಕಡಿಮೆಯಾಗಿದೆ.

ದೀಪದ ಗೊಗ್ಗೆ



ಸೀಮೆಎಣ್ಣೆಬುಡ್ಡಿ/ ದೀಪವನ್ನು ಇರಿಸಲು ಬಳಸುವ ಸಾಧನ. ಇದು ಇಂಗ್ಲಿಷನ ಐ ಅಕಾರದಲ್ಲಿದೆ. ತಮ್ಮ ಅನುಕೂಲಕ್ಕೆ ತಕ್ಕ ಎತ್ತರದಲ್ಲಿ ಗೊಗ್ಗೆಯನ್ನು ಗೋಡೆಗೆ ನೇತುಹಾಕಿ ಗೊಗ್ಗೆಯ ಕೆಳಭಾಗದಲ್ಲಿರುವ ಅಡ್ಡಪಟ್ಟಿಯ ಮೇಲ್ಭಾಗದಲ್ಲಿ ದೀಪವನ್ನು ಇರಿಸಲಾಗುತ್ತದೆ. ವಿದ್ಯುತ್ ದೀಪಗಳು ಹಾಗೂ ಕ್ಯಾಂಡ್‌ಲ್‌ಗಳ ಬಳಕೆ ಬಂದ ನಂತರ ಇದರ ಬಳಕೆ ಕಡಿಮೆಯಾಗಿದೆ.

ದೋಸೆ ಮುಚ್ಚಳ



ಹೆಂಚಿನ ಮೇಲೆ ದೋಸೆ ಬೇಯಿಸುವಾಗ ಹೆಂಚನ್ನು ಮೇಲಿನಿಂದ ಮುಚ್ಚಲು ಬಳಸುವ ವಸ್ತು. ಇದನ್ನು ಮುಚ್ಚುವುದರಿಂದ ದೋಸೆಯು ಹೆಂಚಿನಲ್ಲಿ ಬೇಗ ಬೇಯುತ್ತದೆ. ಇದನ್ನು ಕಲ್ಲಿನ ಅಥವಾ ಕಬ್ಬಿಣದ ಹೆಂಚಿನ ಮೇಲೆ ಬಳಸಬಹುದು. ಇದು ವೃತ್ತಾಕಾರದಲ್ಲಿದ್ದು ಮೇಲ್ಭಾಗದಲ್ಲಿ ಹಿಡಿಕೆ ಇರುತ್ತದೆ. ಇದರ ವ್ಯಾಸ ಸುಮಾರು ಒಂದು ಅಡಿ, ಸುಮಾರು ಒಂದೂವರೆ ಇಂಚು ಎತ್ತರವಿರುತ್ತದೆ. ಒಳಭಾಗವು ಟೊಳ್ಳಾಗಿದೆ. ಇದನ್ನು ಮಣ್ಣಿನಿಂದ ತಯಾರಿಸಲಾಗುತ್ತದೆ. ಇತ್ತೀಚಿಗೆ ಲೋಹಗಳಿಂದಲೂ ತಯಾರಾದ ಮುಚ್ಚಳಗಳು ಬಳಕೆಗೆ ಬಂದಿವೆ.



ನಾಕರಬಟ್ಲು



ಉಪ್ಪಿನಕಾಯಿ, ಪಲ್ಯಗಳು, ಚಟ್ನಿ ಮುಂತಾದುವುಗಳನ್ನು ಬೇರೆ ಬೇರೆಯಾಗಿಯೇ ಹಾಕಿಕೊಂಡು ಏಕಕಾಲದಲ್ಲಿ ಬಡಿಸಲು ಬಳಸುವ ಸಾಧನ. ಇದರ ಬಟ್ಟಲುಗಳು ಸು. ನಾಲ್ಕು ಇಂಚು ವ್ಯಾಸ, ಐದು ಇಂಚು ಎತ್ತರ ಇರುತ್ತದೆ. ಊಟಕ್ಕೆ ಬಡಿಸುವಾಗ ಕಡಿಮೆ ಪಾತ್ರೆಗಳ ಬಳಕೆ ಮತ್ತು ಶ್ರಮದ ಉಳಿತಾಯಕ್ಕೆ ನಾಕರಬಟ್ಲಿನಂಥ ಸಲಕರಣೆಗಳು ಸಹಾಯಕವಾಗುತ್ತವೆ. ಇದರ ಬಟ್ಟಲುಗಳು ಹಿಡಿಕೆಯ ಸುತ್ತಲೂ ಇದ್ದು ಅವನ್ನು ಒಟ್ಟಾಗಿ ನೇತಾಡಿಸಲು ಸಾಧ್ಯ. ಇದನ್ನು ಮಣ್ಣು, ಮರ ಮತ್ತು ಲೋಹಗಳಿಂದ ತಯಾರಿಸುತ್ತಾರೆ. ಇವು ಇಂದು ಹೋಟೆಲ್‌ಗಳಲ್ಲೂ ಹೆಚ್ಚು ಬಳಕೆಯಲ್ಲಿವೆ.'



ನಿಂಬೆ ಒತ್ತೊಳ್ಳು



ನಿಂಬೆಯ ರಸವನ್ನು ಹಿಂಡಲು ಬಳಸುವ ಸರಳ ಸಲಕರಣೆ. ಒಂದೇ ಗಾತ್ರದ ಎರಡು ಪುಟ್ಟ ಮರದ ಹಲಗೆಗಳಿಂದ ಇದರ ನಿರ್ಮಾಣ. ಹಿಡಿಕೆಯ ಆಕಾರದ ಮುಂದೆ ಒಂದರಲ್ಲಿ ನಿಂಬೆ ಹೋಳು ನಿಲ್ಲುವಷ್ಟು ಗಾತ್ರದ ಒಂದು ಅರೆರಂಧ್ರವಿದೆ. ರಂಧ್ರದ ಕೆಳಗೆ ಸಣ್ಣ ಸಣ್ಣ ನಾಲ್ಕೋ ಐದೋ ತೀರ ಕಿರು ರಂಧ್ರಗಳು ಇದ್ದು ಹಿಂಡಲ್ಪಟ್ಟ ನಿಂಬೆರಸವು ಕೆಳಗೆ ಒಸರುವುದಕ್ಕೆ ಅನುವಾಗುತ್ತದೆ. ಇನ್ನೊಂದರಲ್ಲಿ ನಿಂಬೆಯ ಹೋಳನ್ನು ಮೇಲಿನಿಂದ ಒತ್ತಲು ಅನುಕೂಲವಾಗುವಂತೆ ಮರದ ಒಂದು ಸಣ್ಣ ಉಂಡೆಯನ್ನು ಮೊಳೆ ಹೊಡೆದು ಜೋಡಿಸಲಾಗುತ್ತದೆ. ಎರಡೂ ಹಲಗೆಗಳ ತುದಿಗೆ ಒಂದು ಬಿಜಾಗ್ರಿಯನ್ನು/ಮರಡನ್ನು ಜೋಡಿಸುತ್ತಾರೆ. ಇದರಿಂದ ಎರಡು ಹಲಗೆಗಳು ಸಲೀಸಾಗಿ ಕಾರ್ಯವೆಸಗಲು ಅನುಕೂಲವಾಗುತ್ತದೆ. ಈಗ ಪ್ಲಾಸ್ಟಿಕ್, ಲೋಹದ ಒತ್ತೊಳ್ಳುಗಳು ಬಂದಿವೆ. ಆದುದರಿಂದ ಮರದ ಒತ್ತೊಳ್ಳುಗಳ ಬಳಕೆ ಕಡಿಮೆಯಾಗಿದೆ.

ನೆಲುವು/ಸಿಕ್ಕ





ಹಾಲು, ಮೊಸರು, ಮಜ್ಜಿಗೆ, ತುಪ್ಪ ಇತ್ಯಾದಿ ಪದಾರ್ಥಗಳನ್ನು ಇರಿಸಿದ ಗಡಿಗೆಗಳು ಬೆಕ್ಕು, ಮಕ್ಕಳ ಕೈಗೆ ಸಿಗದಂತೆ ಮತ್ತು ಕೆಡದಂತೆ ಕಾಪಾಡಿ ಇಟ್ಟುಕೊಳ್ಳಲು ಬಳಸುವ ಸಾಧನ. ಇದನ್ನು ಮನೆಯೊಳಗೆ ಹೆಚ್ಚಾಗಿ ಜನರು ಅಡ್ಡಾಡದ ಜಾಗದಲ್ಲಿ ಅಟ್ಟದ ತೊಲೆ, ಅಡ್ಡ, ಕೊಕ್ಕೆ ಮುಂತಾದುವುಗಳಿಗೆ ನೇತುಹಾಕಲಾಗುತ್ತದೆ. ಮೆದೆಹುಲ್ಲು/ನೊದೆ ಹುಲ್ಲಿನಿಂದ ತಳಸಿಂಬೆಯನ್ನು ತಯಾರಿಸಿಕೊಳ್ಳುತ್ತಾರೆ. ಮೂರು ಕಡೆಗಳಿಂದ ಎಳೆದ ಹುರಿಗಳನ್ನು ಸಿಂಬೆಗೆ ಜೋಡಿಸಲಾಗುತ್ತದೆ. ಸಿಂಬೆಯಲ್ಲಿ ಗಡಿಗೆಗಳನ್ನು ಇಡಲಾಗುತ್ತದೆ. ಪ್ರಾದೇಶಿಕವಾಗಿ ಲಭ್ಯವಾಗುವ ಬಳ್ಳಿ, ಹುಲ್ಲು, ಹಳೆಬಟ್ಟೆ, ಹುರಿಹಗ್ಗ ಇತ್ಯಾದಿಗಳಿಂದ ನೆಲುವನ್ನು ತಯಾರಿಸಿಕೊಳ್ಳಬಹುದು. ಇತ್ತೀಚೆಗೆ ನೆಲುವು ಹಾಲು, ಮೊಸರುಗಳನ್ನು ಇಡಲು ಬಳಕೆಯಾಗುವುದರ ಬದಲಾಗಿ ಅಲಂಕಾರಿಕ ಸಾಧನವಾಗಿ ಮಾರ್ಪಟ್ಟು ಹೂಗಿಡಗಳನ್ನು ತೂಗುತ್ತದೆ.

ಪಡ್ಡಿನ ಹಂಚು/ಪಡ್ಡಂಚು





ಅಕ್ಕಿಯಿಂದ ತಯಾರಿಸುವ ಪಡ್ಡು ಎಂಬ ತಿಂಡಿಯನ್ನು ಬೇಯಿಸುವ ಹಂಚು. ವೃತ್ತಾಕಾರದಲ್ಲಿರುತ್ತದೆ. ಈ ಹಂಚುಗಳಲ್ಲಿ ವ್ಯತ್ಯಾಸಗಳಿವೆ. ಇದರಲ್ಲಿ ಸುಮಾರು ಒಂದು ಇಂಚು ಆಳ ಒಂದೂವರೆ ಇಂಚು ವ್ಯಾಸದ (ಅಳತೆಯಲ್ಲಿ ಸ್ವಲ್ಪ ವ್ಯತ್ಯಾಸವಿದೆ) ಐದರಿಂದ ಹನ್ನೊಂದು ಗುಳಿಗಳಿರುತ್ತವೆ. ಇದರಲ್ಲಿ ಒಂದಿಷ್ಟು ಎಣ್ಣೆ ಹೊಯ್ದು ಪಡ್ಡನ್ನು ಬೇಯಿಸುತ್ತಾರೆ. ಇದನ್ನು ಬಳಪದ ಕಲ್ಲಿನಿಂದ ತಯಾರಿಸಿದ್ದಾರೆ. ಪಡ್ಡಿನ ಹಂಚುಗಳನ್ನು ಲೋಹದಿಂದಲೂ ನಿರ್ಮಿಸುತ್ತಾರೆ. ಇದರ ಬಳಕೆ ಉತ್ತರ ಕರ್ನಾಟಕದಲ್ಲಿ ಹೆಚ್ಚು. ಬೆಸಸಂಖ್ಯೆಯ ಗುಳಿಗಳ ಹಂಚುಗಳೇ ಹೆಚ್ಚಾಗಿದ್ದರೂ ಅಪೂರ್ವವಾಗಿ ಸಮಸಂಖ್ಯೆಯ ಗುಳಿಗಳವೂ ಇವೆ.

ಪುರಾತನ ಇಟ್ಟಿಗೆ



ಇದು ಶಾತವಾಹನರ ಕಾಲಕ್ಕೆ ಸೇರಿದ್ದು (ಸುಮಾರು ಎರಡನೇ ಶತಮಾನ). ಗೋಡೆಕಟ್ಟಲು ಬಳಸಿದ್ದ ಪರಿಕರ. ಇದು ಬಹಳ ದೊಡ್ಡಗಾತ್ರದ ಇಟ್ಟಿಗೆ. ಇದು ಸುಮಾರು ಇಪ್ಪತ್ತು ಇಂಚು ಉದ್ದ, ಸುಮಾರು ಹತ್ತು ಇಂಚು ಅಗಲ, ಸುಮಾರು ಐದು ಇಂಚು ದಪ್ಪವಾಗಿದೆ. ಇಟ್ಟಿಗೆಯನ್ನು ಮಣ್ಣಿನಿಂದ ತಯಾರಿಸಲಾಗಿದೆ. ಈ ಇಟ್ಟಿಗೆಯು ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕು ಈಸೂರು ಗ್ರಾಮದಲ್ಲಿ ದೊರೆತಿದೆ.

ಬಟ್ಟೆ ಗೂಟ





ಗೋಡೆಗಳ ನಿರ್ದಿಷ್ಟ ಎತ್ತರದಲ್ಲಿ ಬಟ್ಟೆಗಳನ್ನು, ಸಣ್ಣ ಚೀಲಗಳನ್ನು ನೇತು ಹಾಕಲು ಬಳಸುವ ಸಾಧನ. ಇದರಲ್ಲಿ ಪಟ್ಟಿ ಮತ್ತು ಗೂಟ ಎಂಬ ಎರಡು ಮುಖ್ಯ ಭಾಗಗಳಿರುತ್ತವೆ. ಗೂಟಗಳ ಸಂಖ್ಯೆಯು ಅಗತ್ಯಾನುಸಾರ ವ್ಯತ್ಯಾಸವಾಗುತ್ತದೆ. ಬಟ್ಟೆಗೂಟದ ಪಟ್ಟಿಯನ್ನು ಮೊಳೆಗಳಿಂದ ಗೋಡೆಗೆ ಭದ್ರವಾಗಿ ಜೋಡಿಸಲಾಗುತ್ತದೆ. ಲೋಹ, ಪ್ಲಾಸ್ಟಿಕ್ ಹ್ಯಾಂಗರ್‌ಗಳು ಬಂದ ನಂತರ ಮರದ ಬಟ್ಟೆಗೂಟಗಳು ಮರೆಯಾಗುತ್ತಿವೆ.

ಬಾಣಂತಿ ಕತ್ತಿ



ಮಲೆನಾಡಿನ ಶ್ರೀಮಂತ ಮನೆಗಳಲ್ಲಿ ಬಾಣಂತಿಯರು ಬಳಸುವ ವಿಶೇಷ ರಕ್ಷಣಾ ಸಾಧನ. ಇದು ಸುಮಾರು ಏಳುವರೆ ಇಂಚು ಉದ್ದವಾಗಿದ್ದು, ಹಿಡಿಯ ಭಾಗ ಆರು ಕೊಂಡಿಗಳನ್ನೊಳಗೊಂಡಿದೆ. ಉಕ್ಕಿನಿಂದ ತಯಾರಾದ ಕತ್ತಿಯು ಅಲಂಕಾರಿಕವಾಗಿದೆ. ಸುಮಾರು ಇಪ್ಪತ್ತನೇ ಶತಮಾನದ ಮೂವತ್ತರ ಅಥವಾ ನಲವತ್ತರ ದಶಕದಲ್ಲಿ ಉಪಯೋಗಿಸಲ್ಪಡುತ್ತಿತ್ತು. ಬಾಣಂತಿಯಾದವರು ಬಯಲಿಗೆ ಹೋಗುವಾಗ ಅಥವಾ ಒಂಟಿಯಾಗಿರುವಾಗ ತಮ್ಮ ಆತ್ಮರಕ್ಷಣೆಗಾಗಿ ಸೊಂಟದ ಪಟ್ಟಿಗೆ ಸಿಕ್ಕಿಸಿಕೊಂಡು ಹೋಗುತ್ತಿದ್ದರು. ಬಾಣಂತಿ ಮತ್ತು ಮಗುವನ್ನು ತವರಿನಿಂದ ಗಂಡನ ಮನೆಗೆ ಕಳುಹಿಸುವಾಗ ಮಗುವಿಗೆ ದೃಷ್ಟಿಯಾಗದಿರಲೆಂದು ಈ ಕತ್ತಿಯನ್ನು ತೊಟ್ಟಿಲಿನಲ್ಲಿಟ್ಟು ಕಳುಹಿಸುತ್ತಿದ್ದರೆಂದು ತಿಳಿದುಬರುತ್ತದೆ. ಉಪಯೋಗದಲ್ಲಿ ಪುಟ್ಟ ವ್ಯತ್ಯಾಸವಿದ್ದರೂ ತುಳುನಾಡಲ್ಲಿನ 'ಗೆಜ್ಜೆಕತ್ತಿ'ಗಳೂ ಇದೇ ಮಾದರಿಯವು ಇವನ್ನು ಕೇವಲ ಬಾಣಂತಿಯರು ಮಾತ್ರ ಬಳಸದೆ ಆಢ್ಯ ಮನೆತನದ ಮಹಿಳೆಯರು ಸದಾ ಇಟ್ಟುಕೊಳ್ಳುತ್ತಾರೆ.

ಬಾದ್ಲ(ಬಾದಾಳ)



ಮಾಳಿಗೆ ಮನೆಯ ಒಳಗಡೆ ಬೆಳಕಿಗಾಗಿ ಮಹಡಿಯ(ಮಾಳಿಗೆ) ಮೇಲೆ ಉಪಯೋಗಿಸುತ್ತಿದ್ದ ಸಾಧನ. ಇದರ ಮೂಲಕ ಬೆಳಕು ಹಾದು ಬರುತ್ತದೆ. ಇದು ಸುಮಾರು ಒಂದುವರೆ ಅಡಿಯಿಂದ ಎರಡು ಅಡಿ ಉದ್ದವಿದ್ದು ಕೊಳವೆಯ ಆಕಾರವಿದಲ್ಲಿರುತ್ತದೆ. ಮೇಲ್ಭಾಗ ಮತ್ತು ಕೆಳಬಾಗದ ಕೊಳವೆಯ ಬಾಯಿಯು ಒಂದೂವರೆ ಅಡಿ ವ್ಯಾಸ ಹೊಂದಿರುತ್ತದೆ. ಹೆಚ್ಚಾಗಿ ಬಯಲು ಸೀಮೆಯಲ್ಲಿ ಇದರ ಉಪಯೋಗ ಕಂಡು ಬರುತ್ತದೆ. ಏಕೆಂದರೆ ಮಳೆಯು ಬಯಲು ಸೀಮೆಯಲ್ಲಿ ಕಡಿಮೆಯಾದುದರಿಂದ ಮನೆಯ ಮೇಲ್ಭಾಗದಲ್ಲಿಟ್ಟು ಬೆಳಕು ಪ್ರವೇಶಿಸುವಂತೆ ಮಾಡಿರುತ್ತಾರೆ. ಮಳೆ ಬಂದಾಗ ತೂತಿನ ಭಾಗವನ್ನು ತಟ್ಟೆಯಾಕಾರದ ಮಣ್ಣಿನ ಸಾಧನದಿಂದ ಮುಚ್ಚುತ್ತಾರೆ. ಬಾದ್ಲವು ಗಾರೆಯಿಂದ ನಿರ್ಮಾಣವಾಗುತ್ತದೆ. ಈಗ ಇದರ ಉಪಯೋಗವಿಲ್ಲ. ಹಿಂದಿನ ಕಾಲದ ಬಯಲು ಸೀಮೆಯ ಭಾಗದ ಮನೆಗಳ ನಿರ್ಮಾಣಕ್ಕೆ ಉಪಯೋಗಿಸುವ ಸಾಧನವಾಗಿತ್ತು.

ಬಾನಸಾಲು/ಅಡಕಲು ಗಡಿಗೆಗಳು



ಅಡುಗೆಮನೆಯಲ್ಲಿ ಅಥವಾ ಮನೆಯ ಒಂದು ಮೂಲೆಯಲ್ಲಿ ಒಂದರ ಮೇಲೊಂದರಂತೆ ಇರಿಸುವ ಗಡಿಗೆಗಳ ಸಾಲು. ಐದರಿಂದ ಆರರವರೆಗೆ ಈ ರೀತಿ ಗಡಿಗೆಗಳನ್ನು ಜೋಡಿಸುವ ವಿಧಾನಕ್ಕೆ ಅಡಕಲು ಪದ್ಧತಿ ಎನ್ನುವರು. ಗಡಿಗೆಗಳು ಗಾತ್ರಕ್ಕನುಗುಣವಾಗಿ ಜೋಡಿಸಲ್ಪಡುತ್ತವೆ. ಕೆಳಭಾಗದ ಗಡಿಗೆಯಲ್ಲಿ ರಾಗಿ ಅಥವಾ ಭತ್ತ, ಮತ್ತೊಂದರಲ್ಲಿ ಅಕ್ಕಿ ಮಗುದೊಂದರಲ್ಲಿ ಹುರುಳಿಕಾಳು, ಹೆಸರುಕಾಳು ಗಡಿಗೆಗಳಲ್ಲಿ ವರ್ಷಕ್ಕಾಗುವಷ್ಟು ದವಸಧಾನ್ಯಗಳು–ಹೀಗೆ ಸಂಗ್ರಹಿಸಿಟ್ಟಿಕೊಳ್ಳುವುದು ಸುಲಭ. ಈ ರೀತಿ ಇಡುವುದರಿಂದ ಧಾನ್ಯಗಳನ್ನು ಸಂರಕ್ಷಿಸಿ ಜೋಪಾನವಿಡಲು ಸಾಧ್ಯ. ಮನೆಯ ಶ್ರೀಮಂತಿಕೆ ಈ ಬಾನ ಸಾಲುಗಳ ಆಧಾರದಲ್ಲಿ ವ್ಯಕ್ತವಾಗುತ್ತಿತ್ತು. ಹೆಣ್ಣು ಕೊಡುವವರು ಈ ಬಾನಸಾಲುಗಳನ್ನು ನೋಡಿ ವರನ ಬಗ್ಗೆ ತೀರ್ಮಾನ ಮಾಡುತ್ತಿದ್ದರು. ಈ ಅಡಕಲು ಪದ್ಧತಿ ಕೆಲವು ಭಾಗಗಳಲ್ಲಿ ಈಗಲೂ ಅಪರೂಪವಾಗಿ ಬಳಕೆಯಲ್ಲಿದೆ.

ಬಾರಾಗೂಟ/ಗಿಳಿಗೂಟ



ಬಟ್ಟೆಗಳನ್ನು ನೇತುಹಾಕಲು ಬಳಸುವ ಪರಿಕರ. ಸುಮಾರು ಎರಡು ಇಂಚು ವ್ಯಾಸದ ಪಟ್ಟಿಗೆ ಹತ್ತು ಗೂಟಗಳನ್ನು ಜೋಡಿಸುತ್ತಾರೆ. ಈ ಗೂಟಗಳು ಸುಮಾರು ನಾಲ್ಕು ಇಂಚು ಉದ್ದವಿರುತ್ತದೆ. ಅರ್ಧ ಅಡಿಗೊಂದರಂತೆ ಗೂಟಗಳನ್ನು ಹಾಕಲಾಗುತ್ತದೆ. ಕತ್ತರಿ ವಿನ್ಯಾಸದಲ್ಲಿ ಕೂಡ ಗೋಡೆಯ ಮೇಲೆ ಮೂರು ಗೂಟಗಳು ಬರುವಂತೆ ಹಾಕಿದರೆ ಇದರಲ್ಲಿ ಬಳೆಗಳು, ಬೀಗದ ಕೀ ಬಂಚು, ಉಗುರು ಕತ್ತರಿ, ಟೋಪಿ ಮುಂತಾದ ವಸ್ತುಗಳನ್ನು ನೇತು ಹಾಕಲು ಸಾಧ್ಯ. ಗಿಳಿಗೂಟಗಳನ್ನು ಮರ, ಲೋಹಗಳಿಂದ ತಯಾರಿಸುತ್ತಾರೆ. ಹನ್ನೆರಡು ಗೂಟಗಳು ಇದ್ದಿರಬಹುದರಿಂದ ಬಾರಾಗೂಟ ಎಂದೂ ಕುಸುರಿ ಕೆಲಸದಿಂದ ಮಾಡಿದ ಗಿಳಿಗೂಟಗಳು ಇರುವುದರಿಂದ ಇದಕ್ಕೆ ಗಿಳಿಗೂಟ ಎಂದು ಹೆಸರು ಬಂದಿದೆ. ಚಿತ್ತಾರವಿಲ್ಲದ ಗೂಟಗಳಿಗೂ ಜನ ಗಿಳಿಗೂಟವೆಂದು ಕರೆಯುವುದು ವಾಡಿಕೆ.

ಬಾಳಿ/ಬಾಳೆ



ಕರಿಯುವ ತಿಂಡಿಗಳನ್ನುಹೆಚ್ಚು ಪ್ರಮಾಣದಲ್ಲಿ ತಯಾರಿಸಬೇಕಾದ ಸಂದರ್ಭದಲ್ಲಿ (ಕೂಡುಕುಟುಂಬಗಳಲ್ಲಿ) ಬಳಕೆಯಾಗುವ ಸಾಧನ. ಏಕೆಂದರೆ ಇದು ಬಿಸಿಯಾಗಲು ಹಾಗೂ ತಣಿಯಲು ತುಂಬ ಹೊತ್ತು ಬೇಕಾಗುವುದರಿಂದ ಹೆಚ್ಚು ಪ್ರಮಾಣದಲ್ಲಿ ತಯಾರಿಸುವಾಗ ಮಾತ್ರ ಇದು ಬಳಕೆಯಾಗುತ್ತದೆ. ಇವುಗಳ ಗಾತ್ರದಲ್ಲಿ ವ್ಯತ್ಯಾಸಗಳಿವೆ. ಸಾಮಾನ್ಯ ಬಾಳೆಯ ವ್ಯಾಸವು ಹದಿನಾಲ್ಕು ಇಂಚು ಇರುತ್ತದೆ. ನೆಲದಿಂದ ಹೊರ ಅಂಚಿನ ಎತ್ತರ ನಾಲ್ಕು ಇಂಚು. ಸುಮಾರು ಒಂದು ಇಂಚು ದಪ್ಪ. ಇದನ್ನು ಬಳಪದ ಕಲ್ಲಿನಿಂದ ರಚಿಸುತ್ತಾರೆ. ಇದರಿಂದ ಕರಿದ ತಿಂಡಿಗಳು ತುಂಬ ರುಚಿಕರ ಎನ್ನುವುದು ಜನಪದರ ಅನುಭವ. ಇಂಧನದ ಕೊರತೆಯ ಕಾರಣದಿಂದ ಬರಬರುತ್ತ ಇದರ ಬಳಕೆ ಕಡಿಮೆಯಾಗುತ್ತಿದೆ. ಹಾಗೂ ಕೂಡುಕುಂಬಗಳೂ ವಿರಳವಾಗಿವೆ.



ಬೀಸುವ ಕಲ್ಲು/ಬೀಸೋಗಲ್ಲು



ಜನಪದ ಬದುಕಿನಲ್ಲಿ ತುಂಬ ಪ್ರಧಾನವಾಗಿದ್ದ ಉಪಕರಣ. ಗರತಿಯರಿಗೆ ಇದರ ಕುರಿತು ಭಾವನಾತ್ಮಕ ಹಾಗೂ ಪಾವಿತ್ರ್ಯದ ಭಾವನೆಗಳಿವೆ. ಇದರಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ. ಕೆಳಗಿನ ಭಾಗವು ಅಡಿಗಲ್ಲು/ಹಾಸುಗಲ್ಲು. ಅದರ ಮಧ್ಯದಲ್ಲಿ ಸುಮಾರು ಆರು ಇಂಚು ಎತ್ತರದ ಮರದ ಗೂಟವನ್ನು ಭದ್ರವಾಗಿ ಜೋಡಿಸಲಾಗುತ್ತದೆ. ಮೇಲಿನ ಭಾಗವನ್ನು ತಿರುಗಲ್ಲು ಎಂದು ಕರೆಯುತ್ತಾರೆ. ಇದರ ಮಧ್ಯದಲ್ಲಿ ಸುಮಾರು ಒಂದು, ಒಂದೂವರೆ ಇಂಚು ವ್ಯಾಸದ ರಂಧ್ರವಿರುತ್ತದೆ. ಬೀಸಲು ಅನುಕೂಲವಾಗುವಂತೆ ಈ ಮೇಲಿನ ಕಲ್ಲಿನ ಒಂದು ಪಾರ್ಶ್ವದಲ್ಲಿ ಸುಮಾರು ಎಂಟರಿಂದ ಹತ್ತು ಇಂಚು ಎತ್ತರದ ಮರದ ಗೂಟವನ್ನು ಹಿಡಿಕೆಯಾಗಿ ಜೋಡಿಸಲಾಗುತ್ತದೆ. ಈ ಗೂಟವನ್ನು ಮೇಲಿನ ಕಲ್ಲಿನ ಪಾರ್ಶ್ವದ ರಂಧ್ರದಲ್ಲಿಟ್ಟು ಬಿಗಿಗೊಳಿಸಲು ಅದರ ತಳಕ್ಕೆ ತೆಂಗಿನ ನಾರಿನ ಪುಟ್ಟ ಉಂಡೆಯನ್ನು ಇಟ್ಟು ಗೂಟದ ಮೇಲೆ ಬಡಿದು ಬಿಗಿಗೊಳಿಸಲಾಗುತ್ತದೆ. ದೊಡ್ಡ ಬೀಸುವ ಕಲ್ಲಾಗಿದ್ದರೆ ಎರಡು ಹಿಡಿಕೆಯ ಗೂಟಗಳು ಇಬ್ಬದಿಯಲ್ಲಿ ಇರುತ್ತವೆ. ಇವುಗಳನ್ನು ಇಬ್ಬರು ಅಥವಾ ಹೆಚ್ಚು ಮಂದಿ ಸೇರಿಕೊಂಡು ಬೀಸಬಹುದು. ತಿರುಗಲ್ಲಿನ ರಂಧ್ರದ ಮೇಲ್ಭಾಗದಲ್ಲಿ ಕಾಳುಗಳನ್ನು ಹಾಕಲು ಅನುಕೂಲವಾಗುವಂತೆ ಒಳಚಪ್ಪಟೆಯಾಗಿ ಸುಮಾರು ಎರಡು, ಮೂರು ಇಂಚುಗಳ ವ್ಯಾಸದಲ್ಲಿ ಕೆತ್ತಿರುತ್ತಾರೆ. ಅಕ್ಕಿ, ಗೋಧಿ, ರಾಗಿ, ನವಣೆ, ಜೋಳ ಮುಂತಾದ ಧಾನ್ಯಗಳನ್ನೂ ಕಡಲೆ, ಉದ್ದು, ತೊಗರಿ, ಹೆಸರು ಮುಂತಾದ ಕಾಳುಗಳನ್ನೂ ಬೀಸುವ ಕಲ್ಲಲ್ಲಿ ಹಾಕಿ ಅನುಕ್ರಮವಾಗಿ ಬೇಳೆ, ನುಚ್ಚು, ಹಿಟ್ಟುಗಳಾಗಿ ಬೀಸಿಕೊಳ್ಳಬಹುದು. ಅಗತ್ಯಕ್ಕೆ ತಕ್ಕಂತೆ ಬೀಸುವಾಗ ಹಾಕುವ ಒತ್ತಡ/ಶಕ್ತಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಗೂಟಕ್ಕೆ ಹಗ್ಗವನ್ನು ಕಟ್ಟಿ ನಾಲ್ಕಾರು ಮಂದಿ ಸರದಿ ಪ್ರಕಾರ ಎಳೆಯುತ್ತ ಬೀಸುವಂಥ ಕಲ್ಲುಗಳೂ ಅಪರೂಪವಾಗಿ ಬಳಕೆಯಲ್ಲಿದ್ದುವು. ಇದಕ್ಕೆ ಅನುಕೂಲವಾಗುವಂತೆ ಬೀಸುಗಲ್ಲಿನ ತಳಭಾಗಕ್ಕೆ ಬೇರೆ ಬೇರೆ ವಿನ್ಯಾಸದ/ಗ್ರಾತದ/ದಪ್ಪದ ತಗಡುಗಳನ್ನು ಅಳವಡಿಸಿಕೊಳ್ಳುತ್ತಾರೆ. ಕಲ್ಲಿನ ಒಳಬಾಗವು ಸವೆದಾಗ ಅದಕ್ಕೆ ಮತ್ತೆ ಕಬ್ಬಿಣದ ಉಳಿಯಿಂದ ಪುಟ್ಟ ಪುಟ್ಟ ಏಟು ಹಾಕಿಸಲಾಗುತ್ತದೆ. ಕಲ್ಲು ಮತ್ತೆ ಹಿಂದಿನಂತೆಯೇ ಕಾರ್ಯವೆಸಗುತ್ತದೆ. ಇದಕ್ಕೆ 'ಕಲ್ಲು ಕಟಿಸುವುದು' ಅಥವಾ 'ಮೊಳೆ ಹಾಕುವುದು' ಎಂದು ಕರೆಯುತ್ತಾರೆ.

ಬೀಸುವ ಕಲ್ಲನ್ನು ಕಗ್ಗಲ್ಲು ಕಲ್ಲಿನಿಂದಲೇ ತಯಾರಿಸುತ್ತಾರೆ. ಬೀಸುವ ಕಲ್ಲಿನ ತಿರುಗಲ್ಲಿನಲ್ಲಿ ನವಿಲು, ಗಿಳಿ, ಚಕ್ರ, ಹೂ, ಸೂರ್ಯ, ಚಂದ್ರರ ಕೆತ್ತನೆಗಳನ್ನು ಮಾಡಿರುವುದು ಕಂಡು ಬರುತ್ತದೆ. ಹಿಟ್ಟಿನ ಗಿರಣಿಗಳು ಬಂದ ಬಳಿಕ ಬೀಸುವ ಕಲ್ಲುಗಳು ಮೂಲೆಗುಂಪಾಗಿವೆ. ಜತೆಗೆ ಈ ಸಂಬಂಧವಾಗಿ ಗೃಹಿಣಿಯರ ಮನೋಭಾವದಲ್ಲೂ ವ್ಯತ್ಯಾಸಗಳಾಗಿವೆ. ತತ್ಸಂಬಂಧಿ ಜನಪದ ಗೀತೆಗಳು ನಾಲಿಗೆಗಳಿಂದ ಅಳಿಸಿ ಹೋಗುತ್ತಿವೆ. ಬೀಸುವ ಕಲ್ಲಿನ / ಕೆಲಸದ ಬಗೆಗೆ ಜನಪದರಲ್ಲಿ ಅನೇಕ ವಿಧಿ–ನಿಷೇಧಗಳಿವೆ. ಜನಪದರ ಬದುಕಿನ ವಿವಿಧ ಆಚರಣೆಗಳಲ್ಲಿ ಬೀಸುವ ಕಲ್ಲು ದೊಡ್ಡ ಪಾತ್ರ ವಹಿಸುತ್ತದೆ.



ಬುಜಣಿಗೆ ಬುಟ್ಟಿ



ಮದುವೆ ಸಂದರ್ಭಗಳಲ್ಲಿ ಹೆಣ್ಣು ಮತ್ತು ಗಂಡಿನ ಕಡೆಯವರು ಬಳಕೆ ಮಾಡುವ ಬುಟ್ಟಿ. ದೇವರ ಆಚರಣೆಗೆ ಸಂಬಂಧಿಸಿದ ವಸ್ತುಗಳನ್ನು ಒಂದು ಕಡೆಯಿಂದ ಮತ್ತೊಂದೆಡೆಗೆ ತೆಗೆದುಕೊಂಡು ಹೋಗುವಾಗಲೂ ಸಹ ಈ ಬುಟ್ಟಿಯನ್ನು ಬಳಸುತ್ತಾರೆ. ಆಚರಣೆಗೆ ಹೊಸ ಬುಟ್ಟಿಯನ್ನು ಬಳಸಬೇಕೆಂಬ ನಿಯಮವಿದೆ. ಇದರಲ್ಲಿ ಹೊಸ ಹೊಸ ವಸ್ತುಗಳನ್ನು

ತೆಗೆದುಕೊಂಡು ಹೋಗುತ್ತಾರೆ. ಶುಭಕಾರ್ಯದಲ್ಲಿ ಯಾವುದೇ ಮೈಲಿಗೆಯಾಗಬಾರದೆಂದು ಜನಪದರ ನಂಬಿಕೆಯಾಗಿದೆ. ಮಂಗಳಕಾರ್ಯದಲ್ಲಿ ತಮ್ಮ ತಮ್ಮ ಮನೆ ದೇವರನ್ನು ಪೂಜಿಸುವ ಸಂದರ್ಭದಲ್ಲಿ ಪೂಜಾಸಾಮಗ್ರಿಗಳನ್ನು ಈ ಕುಕ್ಕೆಯಲ್ಲಿ ತೆಗೆದುಕೊಂಡು ಹೋಗುವ ಸಂಪ್ರದಾಯವಿದೆ. ಕುಕ್ಕೆಯ ಮೇಲೆ ಒಂದು ಮುಚ್ಚಳ ಇರುತ್ತದೆ. ಹಿಂದೆ ಜನರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವಾಗ ತಮ್ಮ ಕುಲದೈವ, ಮನೆದೈವ ಆರಾಧ್ಯದೈವಗಳ ಮೂರ್ತಿಗಳನ್ನು ಇಂತಹ ಬುಟ್ಟಿಯಲ್ಲಿ ಇಟ್ಟುಕೊಂಡು ಹೊತ್ತುಕೊಂಡು ಹೋಗುತ್ತಿದ್ದರು.

ಬೇಳೆ ಒಡೆಯುವ ಬೀಸೋಕಲ್ಲು



ತೂಗರಿ, ಉದ್ದು, ಕಡಲೆ, ಪಚ್ಚೆಹೆಸರು ಮುಂತಾದ ದ್ವಿದಳ ಧಾನ್ಯಗಳನ್ನು ಬೀಸಿ ಬೇಳೆಗಳನ್ನು ಮಾಡುವುದಕ್ಕಾಗಿ ಬಳಸುವ ಸಾಧನ. ಇದರಲ್ಲಿ ಮೂರು ಪ್ರತ್ಯೇಕ ಭಾಗಗಳಿವೆ. ನೆಲದಲ್ಲಿ ಭದ್ರವಾಗಿ ಮೇಲಿನ ಎರಡು ಕಲ್ಲುಗಳನ್ನು ಆಧರಿಸಲು ಒಂದು ಅಡಿಗಲ್ಲು ಇದೆ. ಇದರ ಮೇಲೆ ಇನ್ನೊಂದು ಅಡಿಗಲ್ಲು ಇದೆ. ಮೇಲೆ ಇಡುವ ಮೇಲಿನ ಕಲ್ಲು ಸ್ವಲ್ಪ ಭಿನ್ನವಾಗಿದೆ. ಇದನ್ನು ತಿರುಗಿಸಲು ಅನುಕೂಲವಾಗುವಂತೆ ಇದರ ಒಂದು ಬದಿಯಲ್ಲಿ ಹಿಡಿಕೆಯನ್ನು ಹಾಕಲು ಪುಟ್ಟ ರಂಧ್ರಾರ್ಧವಿದೆ. ಬೀಸೋಕಲ್ಲಿನ ಮಧ್ಯದ ಗೂಟದ ಸುತ್ತ ಸಲೀಸಾಗಿ ತಿರುಗಲು ಅನುಕೂಲವಾಗುವಂತೆ ಮಧ್ಯದಲ್ಲಿ ಒಂದು ರಂಧ್ರವಿದೆ. ಮಧ್ಯದ ಗೂಟವನ್ನು ಕಬ್ಬಿಣ/ಮರದಿಂದ ನಿರ್ಮಿಸಲಾಗುತ್ತದೆ. ಅದರ ಎರಡು ಪಕ್ಕಗಳಲ್ಲಿ ಕಾಳುಗಳು ಒಳಗೆ ಸುರಿದುಕೊಳ್ಳಲು ಸಾಧ್ಯವಾಗುವಂತೆ ಇನ್ನೆರಡು ಪುಟ್ಟ ರಂಧ್ರಗಳಿವೆ.



ಅಡಿಗಲ್ಲು, ಅದರ ಮೇಲಿನ ಅಡಿಗಲ್ಲು ಮತ್ತು ಮೇಲಿನ ಕಲ್ಲು ಇವು ಮೂರೂ ವೃತ್ತಾಕಾರದಲ್ಲಿವೆ. ಮೇಲಿನ ಎರಡೂ ಒಂದು ಇಂಚು ದಪ್ಪ. ಸುಮಾರು ಒಂದು ಅಡಿ ವ್ಯಾಸವಿವೆ. ಬೀಸೋಕಲ್ಲುಗಳನ್ನು ಕಗ್ಗಲ್ಲಿನಿಂದ ತಯಾರಿಸುತ್ತಾರೆ. ಬೀಸುವುದಕ್ಕೆ ಯಂತ್ರಗಳು ಬಂದ ಬಳಿಕ ಇವುಗಳ ಬಳಕೆ ಕಡಿಮೆಯಾಗಿದೆ.

ಭಾರಕಲ್ಲು



ಬೀಸುವ ಸಂದರ್ಭದಲ್ಲಿ ಬೀಸುವ ಕಲ್ಲಿನ ಮೇಲೆ ಇಟ್ಟುಕೊಳ್ಳಲು ಬಳಕೆಯಾಗುವ ವಸ್ತು. ಕಲ್ಲಿನ ಮೇಲೆ ಭಾರ ಹಾಕುವುದು ಇದರ ಉದ್ದೇಶ. ಗಟ್ಟಿಕಾಳುಗಳನ್ನು ಬೀಸುವಾಗ ಈ ವಸ್ತುವನ್ನು ಬಳಸುತ್ತಾರೆ. ಇದು ಸುಮಾರು ಆರು ಇಂಚು ಎತ್ತರವಿದ್ದು ತಳವು ಚಪ್ಪಟೆ ಇರುತ್ತದೆ. ಮಧ್ಯಭಾಗದಲ್ಲಿ ಎರಡು ಇಂಚು ರಂಧ್ರವಿರುತ್ತದೆ. ಇದರ ವ್ಯಾಸ ಹತ್ತು ಇಂಚು ಮೇಲ್ಭಾಗದ ವ್ಯಾಸ ಎಂಟು ಇಂಚು. ಕಲ್ಲಿನ ಮೇಲು ಭಾಗದ ಎರಡು ಭಾಗಗಳಲ್ಲಿ ಒಂದಡೆ ಹಿಡಿಕೆ ಹಾಕಲು ಅನುಕೂಲವಿದ್ದು ಸ್ವಲ್ಪ ಹೆಚ್ಚು ಉದ್ದವಾಗಿರುತ್ತದೆ. ಇನ್ನೊಂದಡೆ ಬೀಸುವಾಗ ಕೈಯಿಂದ ದೂಡಿಕೊಳ್ಳುವುದಕ್ಕೆ/ಎಳೆದುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಕಲ್ಲು ಸ್ವಲ್ಪ ಹೆಚ್ಚು ದೂರಕ್ಕೆ ಚಾಚಿಕೊಂಡಿರುತ್ತದೆ. ತೊಗರಿ, ಅಲಸಂಡೆ, ಜೋಳ ಇತ್ಯಾದಿಗಳನ್ನು ಬೇಗ ಒಡೆಯುವ/ಹಿಟ್ಟು ಮಾಡುವ ಉದ್ದೇಶಕ್ಕೆ ಇದನ್ನು ಬಳಸುತ್ತಾರೆ. ಬೀಸುವ ಕಲ್ಲಿನ ಮಧ್ಯದ ಗೂಟಕ್ಕೆ ಇದನ್ನೂ ಸಿಕ್ಕಿಸಿಕೊಳ್ಳಲಾಗುತ್ತದೆ ಇದರ ಮೇಲ್ಭಾಗದಲ್ಲಿ ಚಿತ್ರಗಳಿರುತ್ತವೆ. ಕಪ್ಪು ಕಲ್ಲಿನಿಂದ ತಯಾರಿಸುತ್ತಾರೆ. ಇವುಗಳ ಗಾತ್ರದಲ್ಲಿ ವ್ಯತ್ಯಾಸವಿರುತ್ತದೆ.



ಮಣ್ಣಿನ ಮಗಿ



ಮದುವೆ ಆಚರಣೆಗಳಲ್ಲಿ ಬಳಕೆಯಾಗುತ್ತಿದ್ದ ವಿಶೇಷ ವಸ್ತು. ಇದನ್ನು ಮಗಿ ಎಂದು ಕರೆಯುತ್ತಾರೆ. ಇದರ ಗಾತ್ರದಲ್ಲಿ ವ್ಯತ್ಯಾಸಗಳಿವೆ. ಸಾಮಾನ್ಯವಾಗಿ ಸುಮಾರು ಆರರಿಂದ ಏಳು ಇಂಚು ಉದ್ದ ಹದಿನಾಲ್ಕು ಇಂಚು ಸುತ್ತಳತೆ ಇರುತ್ತದೆ. ಮದುವೆಯ ಸಂಪ್ರದಾಯದಂತೆ ವಧೂವರರಿಗೆ ಸುರಿಗೆ ನೀರು ಹಾಕುವಾಗ(ಸುರಿಗೆ ಸುತ್ತುವ ಕಾರ್ಯಕ್ರಮದಲ್ಲಿ ಮತ್ತು ಅದರ ಬಳಿಕ) ಇವು ಬಳಕೆಯಾಗುತ್ತವೆ. ಅಲ್ಲದೆ ನೀರು ಮಜ್ಜಿಗೆ ಕುಡಿಯಲು ಕೂಡ ಬಳಕೆಯಾಗುತ್ತದೆ.



ಮಡ್ಡೊನಕೆ /ಮೊಡ್ಡೊನಕೆ



ಕಾರ, ಮಸಾಲೆ, ಗುರೆಳ್ಳು ಮುಂತಾದುವನ್ನು ಒರಳಲ್ಲಿ ಹಾಕಿ ಕುಟ್ಟಲು ಬಳಸುವ ಮರದ ಸಾಧನ. ಸುಮಾರು ಒಂದೂವರೆ ಎರಡು ಅಡಿ ಎತ್ತರವಿರುತ್ತದೆ. ಒನಕೆಗಿಂತ ಇದು ಕಡಿಮೆ ಎತ್ತರವಿರುವುದರಿಂದ ಇದನ್ನು ಮೊಡ್ಡೊನಕೆ ಎನ್ನುತ್ತಾರೆ. ಕೆಲವು ಮೊಡ್ಡೊನಕೆಗಳಿಗೆ ಒಂದು ತುದಿಯಲ್ಲಿ ಬಳೆ ಇದ್ದರೆ, ಇನ್ನು ಕೆಲವಕ್ಕೆ ಬಳೆ ಇರುವುದಿಲ್ಲ, ಒನಕೆಯ ತಳವು ಸ್ವಲ್ಪ ಮಟ್ಟಿಗೆ ಅರ್ಧವೃತ್ತಾಕಾರದಲ್ಲಿರುತ್ತದೆ. ಜಂಬೆ, ಸಾಗುವಾನಿ ಮುಂತಾದ ಗಟ್ಟಿ ಮರಗಳನ್ನು ಇದರ ತಯಾರಿಗೆ ಬಳಸಿಕೊಳ್ಳುತ್ತಾರೆ.

ಮಣ್ಣಿನ ಕೊಡ/ಪಟ್ಟಿಕೊಡ



ಮನೆಗೆ/ಮನೆಯಿಂದ ನೀರು ಸಾಗಿಸುವುದಕ್ಕೆ ಬಳಸುವ ಪಾತ್ರೆ. ಇದರ ಒಡಲು ದೊಡ್ಡದು, ಬಾಯಿ ಚಿಕ್ಕದು. ಗಾತ್ರದಲ್ಲಿ ವ್ಯತ್ಯಾಸವಿರುತ್ತದೆ. ಸುಮಾರು ಅರುವತ್ತಕ್ಕಿಂತಲೂ ಹೆಚ್ಚು ಲೀಟರ್ ನೀರನ್ನು ಇದು ಹಿಡಿದಿಟ್ಟುಕೊಳ್ಳಬಲ್ಲದು. ಚಿಕ್ಕ ಕೊಡಗಳನ್ನು ಹೆಂಗಸರು/ಮಕ್ಕಳೂ ದೊಡ್ಡ ಕೊಡಗಳನ್ನು ಗಂಡಸರೂ ನೀರು ತರುವುದಕ್ಕೆ ಉಪಯೋಗಿಸುತ್ತಾರೆ. ಕೆಲವು ಕೊಡಗಳು ಕ್ರೀಡೆಗಳಿಗೂ ಬಳಕೆಯಾಗುತ್ತವೆ. ಹಬ್ಬದ ಸಂದರ್ಭಗಳಲ್ಲಿ ಅರ್ಧ ಕೊಡಕ್ಕೆ ಮರಳು ಮತ್ತು ಉಳಿದರ್ಧಕ್ಕೆ ನೀರು ತುಂಬಿ ಮೇಲೆತ್ತುವುದಕ್ಕೂ ಬಳಸಲಾಗುತ್ತದೆ. ಹೀಗೆ ತುಂಬಿದ ಕೊಡದ ಬಾಯಿಗೆ ಬಟ್ಟೆ ಸುತ್ತಿ ಹಲ್ಲುಗಳಿಂದ ಕಚ್ಚಿ ಕೊಡವನ್ನು ಎತ್ತುವ ಗ್ರಾಮೀಣ ಕ್ರೀಡೆಯೂ ಇದೆ. ಇತರ ದ್ರವ ಪದಾರ್ಥಗಳಾದ ಸೇಂದಿ, ಎಣ್ಣೆ, ಮಜ್ಜಿಗೆ, ಕಬ್ಬಿನ ಹಾಲು ಮುಂತಾದವುಗಳ ಸಾಗಾಣಿಕೆಗೂ ಬಳಕೆಯಾಗುತ್ತಿದ್ದವು. ಕಬ್ಬಿಣ ಮತ್ತು ಪ್ಲಾಸ್ಟಿಕ್ ಕೊಡಗಳು ಇವುಗಳ ಬಳಕೆಯನ್ನು ಕುಗ್ಗಿಸಿವೆ.

ಮಣ್ಣಿನ ತಟ್ಟೆ



ಹಿಂದಿನ ಕಾಲದ ಜನಪದರು ಸಾಮಾನ್ಯವಾಗಿ ಊಟ ಮಾಡಲು ಬಳಸುತ್ತಿದ್ದ ಸಾಧನ. ಜನಪದರು ಅಡುಗೆಮಾಡಲು ಮಣ್ಣಿನ ವಸ್ತುಗಳನ್ನೇ ಬಳಸುತ್ತಿದ್ದರು. ಮಣ್ಣಿನ ತಟ್ಟೆಗಳು ವೃತ್ತಾಕಾರದಲ್ಲಿದ್ದು ಒಂದು ಅಡಿ ವ್ಯಾಸ, ಸುತ್ತಲೂ ಒಂದು ಇಂಚು ಎತ್ತರದ ಪಟ್ಟಿಯನ್ನು ಹೊಂದಿರುತ್ತವೆ. ಜೇಡಿ ಮಣ್ಣಿನಿಂದ ತಯಾರಿಸಲಾಗುವ ಈ ವಸ್ತುಗಳನ್ನು ಎಚ್ಚರಿಕೆಯಿಂದ ಬಳಕೆ ಮಾಡಲಾಗುತ್ತದೆ. ದಿನ ನಿತ್ಯ ಬಳಕೆಯಾಗುತ್ತಿದ್ದ ಈ ವಸ್ತು ಇಂದು ಬಳಕೆಯಾಗುವುದು ಕಡಿಮೆ. ಮಣ್ಣಿನ ತಟ್ಟೆಗಳ ಬದಲು ಲೋಹದ ತಟ್ಟೆಗಳು ಬಂದು ಶತಮಾನಗಳಾದವು.

ಮರದ ಒರಳು/ ಬಡ್ಡೆ ಒರಳು



ಕಾಳು ಒಡೆಯಲು, ಧಾನ್ಯಗಳನ್ನು ನುಚ್ಚು ಮಾಡಲು ಬಳಸುವ ಇಂಥ ಒರಳುಗಳನ್ನು ಕಗ್ಗಲ್ಲಿನಿಂದ ರಚಿಸುತ್ತಾರೆ. ಆದರೆ ಗಟ್ಟಿ ಮರಗಳಾದ ತೇಗ, ಮತ್ತಿ ಮುಂತಾದ ಮರಗಳಿಂದಲೂ ತಯಾರಿಸುತ್ತಾರೆ. ಈ ಒರಳು ಎಲ್ಲಾ ಪ್ರದೇಶಗಳಲ್ಲಿ ಬಳಕೆ ಇರದೆ ಕೆಲವು ಪ್ರದೇಶಗಳಲ್ಲಿ ಅಪರೂಪವಾಗಿ ಬಳಕೆಯಾಗುತ್ತದೆ. ಇದರ ಮಧ್ಯದಲ್ಲಿ ಅರ್ಧ ಅಡಿ ವ್ಯಾಸ, ಅರ್ಧ ಅಡಿ ಆಳದ ಗುಳಿ ಇರುತ್ತದೆ. ಸುಮಾರು ಒಂದೂವರೆ ಅಡಿ ಎತ್ತರ ಇರುತ್ತದೆ. ಇದನ್ನು ನೆಲದಲ್ಲಿ ಹುಗಿದು ಭದ್ರಪಡಿಸಲಾಗುತ್ತದೆ.

ಮರದ ನಶ್ಯ ಡಬ್ಬಿ



ನಶ್ಯ ಸೇದುವವರು ಬಳಸುವ ಸಾಧನ. ಇದು ಸಾಗುವಾನಿ ಮರದಿಂದ ಮಾಡಿದ ಸುಮಾರು ಎರಡೂವರೆ ಇಂಚು ಅಗಲ, ಮೂರು ಇಂಚು ಉದ್ದ ಗಾತ್ರವುಳ್ಳದ್ದಾಗಿದೆ. ಆಯತಾಕಾರದಲ್ಲಿದ್ದು, ಸುಮಾರು ಎಪ್ಪತ್ತನೇ (೧೯೭೦-೮೦) ದಶಕದ ಕಾಲದ್ದಾಗಿದೆ. ನಶ್ಯ ಸೇದುವವರು ನಶ್ಯದ ಡಬ್ಬಿಯಲ್ಲಿ ನಶೆಪುಡಿಯನ್ನು ಹಾಕಿಕೊಂಡು ಜೇಬಿನಲ್ಲಿಟ್ಟುಕೊಳ್ಳುವ ವಿಧಾನ ಬಳಕೆಯಲ್ಲಿತ್ತು. ಇತ್ತೀಚೆಗೆ ಇದರ ಬಳಕೆ ಕಡಿಮೆಯಾಗಿದೆ. ನಶ್ಯದ ಡಬ್ಬಿಗಳಿಗಾಗಿ ಗಾಜು, ಅಲ್ಯೂಮಿನಿಯಂ, ಬೆಳ್ಳಿ, ತೆಂಗಿನಚಿಪ್ಪು ಮುಂತಾದುವು ಬಳಕೆಯಾಗುತ್ತವೆ.



ಮರದ ಬಾಗಿಲು



ಇದು ಹಳೆ ಮನೆಯೊಂದರ ವಿಶಿಷ್ಟವಾದ ಮರದ ಬಾಗಿಲು. ಸುಮಾರು ಮೂರೂವರೆ ಅಡಿ ಅಗಲ ಆರೂವರೆ ಅಡಿ ಎತ್ತರವಿದೆ. ಸುಮಾರು ನಾಲ್ಕು ಇಂಚು ದಪ್ಪ ಉಳ್ಳ ಹಲಗೆಯ ಮೂರು ತುಂಡುಗಳನ್ನು ಮೊಳೆ ಹೊಡೆದು ಹಾಗೆಯೇ ಜೋಡಿಸಲಾಗಿದೆ. ಬಾಗಿಲ ಒಂದು ಭಾಗದಲ್ಲಿ ಮೇಲೆ–ಕೆಳಗೆ ಸುಮಾರು ಒಂದು ಅಡಿ ಉದ್ದವುಳ್ಳ ಕಬ್ಬಿಣದ ಗೂಟಗಳನ್ನು ಜೋಡಿಸಿದ್ದಾರೆ. ಹೀಗೆ ಬಾಗಿಲನ್ನು ತೆಗೆಯಲು ಮತ್ತು ಮುಚ್ಚುವುದಕ್ಕೆ ಅನುಕೂಲವಾಗುತ್ತದೆ. ತಗಡು, ಪ್ಲೈವುಡ್ ಮುಂತಾದ ಬಾಗಿಲುಗಳು ಬಳಕೆಗೆ ಬಂದ ನಂತರ ಇಂತಹ ದಪ್ಪ ಮತ್ತು ಭಾರವಾದ ಬಾಗಿಲುಗಳ ಬಳಕೆ ಅಪರೂಪವಾಗಿದೆ.

ಮಸಿದವತಿ



ಹಿಂದಿನ ಕಾಲದಲ್ಲಿ ಕಲಮು ಎಂಬ ಲೇಖನ ಸಾಮಗ್ರಿಯನ್ನು ಬಳಸಲು ಅನಿವಾರ್ಯವಾಗಿ ಬೇಕಾಗಿದ್ದ ಮಸಿ ಕುಡಿಕೆ. ಇಂಥ ಎರಡು ಪುಟ್ಟ ಕುಡಿಕೆಗಳನ್ನು/ಕುಪ್ಪಿಗಳನ್ನು ಇರಿಸಲು ಅನುಕೂಲವಾಗುವಂತೆ ಅದನ್ನು ಮರದ ಚೌಕಟ್ಟಿನಲ್ಲಿ ಅಳವಡಿಸಿದ್ದಾರೆ. ಇದರಲ್ಲಿ ಮುಖ್ಯವಾಗಿ ಮಸಿಕುಡಿಕೆಗಳು ಭದ್ರವಾಗಿ ಸ್ಥಾಪಿತವಾಗಲು ಬೇಕಾದಂತೆ ಅರೆ ರಂಧ್ರಗಳನ್ನು ಕೆತ್ತಿ ಮಸಿಕುಡಿಕೆಯನ್ನು ಸ್ಥಾಪಿಸಿದ್ದಾರೆ. ಬದಿಯಲ್ಲಿ ಕಲಮುಗಳನ್ನು ಇರಿಸಿಕೊಳ್ಳಲು ಕೂಡ ಒಂದು ಪುಟ್ಟ ಖಾನೆ ಇದೆ. ಕಲಮನ್ನು ಮಸಿದವತಿಯಲ್ಲಿನ ಮಸಿಯಲ್ಲಿ ಆಗಾಗ ಅದ್ದಿಕೊಂಡು ಬರವಣಿಗೆ ಮಾಡುತ್ತಿದ್ದರು. ಬರವಣಿಗೆ ಬಲ್ಲವರೆಲ್ಲರಿಗೂ ಮಸಿದವತಿ ಅಗತ್ಯದ ವಸ್ತುವಾಗಿತ್ತು. ಬಾಲ್‌ಪಾಯಿಂಟ್ ಪೆನ್ನುಗಳು ಬಂದ ಬಳಿಕ ಇದರ ಅಗತ್ಯವೇ ಇಲ್ಲದಂತಾಗಿದೆ.



ಮುದ್ದೆ ಬಟ್ಲು/ಕೈಬಟ್ಟಲು





ಜೋಳದ ಮುದ್ದೆ ತಟ್ಟಲು ಬಳಕೆಯಾಗುವ ಸಾಧನ. ಬೆಂದ ಜೋಳದ ನುಚ್ಚು ಮತ್ತು ಹಿಟ್ಟಿನ ಮಿಶ್ರಣವನ್ನು ಮುದ್ದೆ ಆಕಾರಕ್ಕೆ ತಟ್ಟುವುದಕ್ಕಾಗಿ, ಅದನ್ನು ಬಟ್ಟಲಲ್ಲಿ ಹಾಕಿಕೊಂಡು ಎಡಕೈಯಿಂದ ಮೇಲಕ್ಕೆ ಎಗರಿಸುತ್ತ ಬಲಗೈಯಿಂದ ತಟ್ಟುತ್ತ ಆಕಾರ ಬರಿಸುತ್ತಾರೆ. ಮುದ್ದೆ ಬಟ್ಲು ಸುಮಾರು ಹತ್ತು ಇಂಚಿನಿಂದ ಸುಮಾರು ಹದಿನಾಲ್ಕು ಇಂಚು ಉದ್ದವಿದೆ. ಸುಮಾರು ಅರ್ಧ ಉದ್ದ ಹಿಡಿಕೆ, ಇನ್ನರ್ಧ ಉದ್ದ ಬಟ್ಲುಗುಂಡಿಗೆ ಬಳಕೆ. ಮುದ್ದೆಗುಂಡಿಯು ಸುಮಾರು ಆರರಿಂದ ಎಂಟು ಇಂಚು ವ್ಯಾಸದ್ದಾಗಿರುತ್ತದೆ. ಸುಮಾರು ಐದು ಇಂಚು ಆಳವಿದೆ. ಸುತ್ತಲಿನ ದಪ್ಪವು ಸುಮಾರು ಅರ್ಧ ಇಂಚು. ಮುದ್ದೆ ಬಟ್ಲನ್ನು ತುಂಬ ಭಾರದ ಮರದಿಂದ ರಚಿಸದೆ ಹಗುರವಾದ ಮರಗಳಿಂದ ರಚಿಸುತ್ತಾರೆ.



ಮೊರ/ಗೆರಸೆ



ಧಾನ್ಯ, ಕಾಳುಗಳಿಂದ ಕಸಕಡ್ಡಿಗಳನ್ನು ಪ್ರತ್ಯೇಕಿಸುವುದಕ್ಕೆ ಬಳಸುವ ಸಾಧನ. ಮೊರದಿಂದ ಕೇರುವ/ಚಪ್ಪರಿಸುವ ಮೂಲಕವೂ ಆಯವರಿತು ಗಾಳಿಗೆ ತೂರುವ ಮೂಲಕವೂ ಧಾನ್ಯ/ಕಾಳುಗಳಿಂದ ಕಸಕಡ್ಡಿಗಳನ್ನು ಪ್ರತ್ಯೇಕಿಸಬಹುದು. ಒಂದೇಸವನೆ ಗಾಳಿಯನ್ನು ಬೀಸುತ್ತ ಭತ್ತದ ಕಾಳುಗಳಿಂದ ಕಸಕಡ್ಡಿಗಳನ್ನು ಪ್ರತ್ಯೇಕಿಸುವುದರಲ್ಲೂ ಗೆರಸೆಗಳನ್ನು ಬಳಸಿಕೊಳ್ಳುತ್ತಾರೆ. ಚಪ್ಪಟೆಯಾಗಿದ್ದು ಸುಮಾರು ಚೌಕಾಕೃತಿಯಲ್ಲಿದೆ. ಮೊರವು ಅಂಚಿನಲ್ಲಿ ಮೂರುಭಾಗಳಲ್ಲಿ ಸುಮಾರಾಗಿ ಎರಡು ಇಂಚು ಎತ್ತರದ ಚೌಕಟ್ಟು ಹೊಂದಿದೆ. ಬೆತ್ತ, ಬಿದಿರು ಮತ್ತು ಕೆಲವು ಬಳ್ಳಿಗಳ ಬಿಳಲುಗಳಿಂದ ಮೊರವನ್ನು ತಯಾರಿಸುತ್ತಾರೆ. ಇದು ದೀರ್ಘಕಾಲ ಬಾಳಿಕೆ ಬರಲು ನೀರಲ್ಲಿ ಕೆಲವು ದಿನ ಮುಳುಗಿಸಿಟ್ಟು ಬಳಿಕ ಒಣಗಿಸಿ ಸೆಗಣಿ ಬಳಿಯಲಾಗುತ್ತದೆ. ಕೇರೆಣ್ಣೆ, ಕುಸುಬೆ ಎಣ್ಣೆಗಳಿಗೆ ಹತ್ತಿ ಸುಟ್ಟಬಟ್ಟೆಗಳ ಬೂದಿಯನ್ನು ಬೆರೆಸಿ ಮೊರಗಳಿಗೆ ಹಚ್ಚುವುದು ಕೂಡ ಇದನ್ನು ದೀರ್ಘಕಾಲ ಬಾಳಿಕೆ ಬರುವಂತೆ ಮಾಡುವ ಇನ್ನೊಂದು ತಂತ್ರಜ್ಞಾನ. ಇತ್ತೀಚೆಗೆ ಪ್ಲಾಸ್ಟಿಕ್, ಫೈಬರ್, ಅಲ್ಯೂಮಿನಿಯಂ ಮೊರಗಳು ಪಾರಂಪರಿಕ ಮೊರಗಳನ್ನು ಮೂಲೆಗುಂಪಾಗಿಸಿವೆ.



ಲಾಟೀನು/ಲಾಟಾಣ



ಬೆಳಕಿಗಾಗಿ ಬಳಸುವ ಸಾಧನ. ದೀಪ ಹೊತ್ತಿಸಿದ ನಂತರ ಗಾಳಿಗೆ ನಂದಿಹೋಗದಂತೆ(ಆರಿ ಹೋಗದಂತೆ) ಗಾಜಿನ ಬುರುಡೆಯನ್ನು ಅಳವಡಿಸಲಾಗುತ್ತದೆ. ಇದರ ಬತ್ತಿಯನ್ನು ಎತ್ತುವುದಕ್ಕೆ ಮತ್ತು ಇಳಿಸುವುದಕ್ಕೆ ವ್ಯವಸ್ಥೆ ಇರುತ್ತದೆ. ಸೀಮೆಎಣ್ಣೆ ಹಾಕಲು ಬುಡದಲ್ಲಿ ನಳಿಕೆಯ ವ್ಯವಸ್ಥೆ ಇರುತ್ತದೆ. ಎತ್ತಿಕೊಂಡು ಒಯ್ಯಲು ಮೇಲ್ಭಾಗದಲ್ಲಿ ಹಿಡಿಕೆಯ ವ್ಯವಸ್ಥೆ ಇದೆ. ಕಬ್ಬಿಣದ ತೆಳು ತಗಡಿನಿಂದ ಲಾಟೀನುಗಳನ್ನು ತಯಾರಿಸುತ್ತಾರೆ. ಸೀಮೆ ಎಣ್ಣೆ ಮತ್ತು ಬತ್ತಿಗಳಿಂದ ಉರಿಯುತ್ತದೆ ಲಾಟಾನುಗಳನ್ನು ಮನೆ, ಕಾವಲು ಚಪ್ಪರ, ಎತ್ತಿನಗಾಡಿಗಳ ರಾತ್ರಿ ಪಯಣಗಳಿಗೆ ಬಳಸುತ್ತಿದ್ದರು.



ವಾಡೆ/ವಾಡೇವು



ದವಸ ಧಾನ್ಯಗಳನ್ನು ಸಂಗ್ರಹಿಸಿಡಲು ಬಳಸುವ ಬೃಹತ್ ಮಡಿಕೆಗಳು. ಬಿತ್ತನೆ ಬೀಜಗಳನ್ನು ಸಂಗ್ರಹಿಸಿಡಲು ಕೂಡ ಇವನ್ನು ಬಳಸುತ್ತಾರೆ. ಇವು ಶಂಖಾಕೃತಿಯಲ್ಲಿರುತ್ತವೆ, ಸೋರೆ ಬುರುಡೆಯ ಆಕಾರದಲ್ಲೂ ಕೆಲವು ವಾಡೇವುಗಳು ಇರುತ್ತವೆ. ಸುಮಾರು ಒಂದೂವರೆ ಅಡಿಯಿಂದ ಸುಮಾರು ಆರು ಅಡಿಗಳ ಎತ್ತರಕ್ಕೆ ವಾಡೆಗಳನ್ನು ನಿರ್ಮಿಸುತ್ತಾರೆ. ಇವುಗಳ ಬಾಯಿಯು ಸುಮಾರು ಆರರಿಂದ ಹತ್ತು ಇಂಚುಗಳ ತನಕ ವ್ಯಾಸವುಳ್ಳದ್ದಾಗಿರುತ್ತದೆ. ಮಧ್ಯಭಾಗದಲ್ಲಿ ಸುಮಾರು ನಾಲ್ಕರಿಂದ ಎಂಟು ಅಡಿ ವ್ಯಾಸವಿರುತ್ತದೆ. ಭದ್ರವಾಗಿ ನೆಲದಲ್ಲಿ ನಿಲ್ಲುವಂತೆ ತಳಭಾಗವು ಚಪ್ಪಟೆಯಾಗಿರುತ್ತವೆ ಮತ್ತು ಸುಮಾರು ಒಂದೂವರೆಯಿಂದ ಎರಡು ಅಡಿ ವ್ಯಾಸವಿರುತ್ತದೆ. ತಳವು ಕಡೆಮೆ ವ್ಯಾಸದ್ದಾಗಿರುವುದಕ್ಕೆ ಕಾರಣವೆಂದರೆ ಮಳೆಗಾಲದಲ್ಲಿ ಶೈತ್ಯವು ನೆಲದಿಂದ ವಾಡೇವಿಗೆ ಹೆಚ್ಚು ತಗುಲಿ ಒಳಗಿನ ಧಾನ್ಯಗಳು ಹಾಳಾಗಬಾರದು ಎಂಬುದು. ಮನೆಯ ಬೆಚ್ಚಗಿನ ಕೋಣೆಯ ಮೂಲೆಯಲ್ಲಿ ವಾಡೇವುಗಳನ್ನು ಇರಿಸುವುದು ರೂಢಿ. ಧಾನ್ಯಗಳನ್ನು ತುಂಬಿದ ಬಳಿಕ ಅವುಗಳ ತಳಭಾಗದ ಸುತ್ತ ಮಣ್ಣು+ಸೆಗಣಿಗಳ ಮಿಶ್ರಣವನ್ನು ಹಾಕಲಾಗುತ್ತದೆ. ಮೇಲ್ಭಾಗದಲ್ಲಿ ಕೂಡ ಮುಚ್ಚಳ ಹಾಕಿ ಮಣ್ಣು ಕಲಸಿ ಮೆತ್ತಿ ಭದ್ರಪಡಿಸಲಾಗುತ್ತದೆ.



ವಾಡೇವುಗಳನ್ನು ಎರಡು ರೀತಿಯಲ್ಲಿ ತಯಾರಿಸುತ್ತಾರೆ. ೧. ಮಣ್ಣು, ಹಸಿ ಸೆಗಣಿ, ಬೈ ಹುಲ್ಲುಗಳನ್ನು ಮಿಶ್ರಮಾಡಿ ಕೊಳೆಹಾಕಿ ಅವನ್ನು ಅಂಟು ಬರಿಸಿ ಸ್ವಲ್ಪ ಸ್ವಲ್ಪವೇ ಮೆತ್ತಿ ಒಣಗಿಸಿ ತಯಾರಿಸುವುದು. ೨. ಕುಂಬಾರರು ಆವೆ ಮಣ್ಣಿನಿಂದ ತಯಾರಿಸಿ, ಸುಟ್ಟು ಸಿದ್ಧಮಾಡಿಕೊಡುವುದು.



ದೊಡ್ಡವಾಡೇವುಗಳಿಗೆ ತಳದಿಂದ ಮೇಲೆ ಸುಮಾರು ಮೂರು ಇಂಚು ವ್ಯಾಸದ ರಂಧ್ರವಿರುತ್ತದೆ. ಪದೇ ಪದೇ ಮೇಲಿನ ಮುಚ್ಚಳವನ್ನು ತೆಗೆದು ಕಾಳುಗಳನ್ನು ತೆಗೆಯುವ ತೊಂದರೆಯನ್ನು ನಿವಾರಿಸುವುದು ಇದರ ಉದ್ದೇಶ. ಈ ರಂಧ್ರವನ್ನು ಬಟ್ಟೆ, ಬಟ್ಟೆಸುತ್ತಿದ ಗೆರಟೆ (ತೆಂಗಿನಕಾಯಿ ಚಿಪ್ಪು) ಇತ್ಯಾದಿಗಳಿಂದ ಮುಚ್ಚಲಾಗುತ್ತದೆ. ಬೇಕಾದಾಗ ಇದನ್ನು ತೆಗೆದು ಬೇಕಾದಷ್ಟು ಕಾಳುಗಳನ್ನು ಹೊರಗೆ ತೆಗೆದು ಮತ್ತೆ ರಂಧ್ರವನ್ನು ಮುಚ್ಚುತ್ತಾರೆ. ಇಲಿಗಳು ವಾಡೇವನ್ನು ಕಡಿದು ಕೊರೆಯಲಾರವು. ಹೊರಗಿನಿಂದ ಏಟುಬೀಳದಿದ್ದಲ್ಲಿ ವಾಡೇವುಗಳು ನೂರಾರು ವರ್ಷ ಬಾಳಿಕೆ ಬರುತ್ತವೆ. ಧವಸ ಧಾನ್ಯಗಳನ್ನು ಸಂಗ್ರಹಿಸಿ ಇಡುವುದರ ಹಿಂದೆ ಇದ್ದ ಉದ್ದೇಶಗಳು ಇಂದು ಪಲ್ಲಟಗೊಂಡಿರುವುದು ಮತ್ತು ವಾಡೇವುಗಳ ಗ್ರಾಮೀಣ ಸ್ವಭಾವದ ಕಾರಣಗಳಿಂದ ಇಂದು ವಾಡೇವುಗಳು ಅಪರೂಪವಾಗುತ್ತಿವೆ.



ಸಾಣಿಗೆ



ಭತ್ತ, ರಾಗಿ, ಜೋಳ ಇತ್ಯಾದಿಗಳನ್ನು ಹಸನುಮಾಡುವಾಗ ಬಳಕೆಯಾಗುವ ವಸ್ತು. ಇದು ಸುಮಾರು ಹದಿನೆಂಟರಿಂದ ಇಪ್ಪತ್ತೆರಡು ಇಂಚು ವ್ಯಾಸವಿದ್ದು ಎರಡರಿಂದ ಮೂರು ಇಂಚು ಎತ್ತರದ ಅಂಚುಳ್ಳದ್ದಾಗಿರುತ್ತದೆ. ಕೆಳಭಾಗವನ್ನು ಬೆತ್ತ ಅಥವಾ ಬಿದಿರಿನ ಸೀಳುಗಳನ್ನು ಬಳಸಿಕೊಂಡು ಉದ್ದಕ್ಕೂ ಅಡ್ಡಕ್ಕೂ ಹಾಸಿಕೊಂಡು ಹೆಣೆಯಲಾಗುತ್ತದೆ. ಕಾಳುಗಳ ಗಾತ್ರಕ್ಕೆ ಅನುಸಾರವಾಗಿ ಕಣ್ಣುಗಳನ್ನು ಹೆಣೆದಿರುವ ಸಾಣಿಗೆಗಳಿರುತ್ತವೆ.. ಭತ್ತ, ರಾಗಿ, ಜೋಳ, ಇತ್ಯಾದಿಗಳನ್ನು ಕಸ, ಕಡ್ಡಿ, ಮಣ್ಣಿನ ಮುಟ್ಟೆ ಹರಳುಗಳಿಂದ ಬೇರ್ಪಡಿಸಲು ಕೂಡ ಇದು ಉಪಯೋಗವಾಗುತ್ತದೆ. ಇದನ್ನು ಮೇದರು, ಕೊರಚರು ತಯಾರಿಸುತ್ತಾರೆ.



ಸಿಂಬಿ (ಬೆ)



ಪಾತ್ರೆ, ಗಡಿಗೆ ಮತ್ತು ಮಡಿಕೆಗಳನ್ನು ಇಡುವುದಕ್ಕೆ ಬಳಸುವ ಸಾಧನ. ಇದನ್ನು ಈಚಲು ಮರದಗರಿಯಿಂದ ಹೆಣೆಯುತ್ತಾರೆ. ಇದು ಸುಮಾರು ಐದು ಇಂಚು ದಪ್ಪವಾಗಿದ್ದು, ಸುಮಾರು ಏಳು ಇಂಚು ವ್ಯಾಸವಿರುತ್ತದೆ. ಅಡುಗೆ ಮಾಡಿದ ಬಿಸಿ ಪಾತ್ರೆ, ಗಡಿಗೆ, ಮಡಿಕೆಗಳನ್ನು ಸಿಂಬಿಯ ಮೇಲೆ ಇಡುತ್ತಾರೆ. ಇತ್ತೀಚೆಗೆ ಇದರ ಉತ್ಪಾದನೆ ಹಾಗೂ ಬಳಕೆ ಕಡಿಮೆಯಾಗುತ್ತಿದೆ.

ಸುಣ್ಣಕಾಯಿ





ಎಲೆ ಅಡಿಕೆ ಹಾಕಿಕೊಳ್ಳುವವರು ಸುಣ್ಣ ಇಟ್ಟುಕೊಳ್ಳಲು ಬಳಸುವ ಸಾಧನ. ಇದು ಸುಮಾರು ಐದು ಇಂಚು ಸುತ್ತಳತೆಯನ್ನು ಹೊಂದಿದೆ. ಕಂಚಿನಿಂದ ತಯಾರಿಸಲಾಗಿದೆ. ಸು. ಎಂಭತ್ತು ವರ್ಷ ಹಳೆಯದು. ಎಲೆ ಅಡಿಕೆ ಹಾಕಿಕೊಳ್ಳುವವರು ಸುಣ್ಣಕಾಯಿಯಲ್ಲಿ ಸುಣ್ಣ ಹಾಕಿಕೊಂಡು ಚೀಲದಲ್ಲಿ ಇಟ್ಟುಕೊಳ್ಳುತ್ತಿದ್ದರು. ಕಂಚಿನ ಸಾಧನವಾಗಿರುವುದರಿಂದ ಇದರಲ್ಲಿ ಸುಣ್ಣ ತಂಪಾಗಿರುತ್ತದೆ ಎಂಬ ನಂಬಿಕೆಯೂ ಇದೆ. ವಿವಿಧ ರೂಪದ (ಆಕಾರದ) ಸುಣ್ಣದ ಕಾಯಿಗಳು ಇವೆ.



ಸ್ಯಾವಿಗೆ ಒತ್ತೊಳ್ಳು



ಸ್ಯಾವಿಗೆಯನ್ನು ತಯಾರಿಸಲು ಬಳಸುವ ಮರದ ಸಾಮಗ್ರಿ. ಇದರಲ್ಲಿ ಹಿಡಿಕೆ, ಲಂಬ ಬಡಿಗೆ, ಅಡ್ಡಬಡಿಗೆ, ಸ್ಯಾವಿಗೆ ಕೊಂಡೆ ಮುಂತಾದ ಪ್ರಧಾನ ಭಾಗಗಳಿವೆ. ಹಿಡಿಕೆಯನ್ನು ಮೇಲಕ್ಕೂ ಕೆಳಕ್ಕೂ ಚಲಿಸಲು ಸಾಧ್ಯವಾಗುವಂತೆ ಅದರ ತುದಿಯು ಲಂಬ ಬಡಿಗೆಯ ತುದಿಗೆ ಜೋಡಣೆಯಾಗಿದೆ. ಈ ಲಂಬ ಬಡಿಗೆಯು ಬುಡದಲ್ಲಿ ಕತ್ತರಿಯಾಕಾರದಲ್ಲಿರುತ್ತದೆ. ಇದರ ಮಧ್ಯಕ್ಕೆ ಸ್ಯಾವಿಗೆ ಒರಳನ್ನು ಹೊಂದಿರುವ ಅಡ್ಡ ಬಡಿಗೆಯು ಜೋಡಿಸಲ್ಪಟ್ಟಿದೆ. ಅಡ್ಡ ಬಡಿಗೆಯನ್ನು ಇನ್ನೊಂದು ತುದಿಯಲ್ಲಿ ಆಧರಿಸಲು ಕತ್ತರಿಯಾಕಾರದ ಇನ್ನೊಂದು ಸಣ್ಣ ಲಂಬ ಬಡಿಗೆಯಿದೆ. ಅಡ್ಡ ಬಡಿಗೆಯಲ್ಲಿ ಸುಮಾರು ಎರಡೂವರೆ ಇಂಚು ವ್ಯಾಸದ ಒಂದೋ ಎರಡೋ ರಂಧ್ರಗಳನ್ನು ನಿರ್ದಿಷ್ಟ ಅಂತರದಲ್ಲಿ ಕೊರೆದು ಅದಕ್ಕೆ ಸ್ಯಾವಿಗೆಕೊಂಡೆಗಳನ್ನು ಜೋಡಿಸಲಾಗುತ್ತದೆ. ಕೊಂಡಿಯು ಕಂಚು/ಹಿತ್ತಾಳೆಯದು. ಈ ಸ್ಯಾವಿಗೆ ಕೊಂಡೆಯ ತಳದಲ್ಲಿ ಅನೇಕ ಸಣ್ಣ ರಂಧ್ರಗಳಿರುತ್ತವೆ. ಈ ರಂಧ್ರಗಳಿಂದಲೇ ಸ್ಯಾವಿಗೆಯು ಹೊರಬರುತ್ತದೆ. ಸ್ಯಾವಿಗೆ ಕೊಂಡೆಗಳನ್ನು ಜೋಡಿಸಿದ ಅಡ್ಡ ಬಡಿಗೆಯ ರಂಧ್ರಗಳಿಗೆ ಸರಿಯಾಗಿ ಹೊಂದುವಂತೆ ಹಿಡಿಕೆಯ ಕೆಳಗೆ, ಕೊಂಡೆಯ ಒಳಸೇರಿದ ಸ್ಯಾವಿಗೆ ಕಡುಬನ್ನು ಒತ್ತಲು ಅಗತ್ಯವಾದ, ವೃತ್ತಾಕಾರದ ಮರದ ಸಲಕರಣೆಗಳನ್ನು ಭದ್ರವಾಗಿ ಜೋಡಿಸಿರುತ್ತಾರೆ. ಹಿಡಿಕೆಯನ್ನು ಎತ್ತುವಾಗ ಇವು ಕೊಂಡೆಯಿಂದ ಕಳಚುತ್ತವೆ. ತಗ್ಗಿಸಿದಾಗ ಕೊಂಡೆಯ ಒಳಪ್ರವೇಶಿಸುತ್ತದೆ. ಎರಡು ಕೊಂಡೆಯ ಸ್ಯಾವಿಗೆ ಮಣೆಯಿಂದ ಏಕಕಾಲದಲ್ಲಿ ಎರಡು ಕಡೆ ಸ್ಯಾವಿಗೆಯು ಸಿದ್ಧವಾಗುತ್ತದೆ. ಒಂದೇ ಕೊಂಡೆಯ ಮರದ ಸ್ಯಾವಿಗೆ ಮಣೆಗಳೂ ಚಾಲ್ತಿಯಲ್ಲಿವೆ.

ಹಿಡಿಕೆಯು ಸುಮಾರು ಐದು ಅಡಿ ಉದ್ದ, ಲಂಬ ಬಡಿಗೆಯು ಸುಮಾರು ಮೂರು ಅಡಿ ಎತ್ತರ, ಸಣ್ಣ ಲಂಬ ಬಡಿಗೆಯು ಎರಡು ಅಡಿ ಎತ್ತರ ಮತ್ತು ಕೊಂಡೆಯನ್ನು ಒಳಗೊಂಡ ಅಡ್ಡ ಬಡಿಗೆಯು ಸುಮಾರು ಮೂರು ಅಡಿ ಉದ್ದ ಇರುತ್ತದೆ. ಇವೆಲ್ಲವೂ ಅತ್ಯಂತ ಗಟ್ಟಿಮುಟ್ಟಾದ ಮರಗಳಿಂದ ನಿರ್ಮಿತವಾಗುತ್ತವೆ. ಕಬ್ಬಿಣ, ಉಕ್ಕು, ಕಂಚು ಮುಂತಾದ ಲೋಹಗಳಿಂದ ಕಾರ್ಖಾನೆಗಳಲ್ಲಿ ನಿರ್ಮಾಣವಾಗುವ ಸ್ಯಾವಿಗೆ ಮಣೆಗಳು ಬಂದ ಬಳಿಕ ಮರದ ಮಣೆಗಳು ಮೂಲೆಗುಂಪಾಗತೊಡಗಿವೆ.

ಶ್ಯಾವಿಗೆ ಮಣೆ



ಸರಳ ತಂತ್ರದಲ್ಲಿ ಶ್ಯಾವಿಗೆ ಮಾಡಲು ಬಳಸುತ್ತಿದ್ದ ಹಲಗೆ. ಇದು ಸುಮಾರು ಮೂರೂವರೆಯಿಂದ ನಾಲ್ಕು ಅಡಿ ಉದ್ದ, ಆರು ಇಂಚು ಅಗಲ, ಒಂದು ಇಂಚು ದಪ್ಪದ ಹಲಗೆ. ಇದರ ಒಂದು ತುದಿಯಲ್ಲಿ ಅಡ್ಡಡ್ಡವಾಗಿ ಅರ್ಧ ಇಂಚುಗಳ ಅಂತರದಲ್ಲಿ ಹದಿನೈದರಿಂದ ಇಪ್ಪತ್ತು

ಗೆರೆಗಳನ್ನು ಕೊರೆಯಲಾಗುತ್ತದೆ. ಈ ಸಲಕರಣೆಯನ್ನು ಮನೆಯ ಮುಂಭಾಗದ ಕಟ್ಟೆಯಲ್ಲಿ, ತುದಿಯು ಕಟ್ಟೆಯ ಮುಂದೆ ಬರುವಂತೆ, ಇರಿಸಿಕೊಂಡು ಹಲಗೆಯ ಇಬ್ಬದಿಗಳಲ್ಲೂ ಕಾಲು ಹಾಕಿ ಕುಳಿತು, ಶ್ಯಾವಿಗೆಯ ಹಿಟ್ಟನ್ನು ಗೆರೆಕೊರೆದ ಭಾಗಗಳಲ್ಲಿಟ್ಟು, ಕೌಶಲಪೂರ್ಣವಾಗಿ ತಿಕ್ಕಲಾಗುತ್ತದೆ. ಆಗ ಮಣೆಯ ಇಬ್ಭಾಗಗಳಲ್ಲೂ ಶ್ಯಾವಿಗೆಯ ಎಳೆಗಳು ಇಳಿಯ ತೊಡಗುತ್ತವೆ. ಅವನ್ನು ಕೆಳಗೆ ನಿಂತಿರುವ ಹೆಣ್ಮಕ್ಕಳು ಮೊರ/ತಟ್ಟೆಗಳಲ್ಲಿ ಸಂಗ್ರಹಿಸಿ ಶ್ಯಾವಿಗೆ ಕೋಲಲ್ಲಿ ಒಣ ಹಾಕುತ್ತಾರೆ. ಪರಿಣತಿ ಇಲ್ಲದಿದ್ದರೆ ಇದರಲ್ಲಿ ತಯಾರಾಗುವ ಶ್ಯಾವಿಗೆಯು ದಪ್ಪದಪ್ಪವಾಗಿ ಇಳಿಯುತ್ತದೆ; ಪರಿಣತಿ ಇದ್ದರೆ ನೂಲಿನಂತೆ ಸುಂದರವಾಗಿ ತಯಾರಾಗುತ್ತದೆ. ಈ ಮಣೆಯನ್ನು ಸಾಗುವಾನಿ, ಇಂಗಳಾರ, ಹಲಸು ಮುಂತಾದ ಮರಗಳಿಂದ ತಯಾರಿಸಲಾಗುತ್ತದೆ. ಒತ್ತು ಶ್ಯಾವಿಗೆ ಮಣೆಗಳು ಮತ್ತು ಆಧುನಿಕ ಚಕ್ರಸಹಿತ ಮಣೆಗಳು ಬಂದ ಬಳಿಕ ಇಂಥ ಮಣೆಗಳು ಮರೆಯಾಗುತ್ತಿವೆ.

ಹಳೇಬೀಗಗಳು/ಕೊಲ್ಲಾಪುರದ ಬೀಗಗಳು



ಮನೆಯ ಬಾಗಿಲು ಹಾಗೂ ಪೆಟ್ಟಿಗೆಗಳನ್ನು ಭದ್ರಪಡಿಸಲು ಇವುಗಳನ್ನು ಬಳಸಲಾಗುತ್ತಿತ್ತು. ಇವು ಈಗಿನ ಬೀಗಗಳಿಗಿಂತ ವಿಶಿಷ್ಟವಾಗಿವೆ. ಈ ಬೀಗಗಳಲ್ಲಿ ಬೀಗ ಹಾಗೂ ಅದರೊಳಗಿನ ಕಂಬಿಯನ್ನು ಬೇರೆ ಬೇರೆ ಮಾಡಬಹುದಾಗಿದ್ದು ಆಯತಾಕಾರದಲ್ಲಿ ಉದ್ದವಾಗಿರುತ್ತದೆ. ಬೀಗದ ಎಡಭಾಗಕ್ಕೆ ಹಾಗೂ ಮೇಲ್ಭಾಗಕ್ಕೆ ಕಂಬಿ ಸಿಕ್ಕಿಸುವಂತೆ ಮಾಡಲಾಗಿರುತ್ತದೆ. ಬೀಗವನ್ನು ಕೀ ಇಲ್ಲದೆಯೂ ಹಾಗೂ ಕೀ ಮೂಲಕವು ಹಾಕಬಹುದು. ಆದರೆ ಬೀಗ ತೆಗೆಯುವಾಗ ಕೀ ಬಳಸಲೇ ಬೇಕಾಗುತ್ತದೆ. ಹಿಂದೆ ಇವುಗಳನ್ನು ಕಮ್ಮಾರರೇ ತಯಾರಿಸುತ್ತಿದ್ದರು. ಇವುಗಳಲ್ಲಿ ಸಣ್ಣ ಹಾಗೂ ದೊಡ್ಡ ಬೀಗಗಳು ಇವೆ. ಈ ಹಳೆಯ ಕಾಲದ ಬೀಗಗಳನ್ನು ಕಬ್ಬಿಣದಿಂದ ಮಾಡಲಾಗಿದೆ



ಹುಟ್ಟು



ಅಡುಗೆ ಮನೆಯಲ್ಲಿ ಕುದಿಯುತ್ತಿರುವ ಅಥವಾ ಬೇಯುತ್ತಿರುವ ಹಿಟ್ಟು/ ದ್ರವ ಪದಾರ್ಥ ಗಳನ್ನು ತಿರುವಲು ಬಳಸುವ ವಸ್ತು. ಇದರ ಹಿಡಿಕೆ ಮತ್ತು ತುದಿಭಾಗದ ಚಪ್ಪಟೆಯಾಕಾರದ ಭಾಗಗಳನ್ನು ಒಂದೇ ಮರದ ತುಂಡಿನಿಂದ ತಯಾರಿಸುತ್ತಾರೆ. ಹೆಚ್ಚು ಪ್ರಮಾಣದ ಆಹಾರ ಪದಾರ್ಥಗಳನ್ನು ತಯಾರಿಸುವಾಗ ಕೈಗಳಿಗೆ ಶಾಖವು ಬಡಿಯದಂತೆಯೂ ಪಾತ್ರೆಯ ತಳದಲ್ಲಿನ ಪದಾರ್ಥಗಳು ತಳಹಿಡಿಯದಂತೆಯೂ ತಿರುವಲು ಇವು ಅನುಕೂಲವಾಗುತ್ತವೆ. ಇವು ಸಾಕಷ್ಟು ಉದ್ದವಾಗಿಯೂ ಗಟ್ಟಿಮುಟ್ಟಾಗಿಯೂ ಇವೆ. ಇವನ್ನು ಔಷಧೀಯ ಗುಣಗಳುಳ್ಳ ಇಂಗಳಾರ ಮುಂತಾದ ಮರಗಳಿಂದ ತಯಾರಿಸುತ್ತಾರೆ. ಇವುಗಳ ಗಾತ್ರದಲ್ಲಿ ವ್ಯತ್ಯಾಸ ಮಾಡಿಕೊಂಡು ಬೇರೆ ಬೇರೆ ಪ್ರಮಾಣದ ಹುಟ್ಟುಗಳನ್ನು ತಯಾರಿಸಿಕೊಳ್ಳಬಹುದು. ಲೋಹದ ಹುಟ್ಟುಗಳಂತೆ ಇವು ಬಿಸಿಯಾಗುವುದಿಲ್ಲ ಮತ್ತು ಇವುಗಳಂತೆ ಔಷಧೀಯ ಗುಣಗಳು ಲೋಹದ ಹುಟ್ಟುಗಳಿಗೆ ಇರುವುದಿಲ್ಲ ಎನ್ನುವುದು ಗಮನಾರ್ಹ. ಈ ಹುಟ್ಟನ್ನು ಬಳಸಿ ತಯಾರಿಸಿದ ಆಹಾರ ಬೇಗನೆ ಹಾಳಾಗುವುದಿಲ್ಲ ಎನ್ನುವುದು ಜನಪದರ ಅನುಭವ.





ಹೂಜಿ



ಕುಡಿಯುವ ನೀರು ಹಾಕಿಡಲು ಬಳಸುವ ಮಣ್ಣಿನ ಹೂಜಿ. ಇದರ ತಳಭಾಗವು ಸಮತಟ್ಟಾಗಿದ್ದು ಭದ್ರವಾಗಿ ಸಮತಟ್ಟು ಜಾಗದಲ್ಲಿ ಇಡುವುದಕ್ಕೆ ಅನುಕೂಲವಾಗಿರುತ್ತದೆ. ಇದರ ಮಧ್ಯಭಾಗವು ಸುಮಾರು ಮೂವತ್ತು ಇಂಚು ವ್ಯಾಸವಿರುತ್ತದೆ. ಬಾಯಿಯು, ಸುಮಾರು ಐದು ಇಂಚು ವ್ಯಾಸವಿರುತ್ತದೆ. ಹೂಜಿಯಲ್ಲಿ ನೀರು ಸುರಿಯಲು ವಿವಿಧ ವಿನ್ಯಾಸಗಳ ಒಂದು ರಂಧ್ರವಿರುವುದೂ ಇದೆ. ಹೂಜಿಗೆ ಮುಚ್ಚಲು ಒಂದು (ಚಿತ್ತಾರದ) ಮುಚ್ಚಳವಿರುತ್ತದೆ. ಹೂಜಿ ಸುಮಾರು ಒಂದೂವರೆ ಅಡಿ ಎತ್ತರವಿರುತ್ತದೆ. ಹೂಜಿಗಳ ಆಕಾರ, ಗಾತ್ರ ವಿನ್ಯಾಸಗಳಲ್ಲಿ ವ್ಯತ್ಯಾಸವಿರುತ್ತದೆ. ಹೂಜಿಯನ್ನು ಮಣ್ಣಿನಿಂದ ತಯಾರು ಮಾಡುತ್ತಾರೆ. ಪಿಂಗಾಣಿಯಿಂದಲೂ ಹೂಜಿಗಳು ನಿರ್ಮಾಣಗೊಳ್ಳುತ್ತವೆ.

ಪೂಜಾಸಾಮಗ್ರಿಗಳು

ಪೂಜಾಪರಿಕರಗಳು ಮತ್ತು ಪೂಜೆಗೊಳ್ಳುವ ವಸ್ತುಗಳನ್ನು ಈ ವಿಭಾಗದಲ್ಲಿ ಅಡಕಗೊಳಿಸಿದೆ. ಕಿಶೋರಿಯರಿಗಷ್ಟೆ ಸೀಮಿತವಾಗಿರುವ ಅಲ್ಲೆಪಿಲ್ಲೆಗಿಂಡಿ, ಗುಳ್ಳವ್ವನ ಬಾಗಿಲುಗಳಿಂದ ತೊಡಗಿ ಮನೆಗಳಲ್ಲಿ ಬಳಕೆಯಾಗುವ ತೂಗುದೀಪ, ಚೊಂಗ್ಯನ ಮಣೆ, ಕುಂಕುಮದ ಭರಣಿಗಳು; ಸಮಷ್ಟಿಬಳಕೆಗೆ ಒದಗುವ ವಿಭೂತಿ ಕರಡಿಗೆ, ಕೂರಿಗೆವ್ವ, ಎಳೆಗೌರಮ್ಮನ ಮೂರ್ತಿ, ಹರಕೆ ತೊಟ್ಟಿಲು ಮುಂತಾದವು ಒಳಗೊಂಡು ಯೋಗದಂಡ, ಡೋಣಿ, ಗುಗ್ಗುಳಕೊಡ, ಶಸ್ತ್ರ ಮುಂತಾದ ವಿಶಿಷ್ಟ ಧಾರ್ಮಿಕ ಸಾಮಗ್ರಿಗಳೂ ಈ ವಿಭಾಗದಲ್ಲಿ ಸೇರಿವೆ. ಜನಪದ ಮನಸ್ಸಿನ ಧಾರ್ಮಿಕ ಗತಿಸೂಚಕಗಳಾದ ಈ ವಿಭಾಗದ ವಸ್ತುಗಳು ಜನಪದರ ಮನೋವೈಜ್ಞಾನಿಕ ಬದುಕನ್ನು ಅರ್ಥಮಾಡಿಕೊಳ್ಳಲು ಅತ್ಯಗತ್ಯವಾಗಿವೆ. ಮುಂದಿನ ಸಂಪುಟಗಳಲ್ಲಿನ ಇಂಥವಸ್ತುಗಳ ಪರಿಚಯವೂ ಸೇರಿಕೊಂಡಾಗ ಓದುಗರಿಗೆ ಕರ್ನಾಟಕದ ಗ್ರಾಮೀಣ ಧಾರ್ಮಿಕ ಬದುಕನ್ನು ಅವು ಕಟ್ಟಿಕೊಡುವುದರಲ್ಲಿ ಸಂಶಯವಿಲ್ಲ.

ಅಲ್ಲಿಪಿಲ್ಲಿಗಿಂಡಿ/ಅಲ್ಲೆಪಿಲ್ಲೆಗಿಂಡಿ



ದೀಪಾವಳಿ ಕಳೆದು ಶುಕ್ಲಪಕ್ಷದ ಐದನೆಯ ದಿನ ಊರ ಹೆಣ್ಣುಮಕ್ಕಳು ಸೇರಿ ಆಚರಿಸುವ 'ಅಲ್ಲೆಪಿಲ್ಲೆ' ಆಚರಣೆಗೆ ಬಳಸುವ ಒಂದು ಸಣ್ಣಗಿಂಡಿ. ಸಣ್ಣಹೆಣ್ಣುಮಕ್ಕಳ ಅಂಗೈಯಲ್ಲಿ ಅಡಗುವಷ್ಟೇ ಇದೆ. ಇಂಥ ಪುಟ್ಟ ಗಿಂಡಿಗಳನ್ನು ಹಿಡಿದುಕೊಂಡು ಅವಿವಾಹಿತ ಕನ್ಯೆಯರು ಊರಬಾವಿ/ನದಿಗೆ ಹೋಗಿ, ನೀರನ್ನು ಗಿಂಡಿಯಲ್ಲಿ ತುಂಬಿ ಪೂಜಿಸಿ ಅಲ್ಲೆಪಿಲ್ಲೆ ಹಾಡುಗಳನ್ನು ಹಾಡುತ್ತ ಮರಳಿ ಮನೆಗೆ ಬಂದು, ಗಿಂಡಿಯನ್ನು ಇಟ್ಟು ಮುಂದಿನ ಐದುದಿನಗಳಲ್ಲೂ ಪೂಜಿಸುತ್ತಾರೆ. ಆಗಲೂ ಹಾಡುಗಳನ್ನು ಹಾಡುವ ಸಂಪ್ರದಾಯ ಇರುತ್ತದೆ. ಈ ಆಚರಣೆಯಲ್ಲಿ ಕೋಲಾಟವೂ ತುಂಬ ಮುಖ್ಯವಾದ ಒಂದು ಅಂಗವಾಗಿರುತ್ತದೆ. ಕೊನೆಯ ದಿನ ಈ ಗಿಂಡಿಯ ನೀರನ್ನು ಗ್ರಾಮದ ಒಂದು ಮನೆಯ ಮಾಳಿಗೆಯ ಮೇಲೆ ಒಯ್ದು ಮನೆಗೆಲ್ಲ ಸಿಂಪಡಿಸುತ್ತಾರೆ. ಇದು ಬಹುಶಃ ಕನ್ಯೆಯರಿಗೆ ಋತುಮತಿಯಾಗುವ/ವಿವಾಹಿತೆ ಯಾಗುವ ಬದುಕಿಗೆ ನಡೆಸುವ ಒಂದು ಪೂರ್ವ ಸಿದ್ಧತೆಯಾಗಿದೆ.



ಆಂಜನೇಯ ವಿಗ್ರಹ



ರುದ್ರಾವತಾರಿ, ರಾಮಭಕ್ತ ಹನುಮಂತ ಜನಸಾಮಾನ್ಯರಿಗೆ ಶ್ರೇಷ್ಠ ಸ್ವಾಮಿನಿಷ್ಠ ದೇವತೆ ಶಕ್ತಿ ಹಾಗೂ ಸಾಹಸಗಳಿಗೆ ಹೆಸರಾದ ಆಂಜನೇಯನನ್ನು ದೇವಾಲಯಗಳಲ್ಲಿ ಗುಡಿಕಟ್ಟಿ ಪೂಜಿಸುತ್ತಾರೆ. ಆಂಜನೇಯ ವಿಗ್ರಹವನ್ನು ಮನೆಗಳಲ್ಲಿ ಪೂಜಿಸುವ ವಾಡಿಕೆಯೂ ಇದೆ. ಮನೆ ಹಾಗೂ ದೇವಾಲಯ ಎರಡು ಕಡೆಗಳಲ್ಲಿಯೂ ಪೂಜಿಸಬಹುದು. ಈ ವಿಗ್ರಹವನ್ನು ಬೆಣಚುಕಲ್ಲಿನಲ್ಲಿ ಕೆತ್ತಿದೆ. ಸುಮಾರು ಏಳು ಇಂಚು ಎತ್ತರ, ಒಂದು ಇಂಚು ದಪ್ಪವಿರುವ ಚಪ್ಪಟೆ ಕಲ್ಲಿನ ಮೇಲೆ ಕೆತ್ತನೆ ಮಾಡಲಾಗಿದೆ. ಹಿಂಭಾಗವು ನಯವಾಗಿ ಸಮತಟ್ಟಾಗಿದೆ. ಆಂಜನೇಯನು ನಿಂತ ಭಂಗಿಯಲ್ಲಿದ್ದು ಎಡಕ್ಕೆ ಮುಖ ಮಾಡಿದ್ದಾನೆ. ಎಡಗೈಯಲ್ಲಿ ಸಂಜೀವಿನಿ ಪರ್ವತ ಹಿಡಿದಿದ್ದರೆ ಬಲಗೈಯನ್ನು ಸೊಂಟದ ಮೇಲಿಟ್ಟು ವೀರ ಭಂಗಿಯಲ್ಲಿ ನಿಂತಿದ್ದಾನೆ. ಬಾಲವು ಬಲದಿಂದ ಎಡಮುಖವಾಗಿ ತಲೆಯವರಗೆ ಹರಿದಿದೆ. ಆಂಜನೇಯ ಮೂರ್ತಿಯ ಎಡಬದಿಯಲ್ಲಿ ಆಂಜನೇಯ ಯಂತ್ರದ ರೇಖಾ ಚಿತ್ರವಿದೆ.

ಊದುಬತ್ತಿ ಸ್ಟ್ಯಾಂಡ್

ಮನೆಗಳ ಜಗಲಿಯಲ್ಲಿ, ದೇವರಕೋಣೆ, ದೇವರ ಫೋಟೋ ಅಥವಾ ದೇವರ ಮೂರ್ತಿಗಳ ಮುಂಭಾಗದಲ್ಲಿ ಊದು ಬತ್ತಿ ಉರಿಸಿಡಲು ಬಳಸುವ ಸಾಧನ. ಇದು ಸುಮಾರು ಏಳು ಇಂಚು ಎತ್ತರವಿದ್ದು, ತಳಭಾಗದಲ್ಲಿ ಆಯಾತಾಕಾರದ ಪೀಠವಿದೆ. ಈ ಪೀಠಕ್ಕೆ ನಾಲ್ಕು ಕಾಲುಗಳಿದ್ದು, ಪೀಠದ ಮೇಲ್ಭಾಗದಲ್ಲಿ ಹೂವಿನ ಚಿತ್ತಾರದ ಹಿತ್ತಾಳೆಯ ಕೊಕ್ಕೆಗಳಿವೆ. ಈ ಕೊಕ್ಕೆಗಳ ಮೇಲ್ಭಾಗದಲ್ಲಿರುವ ರಂಧ್ರಗಳಿಗೆ ಊದುಬತ್ತಿಯನ್ನು ಸಿಕ್ಕಿಸುತ್ತಾರೆ. ಕೆಲವರು ದಿನನಿತ್ಯ ಬಳಸಿದರೆ ಇನ್ನು ಕೆಲವರು ಹಬ್ಬ, ಜಾತ್ರೆ, ಉತ್ಸವ, ಮುಂತಾದ ವಿಶೇಷ ಪೂಜಾಕಾರ್ಯಗಳಲ್ಲಿ ಬಳಕೆ ಮಾಡುತ್ತಾರೆ.



ಎಣ್ಣೆಕಾಯಿ

ಉರಿಸಿದ ದೀಪಗಳಲ್ಲಿ ಎಣ್ಣೆ ಮುಗಿಯುತ್ತಿದ್ದಂತೆ ಮತ್ತೆ ಮತ್ತೆ ಎಣ್ಣೆ ಎರೆಯಲು ಇದನ್ನು ಬಳಸುತ್ತಾರೆ. ದೀಪ ಉರಿಯುತ್ತಿರುವಾಗಲೆ ದೀಪ ಆರದಂತೆ ಎಣ್ಣೆ ಹಾಕುವಂತಿರುವ ನಳಿಗೆಯುಳ್ಳ



ಲೋಹದ ಪಾತ್ರೆ. ಇದು ಕಿತ್ಲಿ (Kettle) ಆಕಾರದಲ್ಲಿದೆ. ಸ್ಥಳೀಯರು ಇದನ್ನು 'ಎಣ್ಣೆಕಾಯಿ' ಎನ್ನುತ್ತಾರೆ. ಇದರಲ್ಲಿ ಸುಮಾರು ಒಂದು ಲೀಟರ್‌ನಷ್ಟು ಎಣ್ಣೆಯನ್ನು ಹಾಕಿ ಇಟ್ಟುಕೊಳ್ಳಬಹುದು. ಇದನ್ನು ತಾಮ್ರ, ಕಂಚು, ಹಿತ್ತಾಳೆ ಮುಂತಾದ ಲೋಹಗಳಿಂದ ತಯಾರಿಸುತ್ತಾರೆ.

ಎಳೆಗೌರಮ್ಮನ ಮೂರ್ತಿ



ಚೌತಿಹಬ್ಬದ ನಾಲ್ಕನೆಯ ದಿನ ಎಂದರೆ ಅಷ್ಟಮಿಯ ದಿನ ಈ ಮೂರ್ತಿಯನ್ನು ನೀರು ತುಂಬಿದ ಕೊಡದಲ್ಲಿರಿಸಿ ಪೂಜಿಸುವ ಸಂಪ್ರದಾಯ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿದೆ. ಇದು ಒಂದು ಮನುಷ್ಯಮುಖ ಪ್ರಮಾಣದ ಮುಖ. ಇದನ್ನು ಕೊಡದಲ್ಲಿ ಇಡುವುದಕ್ಕೆ ಅನುಕೂಲವಾಗುವಂತೆ ಇದರ ಕೊರಳನ್ನು ವಿನ್ಯಾಸಗೊಳಿಸಲಾಗಿದೆ. ಯಕ್ಷಗಾನದ ಹಳೆಯ ಸ್ತ್ರೀವೇಷದಂತೆ ಹಿಂದಲೆಯ ಮೇಲ್ಭಾಗದಲ್ಲಿ ಒಂದು ಕಿರೀಟಾಕೃತಿಯೂ ಕೊರಳಲ್ಲಿ ಅಡ್ಡಿಕೆಗಳೂ ಇವೆ. ಅಂತೆಯೇ ಕಿವಿಗೆ ಓಲೆ, ಮೂಗಿಗೆ ನತ್ತು ಇರಿಸಲು ಅನುಕೂಲವಾಗುವಂತೆ ರಚಿಸಲಾಗಿದೆ. ಮುಂದಿನ ವರ್ಷಗಳಲ್ಲೂ ಇದೇ ಸಂದರ್ಭದಲ್ಲಿ ಈ ಮೂರ್ತಿಯನ್ನು ಬಳಸಿಕೊಳ್ಳುವಂತೆ ಪೂಜೆಯ ಬಳಿಕ ಜೋಪಾನವಾಗಿಡುತ್ತಾರೆ. ಈ ಮೂರ್ತಿಯನ್ನು ಬೇವಿನ ಮರದಿಂದ ತಯಾರಿಸುತ್ತಾರೆ.

ಕುಂಕುಮದ ಭರಣಿ/ಬಟ್ಲು



ಅರಸಿನ ಮತ್ತು ಕುಂಕುಮಗಳನ್ನು ಹಾಕಿ ಇಡಲು ಬಳಸುವ ಸಾಧನ. ವೃತ್ತಾಕಾರದಲ್ಲಿದ್ದು ಆಲಂಕಾರಿಕವಾಗಿ ಕೆತ್ತನೆ ಮಾಡಿದ್ದಾರೆ. ಸಣ್ಣ ಹಿಡಿಕೆಯಂಥ ರಚನೆ ಇರುವ ಮುಚ್ಚಳ ಇದೆ. ಮುಚ್ಚಳದಲ್ಲೂ ಆಲಂಕಾರಿಕ ಕೆತ್ತನೆ ಇದೆ. ಇವುಗಳ ಗಾತ್ರದಲ್ಲಿ ವ್ಯತ್ಯಾಸಗಳಿರುತ್ತವೆ. ದೇವರ ಪೂಜೆಯ ಸಂದರ್ಭಗಳಲ್ಲಿ, ದಿನಬಳಕೆಯಲ್ಲಿ, ಮಹಿಳಾ ಅತಿಥಿಗಳು ಬಂದಾಗ ಇದು ಉಪಯೋಗವಾಗುತ್ತದೆ. ವೃತ್ತ, ಆಯತ, ಕೂರ್ಮಾಕಾರಗಳಲ್ಲಿ ಕುಂಕುಮ ಬಟ್ಲುಗಳು ವಿನ್ಯಾಸಗೊಂಡಿರುತ್ತವೆ. ಕುಂಕುಮದ ಕರಡಿಗೆಗಳ ಒಳಗೆಯೇ ಕುಂಕುಮ, ಅರಸಿಣ, ಕೇಸರಿ, ಗುಲಾಬಿ ಬಣ್ಣಗಳ ಹುಡಿಗಳನ್ನು ಇರಿಸಿಕೊಳ್ಳಲು ಯೋಗ್ಯವಾಗುವಂತೆ ಅಳವಡಿಸಿ ಅವಕ್ಕೆ ಬೇರೆ ಬೇರೆಯೇ ಮುಚ್ಚಳುಗಳನ್ನು ಕೌಶಲದಿಂದ ಅಳವಡಿಸಲಾಗುತ್ತದೆ. ಸಾಗುವಾನಿ, ಶ್ರೀಗಂಧ, ಹಲಸು ಮುಂತಾದ ಮರಗಳಿಂದ ಇಂಥ ಬಟ್ಟಲುಗಳನ್ನು ತಯಾರಿಸುತ್ತಾರೆ.



ಕೂರಿಗೆವ್ವ



ಉತ್ತರ ಕರ್ನಾಟಕದಲ್ಲಿ ವರ್ಷಾರಂಭದ ಬಿತ್ತನೆ ಪ್ರಾರಂಭಿಸುವ ಮೊದಲು ಊರದೇವತೆಗಳ ಪೂಜೆ, ಅಗಸೆ ಪೂಜೆಯನ್ನು ಮಾಡಿದ ಬಳಿಕ ಗ್ರಾಮಸ್ಥರೆಲ್ಲರೂ ಸೇರಿ ಬಿತ್ತನೆ ಕಾರ್ಯಕ್ಕೆ ಮುನ್ನುಡಿಯಾಗಿ 'ಮೊದಲು ಮಾಡುವುದು' ಎಂಬ ಆಚರಣೆಯನ್ನು ಮಾಡುತ್ತಾರೆ. ಬಳಿಕ ಆಯಾ ಮನೆಯವರು ತುಂಬಿದ ಕೊಡವೊಂದರ ಮೇಲೆ ಕೂರಿಗೆವ್ವನನ್ನು ಇರಿಸಿ ಅಲಂಕರಿಸಿ ಪೂಜಿಸಿ ತಮಗೆ ಸಮೃದ್ಧ ಮಳೆ–ಬೆಳೆ ನೀಡುವಂತೆ ಪ್ರಾರ್ಥಿಸುತ್ತಾರೆ. ಬಿತ್ತನೆಯ ಕೆಲಸಕ್ಕೆ ಕೂರಿಗೆಯು ಬಹಳ ಮುಖ್ಯ ಸಾಧನವಾಗಿರುವುದರಿಂದ ಈ ದೇವತೆಗೆ ಕೂರಿಗೆವ್ವನೆಂದೇ ಹೆಸರಾಗಿದೆ.

ಕೂರಿಗೆವ್ವ ಮೂರ್ತಿಯಲ್ಲಿ ರುಂಡಮಾತ್ರ ಇದೆ. ಅದು ಸ್ತ್ರೀ ಮೂರ್ತಿ ಎನ್ನುವುದು ನಿಚ್ಚಳವಾಗುವಂತೆ ಕೆತ್ತನೆ ಮಾಡಿದ್ದಾರೆ. ಸುಮಾರು ಮನುಷ್ಯ ಮೋರೆಯಷ್ಟು ಗಾತ್ರವಿದೆ. ಕೂರಿಗೆವ್ವನ ಮೋರೆಯು ವರ್ಷದಲ್ಲಿ ಒಂದು ಬಾರಿ ಹೊರಗೆ ಬರುತ್ತದೆ. ಕೂರಿಗೆವ್ವನ ಮೂರ್ತಿಯನ್ನು ಸಾಗುವಾನಿ ಮರದಿಂದ ನಿರ್ಮಿಸಿದ್ದಾರೆ.

ಗಂಡುಗೊಡಲಿ



ಮಾರಿಹಬ್ಬದ ಸಂದರ್ಭದಲ್ಲಿ ಮಾರಿದೇವತೆಗೆ ಪ್ರಾಣಿಬಲಿ ಕೊಡಲು ಬಳಕೆಯಾಗುವ ಆಯುಧ. ಇದು ಅರ್ಧ ಚಂದ್ರಾಕೃತಿಯಲ್ಲಿದ್ದು ಅದರ ಎರಡು ತುದಿಯಲ್ಲಿ ಚಿಕ್ಕ ಗುಂಡುಗಳ ರೀತಿಯಲ್ಲಿ ರಚನೆ ಮಾಡಿರುತ್ತಾರೆ. ಅರ್ಧ ಚಂದ್ರಾಕೃತಿಯುಳ್ಳ ಕೊಡಲಿಯ ಮಧ್ಯಭಾಗವು ಸುಮಾರು ಎರಡೂವರೆಯಿಂದ ಮೂರು ಇಂಚು ಅಗಲವಿರುತ್ತದೆ, ಇಲ್ಲಿ ಹಿಡಿ ಹಾಕುವ ವ್ಯವಸ್ಥೆ ಇರುತ್ತದೆ. ಎರಡೂ ತುದಿಗಳ ಅಗಲ ಕಡಿಮೆ. ಸು. ಮೂರೂವರೆಯಿಂದ ನಾಲ್ಕು ಅಡಿ ಉದ್ದದ ಬಿದಿರಿನ ಅಥವಾ ಮರದ ಹಿಡಿ ಹಾಕಿರುತ್ತಾರೆ. ಗ್ರಾಮದೇವತೆ ಹಬ್ಬದ ಸಂದರ್ಭದಲ್ಲಿ ಗ್ರಾಮದೇವಿಗೆ ಬಂದ ಹರಕೆ ಕುರಿಮರಿ, ಕುರಿ, ಮೇಕೆ, ಕೋಣ ಮುಂತಾದುವನ್ನು ಕಡಿಯಲು ಇದನ್ನು

ಬಳಸುತ್ತಾರೆ. ಅಲ್ಲದೆ ಪ್ರತಿವರ್ಷ ಮಾರಿಹಬ್ಬದಲ್ಲಿ ಮಾರೆಮ್ಮ ದೇವಿಗೆ ಪ್ರಾಣಿಗಳನ್ನು ಬಲಿನೀಡುವಾಗ ಅವನ್ನು ಇದರಿಂದ ಕತ್ತರಿಸುತ್ತಾರೆ (ಈಗ ಪ್ರಾಣಿಬಲಿ ನಿಷಿದ್ಧವಾಗಿದೆ). ಮಹಾನವಮಿ ಹಬ್ಬದ ಸಂದರ್ಭದಲ್ಲಿ ಆಯುಧ ಪೂಜೆ ಮಾಡುವಾಗಲೂ ಇದು ಒಳಪಡುತ್ತದೆ. ಹಿಂದೆ ಕಳ್ಳಕಾಕರಿಂದ ಊರನ್ನು ರಕ್ಷಿಸಿದವರಿಗೆ ಈ ಆಯುಧವನ್ನು ಬಹುಮಾನವಾಗಿ ನೀಡುತ್ತಿದ್ದರು.

ಗುಗ್ಗುಳ ಕೊಡ



ವೀರಭದ್ರ ದೇವರಿಗೆ ಲಿಂಗಾಯತ ಸಮುದಾಯದವರು ಗುಗ್ಗಳ ಆಚರಣೆ ಮಾಡುವ ಸಂದರ್ಭದಲ್ಲಿ ಈ ಕೊಡವನ್ನು ಅಡಿ ಮೇಲಾಗಿ ಹೊತ್ತೊಯ್ಯುತ್ತಾರೆ. ಕೊಡದಲ್ಲಿ ಎಣ್ಣೆ, ಸಿಂಬೆ, ಹತ್ತಿಯ ಬತ್ತಿ ಮುಂತಾದವನ್ನು ಇಟ್ಟುಕೊಂಡು ಹೊತ್ತೊಯ್ಯುತ್ತಾರೆ. ಇದು ಒಂದು ಅರ್ಧಕೊಡದ ರಚನೆ. ಇದರ ಮೇಲಿನ ಅಂಚಿನ ಸುತ್ತ ಚಿತ್ತಾರಗಳನ್ನು ಬಿಡಿಸಿದ್ದಾರೆ. ನಾಲ್ಕು ಬದಿಗಳಲ್ಲೂ ನಿಂಬೆ ಹಣ್ಣುಗಳನ್ನು ದಾರದಿಂದ ಪೋಣಿಸಿ ಜೋತಾಡಿಸಲು ಅನುಕೂಲವಾಗುವಂತೆ ಪುಟ್ಟ ರಂಧ್ರಗಳುಳ್ಳ ರಚನೆಗಳು ಇರುತ್ತವೆ. ಇದು ಸುಮಾರು ಹನ್ನೆರಡರಿಂದ ಹದಿನೈದು ಇಂಚುಗಳಷ್ಟು ವ್ಯಾಸವುಳ್ಳದ್ದಾಗಿದೆ. ಅರ್ಧಕೊಡವಾಗಿರುವುದರಿಂದ ಮಧ್ಯದಲ್ಲಿ ತಗ್ಗಾಗಿದ್ದು ವಸ್ತುಗಳನ್ನು ಇಲ್ಲಿ ಇಟ್ಟುಕೊಳ್ಳುವುದಕ್ಕೆ ಅನುಕೂಲಕರವಾಗಿದೆ. ಕೊಡದ ಬಾಯಿಯನ್ನು ತಲೆಯ ಮೇಲೆ ಕೂರಿಸಿ ಕೊಡವನ್ನು ಹೊರುತ್ತಾರೆ. ಕೊಡವನ್ನು ಆವೆ ಮಣ್ಣಿನಿಂದ ತಯಾರಿಸಲಾಗಿದೆ.

ಗುಳ್ಳವ್ವನ ಬಾಗಿಲು







ಗುಳ್ಳವ್ವ ಉತ್ತರ ಕರ್ನಾಟಕದಲ್ಲಿ ಪೂಜೆಗೊಳ್ಳುವ ಒಬ್ಬ ಜನಪದ ಸ್ತ್ರೀ ದೇವತೆ, ಸಮೃದ್ಧಿ ದೇವತೆ. ಈಕೆಯ ಪೂಜೆಯು ಆಷಾಢ ಮಾಸದಲ್ಲಿ ಆರಂಭವಾಗಿ ನಾಗರ ಪಂಚಮಿಗೆ ಮುಗಿಯುತ್ತದೆ. ಈ ತಿಂಗಳಲ್ಲಿ ನಾಲ್ಕು ವಾರಗಳ ಕಾಲ ಗುಳ್ಳವ್ವನನ್ನು ಅವಿವಾಹಿತ ಹುಡುಗಿಯರು ಆರಾಧನೆ ಮಾಡುತ್ತಾರೆ. ಮೊದಲ ವಾರ ಒಂದು ಬಾಗಿಲನ್ನು ಎರಡನೆಯ ವಾರದಲ್ಲಿ ಮತ್ತೆ ಎರಡು ಬಾಗಿಲುಗಳನ್ನುಳ್ಳ ಬಾಗಿಲನ್ನು, ಮೂರನೆ ವಾರದಲ್ಲಿ ಮೂರು ಬಾಗಿಲುಗಳುಳ್ಳ ಬಾಗಿಲನ್ನು ನಾಲ್ಕನೇ ವಾರದಲ್ಲಿ ನಾಲ್ಕು ಬಾಗಿಲುಗಳುಳ್ಳ ಬಾಗಿಲನ್ನು ಪೂಜೆ ಮಾಡುತ್ತಾರೆ. ಅಂದರೆ ನಾಲ್ಕು ವಾರಗಳಲ್ಲಿ ಒಟ್ಟು ಹತ್ತು ಬಾಗಿಲುಗಳು ಪೂಜೆಗೊಳ್ಳುತ್ತವೆ. ಈ ಪೂಜೆಯ ಉದ್ದೇಶವು ಮಳೆ–ಬೆಳೆಗಳು ಸಮೃದ್ಧವಾಗಿರಲಿ ಎನ್ನುವುದಾಗಿದೆ. ಈ ಬಾಗಿಲುಗಳಲ್ಲಿ ವ್ಯತ್ಯಾಸಗಳಿವೆ ಹಾಗೂ ವೈವಿಧ್ಯಗಳಿವೆ. ವಿಭಿನ್ನ ಚಿತ್ತಾರಗಳ ರಚನೆಗಳಿವೆ. ಪೂಜಿಸುವ ಸಂದರ್ಭದಲ್ಲಿ ಹಾಡುಗಳನ್ನು ಹಾಡುವ ಸಂಪ್ರದಾಯವಿದೆ. ಗುಳ್ಳವ್ವನ ಬಾಗಿಲನ್ನು ತೇಗ ಮುಂತಾದ ಗಟ್ಟಿ ಜಾತಿಯ ಮರಗಳಿಂದ ತಯಾರಿಸುತ್ತಾರೆ.

ಚಂದಾಳದ ಗೊಂಬೆ/ ಚಂದನದ ಗೊಂಬೆ





ಬಾಲಿಕೆಯರು ಋತುಮತಿಯದಾಗ ಈ ಗೊಂಬೆಗಳನ್ನು ಅವರಿಗೆ ಕೊಟ್ಟು ಅವರನ್ನು ಆರತಿ ಬೆಳಗಿ ಪೂಜಿಸುವ ಸಂಪ್ರದಾಯ ಉತ್ತರ ಕರ್ನಾಟಕದಲ್ಲಿದೆ. ಈ ಗೊಂಬೆಗಳನ್ನು ತೇದು ಅದರ ರಸವನ್ನು ಕುಡಿದರೆ ಮಕ್ಕಳಾಗದವರಿಗೆ ಮಕ್ಕಳಾಗುತ್ತವೆ. ಮೈಮೇಲೆ 'ಕೆಂಪುಬಿದ್ದಾಗ'ಲೂ ಹುಳಕೀಟಗಳು ಹರಿದು ಚರ್ಮಕ್ಕೆ ಬಾಧೆಯಾದಾಗಲೂ ಇವನ್ನು ತೇದು ಹಚ್ಚಿದರೆ ಶಮನವಾಗುತ್ತದೆ ಎಂಬ ನಂಬಿಕೆಇದೆ. ಗರ್ಭಧರಿಸಿದ ಹಸುಗಳಿಗೆ ದೃಷ್ಟಿತಾಗದಂತೆಯೂ ಇದನ್ನು ಹಸುಗಳ ಕೊರಳಿಗೆ ಕಟ್ಟುತ್ತಾರೆ. ಎತ್ತುಗಳು ಕುಂಟುಬಿದ್ದಾಗ ಅದನ್ನು ನಿವಾರಿಸಲು ಇದರಿಂದ ಮೂರುಬಾರಿ ನಿವಾಳಿಸುತ್ತಾರೆ. ಆ ಸಂದರ್ಭದಲ್ಲಿ 'ಕುಂಟೆತ್ತು ನೆಟ್ಟಗಾಗಲಿ' ಎಂಬ ಮಂತ್ರವನ್ನು ಉಚ್ಚರಿಸುತ್ತಾರೆ.



ಚಂದನದ ಗೊಂಬೆಗಳು ನೆಟ್ಟಗೆ ನಿಲ್ಲಲು ತಳದಲ್ಲಿ ಪೀಠಗಳಿರುತ್ತವೆ. ಇವುಗಳ ಗಾತ್ರ ಮತ್ತು ವಿನ್ಯಾಸಗಳಲ್ಲಿ ವ್ಯತ್ಯಾಸಗಳಿದ್ದರೂ, ಸಾಮಾನ್ಯವಾಗಿ ಇವು ಸುಮಾರು ನಾಲ್ಕು ಇಂಚಿನಿಂದ ಒಂದಡಿ ಎತ್ತರದ ಗೊಂಬೆಗಳಿರುತ್ತವೆ. ಎಲ್ಲವೂ ಸ್ತ್ರೀ ವಿಗ್ರಹಗಳೆಂಬುದು ವಿಶೇಷ. ಇವು ಸಾಮಾನ್ಯ ಅರೆನಗ್ನವಾಗಿರುತ್ತವೆ. ಕೆಲವಕ್ಕೆ ಒಡ್ಯಾಣ ಮತ್ತು ಶಿರೋಭೂಷಣ ಧರಿಸಿದಂತೆ ಕೆತ್ತನೆ ಮಾಡುತ್ತಾರೆ. ಕೆಲವು ಗೊಂಬೆಗಳು ಎರಡು ಮಕ್ಕಳನ್ನು ಎತ್ತಿಕೊಂಡಂತೆ

ರಚನೆಯಾಗಿರುವುದು, ಬಾಲಿಕೆಯರು ಮೊದಲಬಾರಿ ಋತುಮತಿಯಾದಾಗ ಅವರಿಗೆ ತಾಯ್ತನದ ಅನುಭವಕ್ಕೆ ತರಬೇತಿ ನೀಡುವ ರೀತಿಯ ಜನಪದ ಆರಚಣೆಗಳ ಅರ್ಥವನ್ನು ಸೂಚಿಸುವಂತೆ ಕಾಣುತ್ತದೆ.

ಚೊಂಗ್ಯನ ಮಣೆ/ಚೊಂಗ್ಯೆ ಮಣೆ



ಇದು ಧಾರ್ಮಿಕ ಮಹತ್ವವನ್ನು ಒಳಗೊಂಡ ಒಂದು ವಸ್ತು. ಮೊಹರಂ ಹಬ್ಬದ ಕೊನೆಯ ದಿನ ಮತ್ತು ಕೌಡಿಪೀರ ಹಬ್ಬದ (ಮೊಹರಂ ಆಚರಣೆಯ ಒಂದು ತಿಂಗಳ ನಂತರ ಆಚರಿಸುವ ಅಂಥದೇ ಇನ್ನೊಂದು ಹಬ್ಬ) ಕೊನೆಯ ದಿನ ಹೋಳಿಗೆಗಳನ್ನು ಮಾಡುವಾಗ ಅದರ ಮೇಲೆ ಮೊಹರು ಬೀಳುವಂತೆ ಒತ್ತುವ ಮಣೆ. ಇದು ವೃತ್ತಾಕಾರದಲ್ಲಿದೆ. ಇದರ ಗಾತ್ರ ಮತ್ತು ವಿನ್ಯಾಸಗಳಲ್ಲಿ ವ್ಯತ್ಯಾಸಗಳಿವೆ. ಸಾಧಾರಣವಾಗಿ ಸುಮಾರು ಆರು ಇಂಚು ವ್ಯಾಸದ್ದಾಗಿರುತ್ತದೆ. ಮೇಲ್ಭಾಗದಲ್ಲಿ ಚಿತ್ತಾರಗಳಿರುತ್ತವೆ. ಮರ ಮತ್ತು ಬಳಪದ ಕಲ್ಲುಗಳಿಂದ ಈ ಮಣೆಗಳನ್ನು ತಯಾರಿಸಲಾಗುತ್ತದೆ.



ತೂಗುದೀಪ

ದೇವರ ಕೋಣೆ, ದೇವಾಲಯ, ದೈವಾಲಯಗಳಲ್ಲಿ ಸರ್ವ ಸಾಮಾನ್ಯವಾಗಿ ಇರುವ ದೀಪವಿಡುವ ಸಾಧನ. ಇದರಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ – ಸಂಕಲೆ ಮತ್ತು ದೀಪ ಎಂದು. ಸಂಕಲೆಯನ್ನು ಕೊಂಡಿಗೆ ಜೋತು ಹಾಕಲಾಗುತ್ತದೆ. ಸಂಕಲೆಯ ಬುಡವು ದೀಪದೊಂದಿಗೆ ಬಂಧಿತವಾಗಿರುತ್ತದೆ. ದೀಪವೂ ವೃತ್ತಾಕಾರದಲ್ಲಿದ್ದು ಸುಮಾರು ಆರು ಇಂಚು ವ್ಯಾಸವಿದೆ (ಗಾತ್ರದಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ). ದೀಪದಲ್ಲಿ ಐದು ಸಮಾನ ಅಂತರಗಳಲ್ಲಿ ಬತ್ತಿಗಳನ್ನು ಇಟ್ಟುಕೊಳ್ಳಲು ರಚನೆಗಳಿವೆ. ಇಂಥ ದೀಪಗಳನ್ನು ಹಚ್ಚುವಾಗ ಪೂರ್ವಾಭಿಮುಖವಾಗಿರುವ ಬತ್ತಿಗಳನ್ನು ಮೊದಲು ಉರಿಸಿ ಬಳಿಕ ಪ್ರದಕ್ಷಿಣಾ ರೂಪದಲ್ಲಿ ಹಚ್ಚುವುದು ಸಂಪ್ರದಾಯ. ತೂಗು ದೀಪಗಳನ್ನು ಕಂಚು, ಹಿತ್ತಾಳೆ, ಬೆಳ್ಳಿ ಮುಂತಾದ ಲೋಹಗಳಿಂದ ತಯಾರಿಸುತ್ತಾರೆ.



ಡೋಣಿ



ಮೈಲಾರಲಿಂಗನ ಆರಾಧಕರಾದ ಗೊರವಯ್ಯಗಳು ಆಹಾರ ಭಿಕ್ಷೆಯನ್ನು ಸ್ವೀಕರಿಸುವುದಕ್ಕೆ ಬಳಸುವ ವಿಶಿಷ್ಟಪಾತ್ರೆ. ಇದು ಸುಮಾರು ಎರಡು ಇಂಚು ಉದ್ದ, ಆರು ಇಂಚು ಅಗಲ, ಐದು ಇಂಚು ಎತ್ತರದ ದೋಣಿಯಾಕಾರದ ಪಾತ್ರೆ. ಇದರ ತಳಭಾಗವು ಚಪ್ಪಟೆಯಾಗಿದ್ದು ಡೋಣಿಯು ಮೇಲಕ್ಕೆ ಹೋದಂತೆ ಅಗಲವಾಗುತ್ತ ಹೋಗುತ್ತದೆ. ಹಗುರವಾದ ಇಂಗಳಾರದಂಥ ಮರದ ತುಂಡನ್ನು ಕೊರೆದು ಇದಕ್ಕೆ ನಿರ್ದಿಷ್ಟ ರೂಪ ಕೊಡುತ್ತಾರೆ. ನಿತ್ಯ ಸಂಚಾರ ಮಾಡುತ್ತ ಭಿಕ್ಷೆಗೆ ಗೊರವರು ತೆರಳಿದಾಗ ಭಕ್ತರು ನೀಡುವ ಆಹಾರ ಭಿಕ್ಷೆಯನ್ನು ಅವರು ಈ ಪಾತ್ರೆಯಲ್ಲಿಯೇ ಸ್ವೀಕರಿಸಿ, ಇದೇ ಪಾತ್ರೆಯಲ್ಲಿಯೇ ಉಣ್ಣುತ್ತಾರೆ. ಉಂಡ ಬಳಿಕ ತೊಳೆದು ಒಣಗಿಸಿಕೊಳ್ಳುತ್ತಾರೆ.

ಮೈಲಾರಲಿಂಗನ ಜಾತ್ರೆಯಲ್ಲಿ, ಹುಣ್ಣಿಮೆ ಅಮವಾಸ್ಯೆಯಂಥ ಪರ್ವದಿನಗಳಲ್ಲಿ ಭಾನುವಾರ, ಸೋಮವಾರಗಳಂಥ ದಿನಗಳಲ್ಲಿ ಗೊರವರು ಮೈಲಾರ ದೇವಾಲಯದ ಆವರಣದಲ್ಲಿ ಪ್ರಸಾದ ಸ್ವೀಕಾರಕ್ಕಾಗಿ ಡೋಣಿಯನ್ನು ಇಟ್ಟು ಕುಳಿತುಕೊಳ್ಳುತ್ತಾರೆ. 'ಹಣ್ಣು ತುಪ್ಪದ ಆಚರಣೆ'ಯೆಂಬ ಆಚರಣೆಯಲ್ಲಿ ಭಕ್ತರು ಗೊರವರಿಗೆ ಬಾಳೆಹಣ್ಣು, ತುಪ್ಪ, ಬೆಲ್ಲ, ಸಕ್ಕರೆ ಮುಂತಾದವುನ್ನು ಮಿಶ್ರಮಾಡಿ ಇದೇ ಪಾತ್ರೆಗೆ ನೀಡುತ್ತಾರೆ. ಮೈಲಾರಲಿಂಗನ ಪರಿವಾರವಾದ ನಾಯಿಯು ತಿನ್ನುವಂತೆ ಗೊರವರು ಕೂಡ ಈ ಡೋಣಿಯಲ್ಲಿ ಆಹಾರ ಸ್ವೀಕರಿಸುವ ಆಚರಣೆಯು ಮೈಲಾರಲಿಂಗನ ಜಾತ್ರೆಯಲ್ಲಿ ನಡೆಯುತ್ತದೆ. ಕಂಚಿನ ಡೋನಿಗಳು ಬಂದ ಬಳಿಕ ಮರದ ಡೋಣಿಗಳು ಮರೆಯಾಗುತ್ತಿವೆ.



ದಂಡ/ಯೋಗದಂಡ

ಋಷಿಮುನಿಗಳು ಮತ್ತು ಜಂಗಮರು ಧ್ಯಾನಮಾಡುವಾಗ ಬಳಸುವ ಸಾಧನ. ಇದು ಸುಮಾರು ಒಂದೂವರೆ ಅಡಿ ಉದ್ದವಿದ್ದು, ಸುಮಾರು ಹತ್ತು ಇಂಚು ಅಗಲವಿರುವ ದೋಣಿಯಾಕಾರದ ಮೇಲ್ತುದಿಯನ್ನು ಹೊಂದಿದೆ. ಇದರ ಮೇಲೆ ಎಡತೋಳನ್ನು ಇಟ್ಟುಕೊಂಡು ಧ್ಯಾನ ಮಾಡುತ್ತಿದ್ದರು. ಜಂಗಮರು ಕೂಡ ದಂಡವನ್ನು ಕೈಯಲ್ಲಿ ಹಿಡಿದುಕೊಂಡು ಸಂಚಾರ ಮಾಡುತ್ತಿದ್ದರು. ದಂಡಕ್ಕೆ ಜನಪದರು ಬಹಳ ಭಕ್ತಿಭಾವದಿಂದ ನಮಸ್ಕರಿಸುತ್ತಾರೆ. ಋಷಿಮುನಿಗಳಿಗೆ ಮತ್ತು



ಜಂಗಮರಿಗೆ ಎಷ್ಟು ಬೆಲೆ ಇದೆಯೋ ಅಷ್ಟೇ ಬೆಲೆ ಈ ದಂಡಕ್ಕೂ ಕೊಡುತ್ತಾರೆ. ದಂಡವನ್ನು ಸಾಗುವಾನಿ, ಮತ್ತಿ ಮುಂತಾದ ಮರಗಳಿಂದ ತಯಾರಿಸುತ್ತಾರೆ.

ದ್ವಿಮುಖ ಕಾಮದೇನು



ಕಾಮಧೇನು ಎಂದರೆ ಬಯಸಿದ್ದನ್ನು ಕೊಡುವ ವಿಶಿಷ್ಟ ದೈವಿಕ ಹಸು ಎನ್ನುವುದು ಎಲ್ಲರಿಗೂ ತಿಳಿದಿದೆ. ಆದರೆ ಇದು ಹಸುವಿನ ಆಕಾರವನ್ನು ಮಾತ್ರ ಹೊಂದಿಲ್ಲ. ಕೊರಳಿಂದ ಮೇಲೆ ಇದು ಮಾನವಾಕೃತಿ(ಸ್ತ್ರೀ), ಉಳಿದುದು ಹಸುವಿನ ಆಕಾರ. ಜತೆಗೆ ರೆಕ್ಕೆಗಳು ಇವೆ. ವಿಶಿಷ್ಟ ಭಂಗಿಯಲ್ಲಿ ಮಂಡಿಯೂರಿದಂತಿರುವ ಈ ದ್ವಿಮುಖ (ಮುಂದೆ ಮತ್ತು ಹಿಂದೆ ಮುಖ ಮಾಡಿದೆ) ಕಾಮಧೇನು ಪ್ರತಿಮೆ ಅತ್ಯಂತ ಅಪೂರ್ವ ಎನ್ನಲಾಗುತ್ತದೆ. ಈ ಪ್ರತಿಮೆಯನ್ನು ಮರದಿಂದ ನಿರ್ಮಿಸಿದ್ದಾರೆ.



ದೇವರ ಚೌಕಿ



ದೇವರ ಕೋಣೆಯಲ್ಲಿ ದೇವರ ಮೂರ್ತಿಯನ್ನು ಕೂರಿಸಲು ಬಳಸುವ ಪೀಠ. ಪೀಠದ ಗಾತ್ರ ಮತ್ತು ವಿನ್ಯಾಸದಲ್ಲಿ ಹಲವು ವ್ಯತ್ಯಾಸಗಳಿರುತ್ತವೆ. ಸಾಮಾನ್ಯವಾಗಿ ಇದರ ಮುಂಭಾಗದ ಎತ್ತರ ಏಳೂವರೆ ಇಂಚು, ಹಿಂಭಾಗದ ಎತ್ತರ ಒಂಭತ್ತು ಇಂಚು, ಉದ್ದ ಏಳು ಇಂಚು, ಅಗಲ ಹತ್ತೂವರೆ ಇಂಚು. ನಾಲ್ಕು ಕಾಲುಗಳಿದ್ದು ಅವುಗಳಿಗೆ ಮರದ ಹಲಗೆ ಜೋಡಿಸಲಾಗಿದೆ. ಹಿಂಭಾಗದ ಪಟ್ಟಿಗೂ ಸಹ ಹಲಗೆ ಜೋಡಿಸಲಾಗಿದೆ. ಮನೆಯ ಪಡಸಾಲೆ, ಕಟ್ಟೆ ಹಾಗೂ ಅಂಗಳದಲ್ಲಿ ಆಚರಿಸುವ ದೈವಿಕ ಆಚರಣೆಗಳಲ್ಲಿ ಹೆಚ್ಚಾಗಿ ಬಳಕೆಯಾಗುತ್ತವೆ.



ದೇವರ ಪೀಠ



ದೇವತಾ ಮೂರ್ತಿಗಳನ್ನು ಇರಿಸಿ ಪೂಜಿಸಿಕೊಳ್ಳಲು ಬಳಸುವ ಪೀಠ. ಸುಮಾರು ಒಂದೂವರೆ ಅಡಿ ಉದ್ದಗಲಗಳ ಚೌಕಾಕಾರದಲ್ಲಿದೆ. ಕಡೆದ ನಾಲ್ಕು ಕಾಲುಗಳು ಸುಮಾರು ಐದು ಇಂಚು ಎತ್ತರ ಇವೆ. ಅವುಗಳ ಮೇಲ್ತುದಿ ಎಂಬಂತೆ ನಾಲ್ಕು ಕಡೆಗೂ ಗುಮ್ಮಟಾಕಾರವಿದೆ. ಚೌಕದ ಮಧ್ಯೆ ಹಲಗೆಗಳನ್ನು ಜೋಡಿಸಿದೆ. ಅಲ್ಲಿ ನಾಗಬಂಧದಂತೆ ಕಾಣುವ ಮತ್ತು ಬಳ್ಳಿಗಳು ಹೆಣೆದಂತಿರುವ ಹಾಗೂ ಮಧ್ಯದಲ್ಲಿ ದೊಡ್ಡ ಹೂವೊಂದರ ಚಿತ್ತಾರ ಬಿಡಿಸಿದೆ. ಈ ಪೀಠವು ತುಂಬ ಭಾರವಿದ್ದು ಚೌಕದ ಸುತ್ತುಪಟ್ಟಿಯಲ್ಲಿ ಕೂಡ ಅಲಂಕಾರಕ್ಕಾಗಿ ಸಣ್ಣ ಪ್ರಮಾಣದ ಕೆತ್ತನೆ ಮಾಡಿದೆ. ಒಟ್ಟು ರಚನೆಯಲ್ಲಿ ಎಲ್ಲೂ ಕಬ್ಬಿಣವನ್ನು ಬಳಸಿಕೊಂಡಿಲ್ಲ.



ದೊಣ್ಣೆಪ್ಪ



ಕಣದಲ್ಲಿ ಧಾನ್ಯಗಳನ್ನು ಒಕ್ಕಣೆಮಾಡಿದ ಸಂದರ್ಭದಲ್ಲಿ ರಾಶಿಯ ಮುಂಭಾಗದಲ್ಲಿ ಇದನ್ನು ಇಟ್ಟು ಪೂಜೆಮಾಡುತ್ತಾರೆ. ಮನೆಯ ಚಿಕ್ಕಮಕ್ಕಳು ಕಿರಿಕಿರಿಮಾಡಿದಾಗ ದೊಣ್ಣೆಪ್ಪನನ್ನು ಜಗಲಿಯಲ್ಲಿಟ್ಟು ಪೂಜೆಮಾಡಿದರೆ ಮಕ್ಕಳ ಕಿರಿಕಿರಿ ಕಡಿಮೆಯಾಗುತ್ತದೆ ಎಂಬ ನಂಬುಗೆ ಜನಪದರಲ್ಲಿದೆ. ಇದು ಸುಮಾರು ಮೂರು ಅಡಿ ಎತ್ತರವಿದ್ದು ತಳದಲ್ಲಿ ಸುಮಾರು ಒಂಬತ್ತು ಇಂಚು ಮತ್ತು ತುದಿಯಲ್ಲಿ ಸುಮಾರು ನಾಲ್ಕು ಇಂಚು ಸುತ್ತಳತೆ ಇದೆ.

ನಾಮದಯಾ



ತೀರ್ಥವನ್ನು ಹಾಕುವುದಕ್ಕೆ ಬಳಸುವ ಕಂಚಿನ ಪುಟ್ಟ ಪಾತ್ರೆ. ಇದಕ್ಕೆ ಗಿಂಡಿಯ ಆಕಾರವಿರುತ್ತದೆ. ಬದಿಗಳಲ್ಲಿ ಕಿವಿಯ ಆಕಾರದ ಮೂರು ರಚನೆಗಳಿದ್ದು ಅವಕ್ಕೆ ರಂಧ್ರಗಳಿರುತ್ತವೆ. ಈ ರಂಧ್ರಗಳ ಮೂಲಕ ಸರಪಳಿ ಕಟ್ಟಿ ನಾಮದಯವನ್ನು ನೇತುಹಾಕುತ್ತಾರೆ. ತೀರ್ಥವು ನೆಲಸ್ಪರ್ಶವಾಗಬಾರದೆಂಬ ಸಂಕಲ್ಪಕ್ಕಾಗಿ ನಾಮದಯಾದ ತಳಭಾಗದಲ್ಲಿ ಮೂರು ಪುಟ್ಟ ಕಾಲುಗಳಂಥ ರಚನೆಗಳಿರುತ್ತವೆ. ನಾಮದಯಾದಲ್ಲಿ ಸುಮಾರು ಒಂದು ಅಥವಾ ಎರಡು ತೆಂಗಿನಕಾಯಿಗಳ ನೀರು ಹಿಡಿಸುತ್ತದೆ. ಕಂಚಿನಿಂದ ನಾಮದಯಾವನ್ನು ತಯಾರಿಸುತ್ತಾರೆ.

ಮರದ ನಾಗರ ಹಾವು



ಪೌರಾಣಿಕ ನಾಟಕದಲ್ಲಿ ಬಳಸುವ ನಾಗಾಸ್ತ್ರ. ಇದು ಸುಮಾರು ಮೂರು ಅಡಿ ಉದ್ದವಿದ್ದು, ಹಾವಿನಂತೆ ನುಲಿದುಕೊಂಡಿರುತ್ತದೆ. ಮುಂದಿನ ಭಾಗವು ಹಾವಿನ ಹೆಡೆಯ ಆಕಾರದಲ್ಲಿದೆ. ಗ್ರಾಮೀಣ ಪ್ರದೇಶದಲ್ಲಿ ಜನಪದರು ಪೌರಾಣಿಕ ನಾಟಕಗಳನ್ನು ಕಲಿಯುವ ಸಂದರ್ಭದಲ್ಲಿಯೂ ಹಾಗೂ ನಾಟಕಗಳ ಪ್ರದರ್ಶನದಲ್ಲಿಯೂ ಈ ಮರದ ಹಾವನ್ನು ಬಳಸುತ್ತಾರೆ. ಹಾವಿನ ಕಲ್ಪನೆ ಮಾಡಿಕೊಂಡು ಈ ವಸ್ತುವನ್ನು ಬಳಸುತ್ತಾರೆ. ಪ್ಲಾಸ್ಟಿಕ್ ಹಾವು ಬಳಕೆಗೆ ಬಂದಮೇಲೆ ಮರದ ಹಾವಿನ ಬಳಕೆ ಕಡಿಮೆಯಾಗಿದೆ. ಇದನ್ನು ಸಾಗುವಾನಿ ಮರದಿಂದ ತಯಾರಿಸಿದ್ದಾರೆ.

ಮರದ ಸುತ್ತಿಗೆ/ಜಾಗಟಿ ಸುತ್ತಿಗೆ



ಜಾಗಟೆಯನ್ನು ಬಾರಿಸುವುದಕ್ಕೆ/ ಹೊಡೆಯುವುದಕ್ಕೆ ಬಳಸುವ ಮರದ ಸುತ್ತಿಗೆ. ಈ ಸುತ್ತಿಗೆಯ ಹಿಡಿಕೆಯು ಸುಮಾರು ಒಂದು ಅಡಿ ಉದ್ದವಿದ್ದು ಸುಮಾರು ಐದು ಇಂಚು ಸುತ್ತಿಗೆ ಇರುತ್ತದೆ. ಜಾಗಟೆಯನ್ನು ದಾಸಯ್ಯ ಎಂಬ ಒಕ್ಕಲಿಗ ಜನರು ಬಾರಿಸುತ್ತಾರೆ. ಇವರು ಹಬ್ಬಹರಿದಿನ, ಜಾತ್ರೆ, ಉತ್ಸವ, ಸಂತೆಗಳಲ್ಲಿ ಜಾಗಟೆ ಬಾರಿಸುತ್ತಾರೆ. ಮನೆ ಮನೆಗಳಿಗೆ ಹೋಗಿ, ದೇವರ ಹರಿಗೆಯನ್ನು ಇಟ್ಟು, ಎಡೆಹಾಕಿ, ಜಾಗಟೆ ಬಾರಿಸಿ, ಪೂಜೆ ಮಾಡುತ್ತಾರೆ. ಸುತ್ತಿಗೆಯ ಆಕಾರವು ಕಬ್ಬಿಣದ ಸಣ್ಣ ಸುತ್ತಿಗೆಯತಿದೆ. ಈ ಸುತ್ತಿಗೆಯನ್ನು ಬನ್ನಿ ಮರದಿಂದ ತಯಾರಿಸಿದ್ದಾರೆ.

ಲಕ್ಷ್ಮೀಕೊಡ



ಹಟ್ಟಿ ಹಬ್ಬದ (ದೀಪಾವಳಿ) ಸಂದರ್ಭದಲ್ಲಿ ಪೂಜೆಗೊಳ್ಳುವ ಒಂದು ಸಾಧನ. ಇದು ಲಕ್ಕಮ್ಮ(ಲಕ್ಷ್ಮೀ)ನ ಸಂಕೇತವಾಗಿ ಜನಪದರಿಂದ ಆರಾಧನೆಗೊಳ್ಳುತ್ತದೆ. ಈ ಕೊಡದ ಮೇಲೆ ತೆಂಗಿನಕಾಯಿ, ಕುಪ್ಪಸದ ಕಣ, ತಾಳಿ, ಮುತ್ತಿನ ಸರ ಇತ್ಯಾದಿಗಳನ್ನು ಇರಿಸಲಾಗುತ್ತದೆ. ಹಟ್ಟಿ ಹಬ್ಬವನ್ನು ಜನಪದರು ಮುಂಜಾನೆ/ಹಗಲು/ಸಾಯಂಕಾಲ ಹೊತ್ತಿಗೆ ಮಾಡಬಹುದಾದರೂ ಲಕ್ಷ್ಮೀಕೊಡವಂತೂ ಅನಿವಾರ್ಯವಾಗಿರುತ್ತದೆ. ಲಕ್ಕಮ್ಮ ದೇವತೆ ಸಮೃದ್ಧಿಯನ್ನು ಸಂಕೇತಿಸುತ್ತಾಳೆ. ಕೊಡನ್ನು ಆವೆ ಮಣ್ಣಿನಿಂದ ತಯಾರಿಸುತ್ತಾರೆ. ಕೊಡಕ್ಕೆ ಸಾಮಾನ್ಯವಾಗಿ ನಾಗನ ಹೆಡೆಗಳ ಚಿತ್ರಗಳಿಂದ ಅಲಂಕರಿಸುತ್ತಾರೆ. ಈ ಕೊಡವನ್ನು ಜೋಪಾನವಾಗಿ ತೆಗೆದಿರಿಸಿ ಮುಂದಿನ ವರ್ಷವೂ ಬಳಸಿಕೊಳ್ಳುತ್ತಾರೆ.

ವ್ಯಾಸಪೀಠ



ಪ್ರವಚನ ಹಾಗೂ ಪೂಜೆಯ ಸಂದರ್ಭದಲ್ಲಿ ಗ್ರಂಥಗಳನ್ನು ಓದಲು ಬಳಸುವ ಮರದ ಸ್ಟ್ಯಾಂಡ್. ನೆಲದ ಮೇಲೆ ಮರದ ಹಲಗೆಯಿಂದ ಮಾಡಿದ 'ಮಣೆ'ಯನ್ನು ಇಟ್ಟು ಕುಳಿತು ಕೃತಿಯನ್ನು ಓದಲು ಇದರ ಬಳಕೆ. ಕತ್ತರಿಯಾಕಾರದ ಈ ಸಲಕರಣೆಯ ಕೆಳಭಾಗವು ಕಾಲುಗಳಾಗಿಯೂ ಮೇಲುಭಾಗವು ಪುಸ್ತಕವನ್ನಿಟ್ಟುಕೊಳ್ಳಲು ಅನುಕೂಲವಾಗುವಂತೆಯೂ ಇದರ ರಚನೆ ಇದೆ. ಇದನ್ನು ಮಡಚಲು ಸಾಧ್ಯವಾಗುವಂತೆ ಬಡಗಿಯು ತನ್ನ ಜಾಣ್ಮೆಯಿಂದ ಒಂದೇ ಮರದ ತುಂಡನ್ನು ಸೀಳಿ, ರಂಧ್ರ,ಎಡೆಕೊರೆದು ಇದನ್ನು ರಚಿಸಿದ್ದಾನೆ. ಕುರ್ಚಿ, ಮೇಜುಗಳು ಬಳಕೆಗೆ ಬಂದ ಮೇಲೆ ಇಂಥ ವ್ಯಾಸಪೀಠಗಳನ್ನು ಕೇಳುವವರೆ ಇಲ್ಲ. ಹಿಂದಿನ ಕಾಲದವರು ಮಾತ್ರ ಅಪೂರ್ವವಾಗಿ ವ್ಯಾಸಪೀಠಗಳನ್ನು ಬಳಸುತ್ತಾರೆ. ವ್ಯಾಸಪೀಠಗಳ ಮೇಲೆ ಧಾರ್ಮಿಕ ಗ್ರಂಥಗಳನ್ನಷ್ಟೇ ಇಟ್ಟು ಓದುವುದು ಸಂಪ್ರದಾಯ.

ವಿಭೂತಿ ಕರಡಿಗೆ/ ಭಸ್ಮದ ಕರಡಿಗೆ





ವಿಭೂತಿಯನ್ನು ಇರಿಸಿಕೊಳ್ಳಲು ಬಳಸುವ ಸಾಧನ. ಜನಪದರಲ್ಲಿ ಅರಿಸಿನ ಕುಂಕುಮದಂತೆಯೇ ವಿಭೂತಿಗೂ ತುಂಬ ಧಾರ್ಮಿಕ ಮಹತ್ವವಿದೆ. ವಿಭೂತಿ ಕರಡಿಗೆಗಳು ಬೇರೆ ಬೇರೆ ವಿನ್ಯಾಸಗಳಲ್ಲಿ ರಚನೆಯಾಗಿವೆ. ಬಸವ, ಶಿವಲಿಂಗ ಹಾಗೂ ತೇರಿನಂಥ ವಿನ್ಯಾಸದ ಕರಡಿಗೆಯಲ್ಲಿ ಗಾಲಿಗಳು ಮತ್ತು ಗಡ್ಡೆ ಇರುತ್ತದೆ. ಗಡ್ಡೆಯ ಮೇಲ್ಭಾಗದಲ್ಲಿ ವಿಭೂತಿಯನ್ನು ಇರಿಸಿಕೊಳ್ಳಲು ಅನುಕೂಲವಾಗುವಂತೆ ಗಡ್ಡೆಯನ್ನು ಕೊರೆಯಲಾಗಿದೆ. ಇದಕ್ಕೆ ಮೇಲೆ ಮುಚ್ಚಳವೂ ಇದೆ. ಬಸವ, ಚರ್ತುಮುಖ ಬಸವ, ನವಿಲು, ಸಿರಿಪಾದ, ಶಿವಲಿಂಗ, ತೇರು, ದೇವಾಲಯ ಮುಂತಾದ ವಿನ್ಯಾಸಗಳಲ್ಲೂ ವಿಭೂತಿ ಕರಡಿಗೆಗಳಿವೆ. ಅಲಂಕಾರಿಕ ಕೆತ್ತನೆಗಳೂ ಇರುತ್ತವೆ.





ಗಾಲಿಗಳುಳ್ಳ ವಿಭೂತಿ ಕರಡಿಗೆಗಳು ಸಾಮೂಹಿಕ ಭೋಜನದ ಸಂದರ್ಭಗಳಲ್ಲಿ ಬಳಕೆಯಾಗುತ್ತವೆ. ವಿಭೂತಿಯನ್ನು ಭೋಜನ ಆರಂಭವಾಗುವ ಮೊದಲು ಹಚ್ಚಿಕೊಳ್ಳುವುದು ರೂಢಿ. ದೈವಾಲಯ ದೇವಾಲಯಗಳಲ್ಲಿ ವಿಭೂತಿ ಕರಡಿಗೆಗಳನ್ನು ಗೂಟ/ಜಂತಿಗಳಿಗೆ ನೇತು ಹಾಕಲಾಗುತ್ತದೆ. ವಿಭೂತಿ ಕರಡಿಗೆಯನ್ನು ಹಲಸು, ಸಾಗುವಾನಿ ಮುಂತಾದ ಮರಗಳಿಂದ ತಯಾರಿಸಲಾಗುತ್ತದೆ.



ಸರಸ್ವತಿ ವಿಗ್ರಹ

ವಿದ್ಯೆ ಕಲಿಯಲು ಸರಸ್ವತಿ ದೇವಿಯನ್ನು ಪೂಜಿಸುತ್ತಾರೆ. ಜನರ ಮನದಲ್ಲಿ ಜ್ಞಾನದೇವಿಯಾಗಿ ಪವಿತ್ರವೆನಿಸಿರುವ ಈ ದೇವಿಗೆ ನವರಾತ್ರಿಯಲ್ಲಿ ವಿಶೇಷ ಪೂಜೆ ಇದೆ. ಭಕ್ತಿಯುಳ್ಳ ಜನರು ಸರಸ್ವತಿ ವಿಗ್ರಹಗಳನ್ನು ಮಾಡಿಸಿ ತಮ್ಮ ಮನೆಗಳಲ್ಲಿ ಪೂಜಿಸುತ್ತಾರೆ. ವಿಗ್ರಹದಲ್ಲಿ ಸರಸ್ವತಿಯು ವೀಣೆ ನುಡಿಸುತ್ತ ನವಿಲಿನ ಮೇಲೆ ಆಸೀನಳಾದಂತಿದೆ. ಮೂರು ಇಂಚು ಎತ್ತರ ವಿರುವ ಈ ವಿಗ್ರಹವನ್ನು ಒಂದು ಇಂಚು ದಪ್ಪದ ಹಲಗೆಯ ಮೇಲೆ ಕೆತ್ತಲಾಗಿದೆ. ಹಿಂಭಾಗವು ಸಮತಟ್ಟಾಗಿದೆ. ಸಾಗುವಾನಿ ಮರದಿಂದ ಮಾಡಲಾದ ಈ ವಿಗ್ರಹ ಚಿಕ್ಕದಾಗಿದ್ದರೂ ಚಿತ್ತಾಕರ್ಷಕವಾಗಿದೆ.



ಶಸ್ತ್ರ

ಮೈಲಾರಲಿಂಗನ ಭಕ್ತರಾದ ಗೊಗ್ಗಯ್ಯಗಳು/ಗೊರವಯ್ಯಗಳು, ವೀರಭದ್ರನ ಭಕ್ತರು ಹರಕೆ ತೀರಿಸಲು ಬಳಸುವ ಸಲಕರಣೆ. ಇದು ಸುಮಾರು ಎರಡು ಅಡಿ ಉದ್ದದ, ಚಿಕ್ಕ ಮೊಳೆಯಷ್ಟು ದಪ್ಪದ ಸಾಧನ. ಇದನ್ನು ಎಡಕೆನ್ನೆಯಿಂದ ಬಲಕೆನ್ನೆಯತ್ತ ಚುಚ್ಚಿ ಸುಮಾರು ಅರ್ಧದಷ್ಟನ್ನು ದಾಟಿಸುತ್ತಾರೆ. ಹಾಗೆ ಶಸ್ತ್ರವನ್ನು ಚುಚ್ಚಿಕೊಂಡು ಇವರು ಗಂಟೆಗಟ್ಟಲೆ ಇರುತ್ತಾರೆ. ಚುಚ್ಚಿದ ಶಸ್ತ್ರವನ್ನು ತೆಗೆಯುವಾಗ ಆಗುವ ಗಾಯಕ್ಕೆ ವಿಭೂತಿ ಬಂಢಾರವನ್ನು ಹಚ್ಚುವ ಕ್ರಮವಿದೆ. ಶಸ್ತ್ರವನ್ನು ತಾಮ್ರದಿಂದ ತಯಾರಿಸುತ್ತಾರೆ. ಇದರ ತುದಿ ಚೂಪಾಗಿದ್ದು. ಬುಡವು ಮೊಳೆಯ ತಲೆಯಂತೆ ಚಪ್ಪಟೆಯಾಗಿರುತ್ತದೆ.

ಶಂಖ



ದೇವರ ಪೂಜೆಯಲ್ಲಿ ಬಳಕೆಯಾಗುವ ವಸ್ತು. ವಿಷ್ಣು ಭಕ್ತರಾದ ದಾಸರು ಇದನ್ನು ಹೆಚ್ಚು ಬಳಸುತ್ತಾರೆ. ದಾಸಪ್ಪನವರನ್ನು ಭಕ್ತರು ಮನೆಮನೆಗೆ ಕರೆದು ಪೂಜಿಸುವ ಸಂಪ್ರದಾಯವಿದ್ದು ಆ ಬಗೆಯ ಪೂಜಾ ಸಂದರ್ಭದಲ್ಲಿ ದಾಸಪ್ಪಗಳು ಶಂಖವನ್ನು ಊದುವ ಮೂಲಕ ಪೂಜೆ ಪೂರೈಸುತ್ತಾರೆ. ಹುಟ್ಟಿದಾಗ, ಸತ್ತಾಗ ಆಗುವ ಸೂತಕ ಕಳೆಯಲು ಶಂಖವು ದಾಸರಿಂದ ಪೂಜೆಯಲ್ಲಿ ಬಳಕೆಯಾಗುತ್ತದೆ. ಶಂಖವು ಯಾವುದೇ ಮನುಷ್ಯ ನಿರ್ಮಿತಿಯಲ್ಲ. ಪ್ರಕೃತಿ ಸಹಜವಾಗಿ ಸಮುದ್ರ ದಂಡೆಗಳಲ್ಲಿ ಸಿಗುತ್ತದೆ. ಶಂಖದ ಚಿಪ್ಪಿನ ರಕ್ಷಣಾ ಕವಚವನ್ನು ಹೊಂದಿರುವ ಸಾಗರ ಜೀವಿ. ಅದನ್ನು ಚಿಪ್ಪಿನಿಂದ ಹೊರತೆಗೆದು ಊದುವ ಪೂಜಾ ಪರಿಕರವಾಗಿ ಬಳಸುತ್ತಾರೆ. ಸಣ್ಣಗಾತ್ರದ ಶಂಖದಿಂದ ದೊಡ್ಡಗಾತ್ರದ ಶಂಖದವರೆಗೂ ಇರುತ್ತದೆ. ಶಂಖದ ಆಕಾರ, ಬಣ್ಣ, ಭಾರ ಇತ್ಯಾದಿಗಳ ಬಗೆಗೆ ಎಲ್ಲರಿಗೂ ತಿಳಿದಿದೆ. ಹೆಚ್ಚಿನ ಶಂಖಗಳು ಎಡಮುರಿಗಳಾಗಿರುತ್ತವೆ. ಬಲಮುರಿ ಶಂಖಕ್ಕೆ ವಿಶೇಷ ಪ್ರಾಧಾನ್ಯವಿದೆ.

ಹಣತೆ



ದೀಪ ಹಚ್ಚಲು ಬಳಕೆಯಾಗುವ ಮಣ್ಣಿನ ಸಾಧನ. ಸಾಮಾನ್ಯವಾಗಿ ಇದರ ಮೇಲ್ಭಾಗವು ಅರಳಿಎಲೆಯ ಆಕಾರದಲ್ಲಿದ್ದು ಅದರ ಮಧ್ಯವು ತಗ್ಗಾಗಿರುತ್ತದೆ. ಬತ್ತಿಯನ್ನಿರಿಸಿ ಎಣ್ಣೆ ಎರೆಯಲು ಅವಕಾಶವಾಗುವಂತೆ ಹಣತೆಯನ್ನು ತಯಾರಿಸಲಾಗುತ್ತದೆ. ಸಾಮಾನ್ಯ ಹಣತೆಗಳಲ್ಲಿ ಒಂದೆಡೆ ಮಾತ್ರ ಬತ್ತಿ ಇಟ್ಟು ಉರಿಸಲು ರಚನೆಗಳಿವೆ. ವಿಶೇಷ ಹಣತೆಗಳಲ್ಲಿ ಐದೆಡೆ ಹಾಗೆ ಉರಿಸಬಹುದು. ಕೆಂಪು, ಕಪ್ಪು, ಬೂದು ಬಣ್ಣದ ಆವೆ ಮಣ್ಣನ್ನು ಹದಗೊಳಿಸಿ, ಅಚ್ಚುಬಳಸಿ ಇದನ್ನು ತಯಾರಿಸಲಾಗುತ್ತದೆ. ನಾನಾ ಗಾತ್ರಗಳಲ್ಲಿ ತಯಾರಾಗುವ ಹಣತೆ ಕೆಲವೊಮ್ಮೆ ತುಂಬ ಕಲಾತ್ಮಕವಾಗಿಯೂ ಇರುತ್ತವೆ. ಕೆಲವೆಡೆ ಜಗಲಿಯ(ದೇವರ ಕೋರೆ) ಮೇಲೆ ಉರಿಸಬಾರದೆಂದೂ ಮನೆಯಲ್ಲಿ ಯಾರಾದರೂ ತೀರಿಕೊಂಡರೆ ಮಣ್ಣಿನ ಹಣತೆಗಳನ್ನೇ ಬಳಸಬೇಕೆಂದೂ ವಿಧಿ ನಿಷೇಧಗಳಿವೆ.



ಚಿನ್ನ, ಬೆಳ್ಳಿ, ಕಂಚು, ಹಿತ್ತಾಳೆ, ತಾಮ್ರ ಅಥವಾ ಸ್ಟೀಲ್‌ನಿಂದಲೂ, ಕಲ್ಲಿನಿಂದಲೂ ಹಣತೆಗಳನ್ನು ರಚಿಸಲಾಗುತ್ತದೆ.

ಹರಕೆ ತೊಟ್ಟಿಲು



ಹರಕೆಯನ್ನು ಕೊಡುವ/ತೀರಿಸುವ ಉದ್ದೇಶಕ್ಕಾಗಿ ದೇವಾಲಯದ ಮುಂಭಾಗದಲ್ಲಿರುವ ಮರದ ಒಂದು ಕೊಂಟಿಗೆ ಅಥವಾ ದೇವಾಲಯದ ಒಂದು ಭಾಗದಲ್ಲಿ ಕಟ್ಟುವ ಮರದ ಚಿಕ್ಕ ತೊಟ್ಟಿಲು. ಸುಮಾರು ಒಂದು ಅಡಿ ಉದ್ದ, ಅರ್ಧ ಅಡಿ ಅಗಲವಾಗಿರುತ್ತದೆ. ನಾಲ್ಕು ಭಾಗಗಳಲ್ಲಿ ಸುಮಾರು ಅರ್ಧ ಅಡಿ ಎತ್ತರದ ಗೂಟಗಳಿರುತ್ತವೆ. ಈ ಗೂಟಗಳಿಗೆ ಸೇರಿದಂತೆ ಮರದ ತೆಳು ಹಲಗೆ ತುಂಡನ್ನು ಜೋಡಿಸಿದ್ದಾರೆ. ತೊಟ್ಟಿಲಿನ ಸುತ್ತ ಮತ್ತು ತೊಟ್ಟಿಲಿನ ಮೇಲ್ಭಾಗದಲ್ಲಿ ಚಿತ್ತಾರದ ಕೆತ್ತನೆಗಳಿವೆ. ಮಕ್ಕಳು ಆಗದವರು ತೊಟ್ಟಿಲ ಹರಕೆ ಹೊತ್ತು ಮಕ್ಕಳಾದ ಬಳಿಕ ಹರಕೆ ಒಪ್ಪಿಸುವ ಸಂದರ್ಭದಲ್ಲಿ ಈ ತರಹದ ತೊಟ್ಟಿಲುಗಳು ಬಳಕೆಯಾಗುತ್ತವೆ.



ಹಾಸಕ್ಕಿ ಕಲ್ಲು/ತೊಳಲಿ ಕಲ್ಲು



ಮದುವೆ ಸಂದರ್ಭದಲ್ಲಿ ಭತ್ತವನ್ನು ಬೀಸಲು ವಿಶೇಷವಾಗಿ ಬಳಕೆಯಾಗುತ್ತದೆ. ಇದು ವೃತ್ತಾಕಾರದಲ್ಲಿದ್ದು ಸುಮಾರು ಒಂದೂವರೆ ಅಡಿ ವ್ಯಾಸವಿದೆ. ಇದರ ಮೇಲಿನ ಭಾಗವು ಟ್ರಾಕ್ಟರ್ ಚಕ್ರಾಕಾರದ ಹತ್ತೊಂಬತ್ತು ರಚನೆಯನ್ನು ಹೊಂದಿದೆ. ಪ್ರತಿಯೊಂದಕ್ಕೂ ಸುಮಾರು ಎರಡೂವರೆ ಇಂಚು ಅಂತರವಿದೆ. ಅದರ ಒಳಸುತ್ತಿನಲ್ಲಿ ಅಡಿಗಲ್ಲಿನ ಗೂಟವನ್ನು ಸಿಕ್ಕಿಸಲು ಒಂದು ರಂಧ್ರವು (ಸರಿಯಾಗಿ ಮಧ್ಯದಲ್ಲಿ) ಇದೆ. ಅದರ ಇಬ್ಬದಿಗಳಲ್ಲಿ ಧಾನ್ಯವು ಒಳಗೆ ಪ್ರವೇಶಿಸಲು ಅಗತ್ಯವಾದ ರಂಧ್ರಗಳಿವೆ. ಹೊರಸುತ್ತಿನ ಅಂಚಿನ ಬಳಿ ಹಿಡಿಕೆಯ ಗೂಟ ಜೋಡಿಸಲು ಒಂದು ರಂಧ್ರವಿದೆ. ಮೇಲ್ಭಾಗದ ತಿರುಗಲ್ಲು ಸುಮಾರು ಮೂರು ಇಂಚು ದಪ್ಪವೂ ಇರುವುದರಿಂದ ಭಾರವಾಗಿದೆ.

ಮದುವೆಯಾಗುವ ಸಂದರ್ಭದಲ್ಲಿ ಹಸೆಗೆ ಹಾಕಲು ಮತ್ತು ಅಕ್ಷತೆ ಎರಚುವುದಕ್ಕೆ ಬೇಕಾದ ಅಕ್ಕಿಯನ್ನು ಇದರಲ್ಲಿ ಬೀಸಿ ತಯಾರಿಸಿಕೊಳ್ಳುವುದು ಉತ್ತರ ಕರ್ನಾಟಕದಲ್ಲಿ ರೂಢಿ. ಇದರಲ್ಲಿ ಯಾರೂ ಕುಳಿತು ಕೊಳ್ಳುವುದಿಲ್ಲ. ಇದರಲ್ಲಿ ವಿಶೇಷವಾದ ಅಕ್ಕಿಯನ್ನು ಬೀಸಿಕೊಳ್ಳುವ ಮೊದಲು ಇದನ್ನು ಹೆಣ್ಮಕ್ಕಳು ಪೂಜಿಸುತ್ತಾರೆ. ಕಲ್ಲು ಎಂದು ಹೆಸರಿರುವುದಾದರೂ ಇದನ್ನು ಮರದಿಂದ ತಯಾರಿಸಿದ್ದಾರೆ.

ಹೂಬುಟ್ಟಿ



ಪೂಜಾ ಸಾಮಗ್ರಿಗಳನ್ನು ಕೊಂಡೊಯ್ಯಲು ಬಳಸುವ ವಸ್ತು. ಇದು ಸುಮಾರು ಹನ್ನೆರಡು ಇಂಚು ಎತ್ತರ ಇಪ್ಪತ್ತೇಳು ಇಂಚು ಸುತ್ತಳತೆ ಹೊಂದಿರುತ್ತದೆ. ಇದಕ್ಕೆ ಮುಚ್ಚಳವನ್ನು ಜೋಡಿಸಲಾಗಿರುತ್ತದೆ. ಅಲ್ಲದೆ ಭದ್ರವಾಗಿರಲು ಬೀಗ ಹಾಕುವ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗಿರುತ್ತದೆ. ಇದಕ್ಕೆ ವಿವಿಧ ಬಣ್ಣದ ಪ್ಲಾಸ್ಟಿಕ್ ವೈರಿನಿಂದ ಅಲಂಕಾರಗೊಳಿಸಲಾಗಿದೆ. ತೋಟದಿಂದ ಹೂಗಳನ್ನು ಕೊಯ್ದು ತರಲು, ದೇವಸ್ಥಾನಕ್ಕೆ ಮನೆಯಿಂದ ಪೂಜಾ ಸಾಮಗ್ರಿಗಳನ್ನು ಕೊಂಡೊಯ್ಯಲು (ವಿಶೇಷವಾಗಿ ಹೂಗಳನ್ನು) ಕೊಂಡೊಯ್ಯಲು ಬಳಕೆಯಾಗುತ್ತದೆ. ಇತ್ತೀಚೆಗೆ ಇಂಥವುಗಳಲ್ಲಿ ತರಕಾರಿಗಳನ್ನು ಹಾಕಿಡಲು ಬಳಸಿಕೊಳ್ಳುತ್ತಿದ್ದಾರೆ. ಇದನ್ನು ಬಿದಿರಿನಿಂದ ತಯಾರಿಸುತ್ತಾರೆ. ವಿವಿಧ ರೂಪಗಳಲ್ಲಿ ಇವನ್ನು ಕಾಣಬಹುದಾಗಿದೆ.

ಹೂವಾರತಿ / ಆರತಿ ತಟ್ಟೆ



ಹಬ್ಬ ಹರಿದಿನ, ಜಾತ್ರೆ, ಉತ್ಸವಗಳಲ್ಲಿ ದೇವರಿಗೆ ಪೂಜೆ ಮಾಡುವ ಸಂದರ್ಭದಲ್ಲಿ ಪಣತಿ, ಕುಂಕುಮ ಭರಣಿ/ಬಟ್ಟಲು, ಕಳಸ ಮುಂತಾದವುಗಳನ್ನು ಇಟ್ಟುಕೊಂಡು ಆರತಿ ಮಾಡುವುದಕ್ಕೆ ಬಳಸುವ ಸಾಧನ. ಇದು ಸುಮಾರು ಇಪ್ಪತ್ತು ಇಂಚು ಉದ್ದವಿದ್ದು, ಸುಮಾರು ಹತ್ತು ಇಂಚು ವ್ಯಾಸವಿದೆ. ತಟ್ಟೆಯು ಹೂವಿನ ಚಿತ್ತಾರದಿಂದ ಕೂಡಿದ್ದು, ಹಿಡಿಯಲು ಹಿಡಿಕೆಯನ್ನು ಹೊಂದಿದೆ. ಸುಮಾರು ಇಪ್ಪತ್ತನೇ ಶತಮಾನದ ಪೂರ್ವಾರ್ಧಕ್ಕೆ ಸೇರಿದೆ. ಹಿತ್ತಾಳೆಯಿಂದ ತಯಾರಿಸಲಾಗಿದೆ. ಆರತಿ ತಟ್ಟೆಯಲ್ಲಿ ಕರ್ಪೂರ ಹಚ್ಚಿ ದೇವರಿಗೆ ಮಂಗಳಾರತಿ ಮಾಡಲೂ ಬಳಸುತ್ತಾರೆ. ವಿವಿಧ ಆಕಾರದ ಆರತಿ ತಟ್ಟೆಗಳು ಇವೆ.

ಅಲಂಕಾರ

ದೈವದತ್ತ ಸೊಬಗನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಜನಪದ ಮನಸ್ಸು ಎಂದೂ ಹಿಂದೆ ಬಿದ್ದಿಲ್ಲ. ತನ್ನನ್ನು, ತನ್ನ ಪರಿವಾರವನ್ನು, ತನಗೆ ಇಷ್ಟವಾದ ಪ್ರಾಣಿಪಕ್ಷಿಗಳನ್ನು ಶೃಂಗರಿಸಿಕೊಳ್ಳುವ ; ತಾನು ಇರುವ ಮನೆ, ಬೀದಿ, ಊರು, ದೈವದೇವತೆಗಳ ಮೂರ್ತಿಗಳು, ಗುಡಿ– ಆಲಯಗಳನ್ನು ಅಂದಗೊಳಿಸುವ ಕೆಲಸದಲ್ಲಿ ಜನಪದ ಚಿತ್ತ ಸದಾ ಅನುರಕ್ತ. ಹಾಗೆ ಅಲಂಕಾರ ಮಾಡುವ ಕೆಲವು ಸಾಮಗ್ರಿಗಳನ್ನು ಈ ವಿಭಾಗದಲ್ಲಿ ಪರಿಚಯಿಸುತ್ತಿದ್ದೇವೆ. ಲಂಬಾಣಿಗರಂಥ ಕೆಲವು ವಿಶಿಷ್ಟ ಸಮುದಾಯಗಳ ವೇಷಭೂಷಣಗಳು ಇಲ್ಲಿ ಪ್ರಾತಿನಿಧಿಕವಾಗಿ ಸೇರ್ಪಡೆಯಾಗಿವೆ. ಗೃಹಾಲಂಕಾರ ಮಾಡುವ ಕೆಲವು ವಸ್ತುಗಳನ್ನು, ಅಂತೆಯೇ ಆಯ್ದಿದೆ. ಗ್ರಾಮೀಣರಲ್ಲೂ ವಿಸ್ಮಯಕಾರಿಯಾಗಿ ನಿರ್ಮಾಣ ಪ್ರತಿಭೆ ಪ್ರಕಟಗೊಳ್ಳುವುದನ್ನು ಸಾಬೀತುಪಡಿಸುವ ವಸ್ತುಗಳೂ ಇಲ್ಲಿವೆ. ರೈತರಿಗೆ ತುಂಬ ಆಪ್ತವಾದ ಎತ್ತುಗಳನ್ನು ಶೃಂಗರಿಸುವ ಕೆಲವು ವಸ್ತುಗಳ ಪರಿಚಯ ಮಾಡಿದೆ. ಜನಪದರ ಸೌಂದರ್ಯ ಪ್ರಜ್ಞೆಗೆ ಇವೂ ಸ್ವಲ್ಪಮಟ್ಟಿಗೆ ದ್ಯೋತಕವಾಗಿವೆ ಎಂಬುದು ನಮ್ಮ ಅಭಿಮತ.

ಅಂಗೂಟ



ಲಂಬಾಣಿಗರು ಉಂಗುರವನ್ನೆ ತಮ್ಮ ಭಾಷೆಯಲ್ಲಿ 'ಅಂಗೂಟ' ಎನ್ನುತ್ತಾರೆ. ಇದನ್ನು ಲಂಬಾಣಿ ಸ್ತ್ರೀಯರು ತಮ್ಮ ಎಡಗೈಯ ಮಧ್ಯ ಬೆರಳಿಗೆ ತೊಡುತ್ತಾರೆ. ಗೌರಿ ಹುಣ್ಣಿಮೆಯಲ್ಲಿ ಇವರು ಮಾಡುವ ಸಾಂಪ್ರದಾಯಿಕ ನೃತ್ಯದಲ್ಲಿ ಇದನ್ನು ವಿಶೇಷವಾಗಿ ಧರಿಸುವ ಸಂಪ್ರದಾಯವಿದೆ. ಅಂಗೂಟ ಆಲಂಕಾರಿಕವಾಗಿ ನಿರ್ಮಿತವಾಗಿದೆ. ಅಂಗೂಟದಲ್ಲಿ 'ಉಂಗುರ' ಭಾಗವು ಮೇಲ್ಭಾಗದಲ್ಲಿ ಬೆರಳಿನ ಉದ್ದಕ್ಕೂ ಚಾಚಿ ಅಲ್ಲಿ ಮೂರು ಪುಟ್ಟ 'ಕಳಸ' ಗಳ ಆಕಾರಗಳನ್ನು ಒಳಗೊಂಡಿರುತ್ತದೆ. ಈ ಚಾಚು ಸುಮಾರು ಎರಡು ಇಂಚು ಉದ್ದವಿರುತ್ತದೆ. ಅಂಗೂಟವನ್ನು ಸೀಮೆಬೆಳ್ಳಿ/ಬೆಟ್ಟೆಬೆಳ್ಳಿಯಿಂದ ತಯಾರಿಸಲಾಗುತ್ತದೆ. ಇದರ ಬಳಕೆ ಇತ್ತೀಚಿಗೆ ಕಡಿಮೆಯಾಗುತ್ತ ಬರುತ್ತಿದೆ.



ಕನ್ನಡಿ ಪೆಟ್ಟಿಗೆ



ಮನೆಗಳಲ್ಲಿ ಅಲಂಕಾರಕ್ಕಾಗಿ ಬಳಸುತ್ತಿದ್ದ ವಿಶೇಷ ವಸ್ತು/ಸಾಧನ. ಸಾಮಾನ್ಯವಾಗಿ ಒಂದರಿಂದ ಒಂದೂವರೆ ಅಡಿ ಅಗಲ, ಎರಡರಿಂದ ಎರಡೂವರೆ ಅಡಿ ಎತ್ತರದಲ್ಲಿರುತ್ತದೆ. ಹಗುರವಾದ ಮರದಿಂದ ತಯಾರಿಸಿದ ಈ ಪೆಟ್ಟಿಗೆಗೆ ಕನ್ನಡಿ ಗಾಜನ್ನು ಅಳವಡಿಸಿದ್ದಾರೆ. ಕೆಳಭಾಗದಲ್ಲಿ ಒಂದು ಪೆಟ್ಟಿಗೆಯನ್ನು ತಯಾರಿಸಿ ಅದರಲ್ಲಿ ಕುಂಕುಮ, ತಲೆಗೆ ಹಾಕುವ ಎಣ್ಣೆ, ಬಾಚಣಿಗೆ, ಸುಗಂಧ ದ್ರವ್ಯಗಳು ಮುಂತಾದವನ್ನು ಇಟ್ಟಿರುತ್ತಾರೆ. ತಲೆಬಾಚಿಕೊಳ್ಳಲು ಕೂಡ ಬಳಕೆಯಾಗುತ್ತದೆ. ಹೆಣ್ಣುಮಕ್ಕಳು ಅಲಂಕಾರ ಮಾಡಿಕೊಳ್ಳಲು ಈ ಕನ್ನಡಿ ಪಟ್ಟಿಗೆಯನ್ನು ಉಪಯೋಗಿಸುತ್ತಾರೆ.



ಕಾಡುಕೋಣದ ಕೋಡು



ಮನೆಯ ಅಲಂಕಾರಕ್ಕಾಗಿ ಬಳಸುವ ಕಾಡುಕೋಣದ ಕೊಂಬುಗಳು. ಮರ ಅಥವಾ ಮಣ್ಣಿನಿಂದ ತಯಾರಿಸಿಕೊಂಡ ಕಾಡುಕೋಣದ ಮುಖಕ್ಕೆ ಈ ಕಾಡುಕೋಣದ ಕೊಂಬುಗಳನ್ನು ಜೋಡಿಸಿಕೊಂಡು ಅಲಂಕಾರಕ್ಕಾಗಿ ಬಳಸುತ್ತಾರೆ. ಮನೆಯ ಒಳಗಿನ ಪಡಸಾಲೆ, ಅಂಗಳದ ಅಗಲವಾದ ಗೋಡೆಗೆ ಇದನ್ನು ಹಾಕುವುದು ಹೆಚ್ಚು. ಕಾಡುಪ್ರಾಣಿಗಳನ್ನು ಬೇಟೆಯಾಡಿದ ವೀರತನದ ಸಾಂಕೇತಿಕದ ಪ್ರತೀಕವಾಗಿ ಇದನ್ನು ಬಳಸುತ್ತಾರೆ. ಇತ್ತೀಚೆಗೆ ಕಾಡುಪ್ರಾಣಿಗಳ ಬೇಟೆ ನಿಷೇಧವಾಗಿರುವ ಕಾರಣ ಇಂತಹ ಕೊಂಬುಗಳ ಬಳಕೆ ಅಪೂರ್ವವಾಗಿದೆ.

ಕುಲಾವಿ/ಕುಲಾಯಿ

ಸಣ್ಣಮಕ್ಕಳಿಗೆ ತಲೆಗೆ ಕಟ್ಟಲು ಉಪಯೋಗವಾಗುವ ಬಟ್ಟೆಯ ಟೋಪಿ. ಚಿಕ್ಕಮಕ್ಕಳಿಗೆ ಇದನ್ನು ಕಟ್ಟುವುದರಿಂದ ಧೂಳು, ಬಿಸಿಲು, ಶೀತಬಾಧೆಯನ್ನು ತಡೆಯುವುದು ಇದರ ಮುಖ್ಯ ಉದ್ದೇಶ. ಇದು ಪುಟ್ಟಮಕ್ಕಳಿಗೆ ಅಲಂಕಾರ ಸಾಧನವೂ ಹೌದು. ತಲೆಯ ಮೇಲ್ಭಾಗ ಮತ್ತು ಹಿಂಭಾಗವು



ಆವೃತವಾಗುವಷ್ಟು ಗಾತ್ರದಲ್ಲಿ ಇದನ್ನು ರಚಿಸಿಕೊಂಡು ಕಿವಿಯ ಇಕ್ಕೆಲಗಳಿಂದಲೂ ಕೆಳಗಿಳಿಸಿ ಗಲ್ಲದ ಕೆಳಭಾಗದಲ್ಲಿ ಇದನ್ನು ಎರಡು ಕಸೆಗಳಿಂದ ಕಟ್ಟುತ್ತಾರೆ. ಇದು ವರ್ಣಮಯವಾಗಿರುತ್ತದೆ. ಇದರ ಮೇಲ್ಭಾಗ ಮತ್ತು ಅಂಚುಗಳುದ್ದಕ್ಕೂ ಪುಟ್ಟ ಪುಟ್ಟ ಕುಂಚಿಕೆಗಳನ್ನು ಹೆಣೆಯುತ್ತಾರೆ. ಇದು ಕೇವಲ ಅಲಂಕಾರದ ಉದ್ದೇಶವುಳ್ಳವು. ಮೃದುವಾದ ಹತ್ತಿ ಬಟ್ಟೆ ಅಥವಾ ಮೃದುವಾದ ಉಣ್ಣೆಬಟ್ಟೆಯಿಂದ ತಯಾರಿಸಿಕೊಳ್ಳುತ್ತಾರೆ.




ಹಸುಗೂಸಿಗೆ ತಾಯಿಯ ಕಡೆಯಿಂದ ಮೊದಲು ಕುಲಾವಿಯನ್ನು ಹೊಲಿಸಿಕೊಡಿಸುವ ಸಂಪ್ರದಾಯವಿದೆ. ಬೇರೆ ಬೇರೆ ತೆರನ ವಿನ್ಯಾಸದ ಮತ್ತು ಗುಣಮಟ್ಟದ ಸಿದ್ಧಟೊಪ್ಪಿಗೆಗಳು ಮಾರುಕಟ್ಟೆಗೆ ಬಂದಿರುವುದರಿಂದ ಹಳೆಯ ರೀತಿಯ ಕುಲಾವಿಗಳು ವಿರಳವಾಗುತ್ತಿವೆ. ಕುಲಾವಿಯ ಪ್ರತಿ ನೆಯ್ಗೆಯಲ್ಲೂ ವಾತ್ಸಲ್ಯವು ಅನಾವರಣಗೊಳ್ಳುತ್ತದೆ.

ಕೃಷ್ಣಚಕ್ರ



ಪೌರಾಣಿಕ ನಾಟಕದಲ್ಲಿ ಕೃಷ್ಣ/ವಿಷ್ಣು ಪಾತ್ರದಾರಿ ಬಳಸುವ ಒಂದು ಆಯುಧ. ಸುಮಾರು ಹನ್ನೆರಡು ಇಂಚು ಉದ್ದವಿದೆ. ಕೆಳಭಾಗದಲ್ಲಿ ಹಿಡಿಯಲು ಹಿಡಿಕೆಯಿದ್ದು ಮೇಲ್ಭಾಗ ಚಕ್ರಾಕಾರಹೊಂದಿದೆ. ಚಕ್ರವು ಸುಮಾರು ಆರೂವರೆ ಇಂಚು ವ್ಯಾಸವನ್ನು ಹೊಂದಿದೆ.

ಕೋಡಣಸು/ಕೊಡಂಚು





ಎತ್ತಿನ ಕೋಡುಗಳ ತುದಿಗೆ ಅಲಂಕಾರಕ್ಕಾಗಿ ಬಳಸುವ ಪುಟ್ಟ ಸಾಧನ. ಇವು ಕೊಳವೆಯ ಆಕಾರದಲ್ಲಿದ್ದು ಅದರ ತುದಿಯು ದುಂಡಾಕಾರ/ಪುಟ್ಟ ಕಳಸಾಕಾರದಲ್ಲಿರುತ್ತದೆ. ಕೋಡಣಸುಗಳ ಬುಡದಲ್ಲಿ ಎರಡು ಪುಟ್ಟ ರಂಧ್ರಗಳಿದ್ದು ಅವುಗಳ ಮೂಲಕ ಮೊಳೆ/ತಂತಿಗಳನ್ನು ಕೋಡಿನ ತುದಿಯಲ್ಲಿ ಕೊರೆದ ಪುಟ್ಟರಂಧ್ರದೊಳಗೂ ಬರುವಂತೆ ಹಾಯಿಸಿ ತಂತಿಯ ತುದಿಗಳನ್ನು ಒಳಕ್ಕೆ ಬಾಗಿಸಲಾಗುತ್ತದೆ. ಕೋಡಣಸುಗಳು ಸುಮಾರು ಎರಡರಿಂದ ಐದು ಇಂಚುಗಳಷ್ಟು ಉದ್ದವಿರುತ್ತವೆ. ಇವುಗಳ ಸುತ್ತಲೂ ಅಲಂಕಾರಕ್ಕಾಗಿ ಕಿರು ಪ್ರಮಾಣದ ಕುಸುರಿ ಕೆಲಸ ಮಾಡಿರುವುದೂ ಕಂಡುಬರುತ್ತದೆ.



ಕೋಡಣಸುಗಳನ್ನು ಎತ್ತುಗಳಿಗೆ ಸಾಮಾನ್ಯವಾಗಿ ನಿತ್ಯವೂ ತೊಡಿಸುತ್ತಾರೆ. ಕೆಲವೆಡೆ ಕಾರಹುಣ್ಣಿಮೆಯ ಹಬ್ಬದಂದು ಕರಿಹೋರಿಗೆ ಚಿನ್ನ ಬೆಳ್ಳಿಯ ಕೋಡಣಸುಗಳನ್ನು ತೊಡಿಸಿ ಬಂಗಾರದ ಗೆಜ್ಜೆಗಳಿಂದ ಅಲಂಕರಿಸುವ ಸಂಭ್ರಮೋಪೇತ ಆಚರಣೆ ನಡೆಯುತ್ತಿತ್ತು. ಹಬ್ಬ, ಮೆರವಣಿಗೆಗಳಂಥ ಸಂದರ್ಭಗಳಲ್ಲಿ ಎತ್ತುಗಳ ಕೊಂಬುಗಳ ತುದಿಗೆ ಕೋಡಣಸನ್ನು ಹಾಕಿ ಅವುಗಳ ತುದಿಗೆ ಉಣ್ಣೆಯ ಗೊಂಡೆಗಳನ್ನು ಕಟ್ಟಿ ಇನ್ನಷ್ಟು ಅಂದವಾಗಿ ಅಲಂಕಾರ ಮಾಡುತ್ತಾರೆ. ಕೋಡಣಸುಗಳನ್ನು ಅಲಂಕಾರಕ್ಕಾಗಿ ಮಾತ್ರ ಬಳಸದೆ ಎತ್ತುಗಳು ಪರಸ್ಪರ ಇರಿಯುವಾಗ, ಮನುಷ್ಯರಿಗೆ ಹಾಯುವಾಗ, ಹೆಚ್ಚಿನ ಅಪಾಯವನ್ನು ತಪ್ಪಿಸುವುದಕ್ಕಾಗಿಯೂ ಬಳಸಲಾಗುತ್ತದೆ. ಕೋಡಣಸುಗಳನ್ನು ಅಲ್ಯೂಮಿನಿಯಂ, ಕಂಚು/ಹಿತ್ತಾಳೆ, ಬೆಳ್ಳಿ, ಬಂಗಾರಗಳಿಂದ ಕೂಡ ತಯಾರಿಸುತ್ತಾರೆ. ಅಮೂಲ್ಯ ಲೋಹಗಳ ಕೋಡನಸುಗಳನ್ನು ಅಪೂರ್ವ ಸಂದರ್ಭಗಳಲ್ಲಷ್ಟೇ ಬಳಸುತ್ತಾರೆ.

ಗಣ್ಣೊ



ಲಂಬಾಣಿ ಮಹಿಳೆಯರು ಮದುವೆ ಸಂದರ್ಭದಲ್ಲಿ ಬಳಸುವ ವಸ್ತ್ರ. ಇದು ಚೌಕಾಕಾರದಿಂದ ಕೂಡಿದ್ದು ಎಂಟು ಇಂಚು ಉದ್ದ– ಅಗಲವಿದೆ. ಲಮಾಣಿ ಮಹಿಳೆ ಲಗ್ನವಾದ ನಂತರ ಗಂಡನ ಮನೆಗೆ ಬಂದಾಗ ನೀರು/ಗಂಗೆ ತರುವ ಆಚರಣೆಯಲ್ಲಿ ಕೊಡ ಹೊತ್ತು ತರುವಾಗ ತಲೆಯ ಮೇಲಿನ ಸಿಂಬೆಗೆ ಅಲಂಕಾರಯುತವಾಗಿ ನೇತಾಡಿಸುವುದಕ್ಕೆ ಬಳಸುವ ವಸ್ತ್ರ. ಇದನ್ನು ನಾನಾ ಬಣ್ಣದ ದಾರಗಳನ್ನು ಬಳಸಿ ಕಸೂತಿಹಾಕಿ ಸಮುದಾಯದ ಮಹಿಳೆಯರೇ ತಯಾರಿಸುತ್ತಾರೆ.



ಗಾಜಿನ ಸೀಸೆ



ಮನೆಗಳಲ್ಲಿ ಅಲಂಕಾರಕ್ಕಾಗಿ ಇಡಲು ಬಳಸುವ ಒಂದು ವಿಶೇಷ ಸಾಧನ. ಈ ಸೀಸೆಯು ಸುಮಾರು ಒಂದು ಅಡಿ ಎತ್ತರವಿದೆ. ಸುಮಾರು ಮೂರು ಇಂಚು ಅಗಲವಿದೆ. ಇದರ ಕಂಠವು ಸುಮಾರು ಎರಡು ಇಂಚು ಎತ್ತರವಿದ್ದು ಸುಮಾರು ಒಂದು ಇಂಚು ವ್ಯಾಸವಿದೆ. ಇದರ ಮೇಲ್ಭಾಗದಲ್ಲಿ ಗೋಡೆಗೆ ನೇತುಹಾಕಲು ಒಂದು ಕಬ್ಬಿಣದ ಕೊಂಡಿ ಇದೆ. ವಿಶೇಷವೆಂದರೆ ಈ ಸೀಸೆಯ ಒಳಗಡೆ ಮುತ್ತು ಮಣಿಗಳು, ಉಲ್ಲನ್ ದಾರ ಮತ್ತು ಪ್ಲಾಸ್ಟಿಕ್‌ನಿಂದ ಹೆಣೆದ ನಾಲ್ಕು ಕಂಬಗಳಿದ್ದು ಮಂಚದ ಆಕೃತಿಯಲ್ಲಿದೆ. ಮಂಚದ ಮೇಲೆ ತಾಯಿ ಮತ್ತು ಮಗು ಮಲಗಿರುವ ಗೊಂಬೆಗಳಿವೆ. ಇಳಿಬಿಟ್ಟಿರುವ ಬಲ್ಬಿನಂತೆ ಇರುವ ಒಂದು ದೊಡ್ಡ ಮುತ್ತನ್ನು ನೇತುಹಾಕಲಾಗಿದೆ. ಒಟ್ಟಾರೆ ಅಲಂಕಾರದ ಸೀಸೆಯು ನೋಡಲು ತುಂಬಾ ಚೆನ್ನಾಗಿದೆ ಮತ್ತು ವಿಸ್ಮಯಕಾರಿಯಾಗಿದೆ. ಇದನ್ನು ಮನೆಯ ಗೋಡೆ ಅಥವಾ ಬೆಂಚಿನ ಮೇಲೆ ಇಡುವ ಕ್ರಮವು ರೂಢಿಯಲ್ಲಿದೆ. ಆಲಂಕಾರಿಕ ಗಾಜಿನ ಸೀಸೆಗಳಲ್ಲಿ ವಿವಿಧ ಬಗೆಗಳಿರುತ್ತವೆ. ಇವುಗಳನ್ನು ಕುಶಲತೆಯಿಂದ ಹೆಣೆದಿದ್ದಾರೆ.



ಗುಂಗ್ರೋ



ಲಂಬಾಣಿ ಮಹಿಳೆಯರು ತಮ್ಮ ತಲೆ/ಹಣೆಯಲ್ಲಿ ಅಲಂಕಾರಕ್ಕೆ ಬಳಸುವ ಆಭರಣ. ಇದು ಸುಮಾರು ಇಪ್ಪತ್ತೇಳು ಇಂಚು ಉದ್ದ, ಎರಡು ಇಂಚು ಅಗಲದ ರಚನೆ. ಇದರ ತುದಿಗಳು ಹಾಗೂ ಮಧ್ಯಭಾಗದಲ್ಲಿ ರಿಬ್ಬನ್ನಿನ ಹೂಗಳನ್ನು ಜೋಡಿಸಲಾಗುತ್ತದೆ. ನಡುಪಟ್ಟಿಯ ಮೇಲೆ ಕನ್ನಡಿಯನ್ನು ಲಗತ್ತಿಸಿದ ಕೈವಸ್ತ್ರದ ಪಟ್ಟಿಗಳಿರುತ್ತವೆ. ಇದನ್ನು ಸೀರೆಯ ಸೆರಗಿಗೆ ಜೋಡಿಸಲಾಗಿದೆ. ಲಂಬಾಣಿ ಸಮುದಾಯದ ಮಹಿಳೆಯರು ಹಬ್ಬ ಹರಿದಿನಗಳಲ್ಲಿ ಗುಂಗ್ರೋ ಸಹಿತವಾದ ಉಡುಪನ್ನು ಧರಿಸುತ್ತಾರೆ. ಇದನ್ನು ಸ್ವತಃ ಅದೇ ಸಮುದಾಯದ ಹೆಣ್ಣುಮಕ್ಕಳು ವಿವಿಧ ಬಣ್ಣದ ಬಟ್ಟೆ, ದಾರ, ಕನ್ನಡಿ ಚೂರುಗಳನ್ನು ಅಳವಡಿಸಿಕೊಂಡು ಹೆಣೆದು ತಯಾರಿಸುತ್ತಾರೆ.



ಚಟಿಗೆ / ಕಾಲುಂಗುರ



ಲಂಬಾಣಿ ಮಹಿಳೆಯರು ಕಾಲಿನ ಬೆರಳಿಗೆ ಧರಿಸುವ/ಹಾಕಿಕೊಳ್ಳುವ ಉಂಗುರ. ಲಂಬಾಣಿಗರು ತಮ್ಮ ಭಾಷೆಯಲ್ಲಿ 'ಚಟಿಗೆ' ಎಂದು ಕರೆಯುತ್ತಾರೆ. ಇದನ್ನು ಮದುವೆ ಸಂದರ್ಭದಲ್ಲಿ ಗಂಡನ ಮನೆಯವರು ಮದುಮಗಳ ಕಾಲಿಗೆ ಹಾಕುವ ಸಂಪ್ರದಾಯವಿದೆ.



ಬೆರಳಿಗೆ ತಕ್ಕಂತೆ ವಿವಿಧ ಗಾತ್ರ ಮತ್ತು ವಿನ್ಯಾಸದ ಕಾಲುಂಗುರಗಳಿವೆ. ಇದನ್ನು ಧರಿಸುವುದು ಮುತ್ತೈದೆತನದ ಸಂಕೇತವಾಗಿದೆ. ಸಿಲ್ವರ್, ಕಾಡುಬೆಳ್ಳಿ ಮುಂತಾದ ಲೋಹಗಳಿಂದ ತಯಾರಿಸುತ್ತಾರೆ. ಗಂಡ ಸತ್ತವರು ಕಾಲುಂಗುರವನ್ನು ತೊಡಬಾರದೆಂಬ ನಿಷೇಧವು ಇವರಲ್ಲಿದೆ.

ಚಿರತೆಯ ಮುಖ



ಮನೆಯ ಅಲಂಕಾರಕ್ಕೆ ಬಳಸಿದ ಒಂದು ವಿಶೇಷ ಪರಿಕರ. ಬೇಟೆಗಾರಿಕೆಯಲ್ಲಿ ದೊರೆತ ಚಿರತೆಯ ಮುಖವನ್ನು ರಕ್ಷಿಸಿ ಸುಮಾರು ಒಂದುವರೆ ಅಡಿ ಎತ್ತರ, ಒಂದು ಅಡಿ ಅಗಲದ ಮರದ ಹಲಗೆಯ ತುಂಡಿಗೆ ಅಳವಡಿಸಲಾಗಿದೆ. ಹಿಂದೆ ದೊಡ್ಡ ದೊಡ್ಡ ಶ್ರೀಮಂತ ಮನೆತನಗಳಲ್ಲಿ ಇಂಥ ವಸ್ತುಗಳನ್ನು ಅಲಂಕಾರಕ್ಕಾಗಿ ಮತ್ತು ಪ್ರತಿಷ್ಠೆಗಾಗಿ ಬಳಸಿಕೊಳ್ಳುತ್ತಿದ್ದರು. ಇದು ಸುಮಾರು ಇಪ್ಪತ್ತನೇ ಶತಮಾನದ ಪೂರ್ವಾರ್ಧದ್ದಾಗಿದೆ ಎಂದು ವಕ್ತೃಗಳು ಹೇಳುತ್ತಾರೆ.



ಜರಿ ಪಟಗ



ಹಬ್ಬ, ಜಾತ್ರೆ, ಮದುವೆ ಮುಂತಾದ ಶುಭಸಂದರ್ಭಗಳಲ್ಲಿ ಪುರುಷರು ತಲೆಗೆ ಸುತ್ತಿಕೊಳ್ಳಲು ಬಳಸುವ ವಸ್ತ್ರ. ಈ ಪಟಗವನ್ನು ಮನೆಯ ಹಿರಿಯ ಗ್ರಾಮದ ಮುಖಂಡರು ಸುತ್ತಿಕೊಳ್ಳುವ ಕ್ರಮ ಹೆಚ್ಚು ರೂಢಿಯಲ್ಲಿತ್ತು. ಇದು ಪ್ರತಿಷ್ಠೆಯ ಸಂಕೇತವಾಗಿಯೂ ಬಳಕೆಯಾಗುತ್ತಿತ್ತು. ಇದು ಸುಮಾರು ಎರಡು ಮೀಟರ್ ಉದ್ದ ಒಂದೂವರೆ ಮೀಟರ್

ಅಗಲವಿದ್ದು, ಆಯತಾಕಾರದಲ್ಲಿರುತ್ತದೆ. ಇದನ್ನು ರೇಷ್ಮೆ ನೂಲಿನಿಂದ ತಯಾರಿಸುತ್ತಾರೆ. ಜನರು ತಮ್ಮ ಆರ್ಥಿಕತೆಗನುಗುಣವಾಗಿ ವಿವಿಧ ರೀತಿಯ ರುಮಾಲುಗಳನ್ನು ಬಳಸುತ್ತಾರೆ. ಈ ಪಟಗವನ್ನು ನೇಕಾರರು ಹೆಣೆಯುತ್ತಾರೆ.

ದಿಕಾಂಬ್ಲಿ ಬೀಜ



ಎತ್ತು ಮತ್ತು ಎಮ್ಮೆಗಳಿಗೆ ದೃಷ್ಟಿಯಾಗದಂತೆ ಕೊರಳಿಗೆ ಕಟ್ಟುವ ಒಂದು ಸಾಧನ. 'ದಿಕಾಂಬ್ಲಿ' ಎನ್ನುವುದು ಲಂಬಾಣಿಗರ ಭಾಷೆ. ಇದು ಸು. ಎರಡು ಇಂಚು ವ್ಯಾಸವಿರುವ ಬೀಜ. ಕಂದು ಬಣ್ಣದ್ದಾಗಿದ್ದು ನಯವಾಗಿ ಚಪ್ಪಟೆಯಾಗಿದೆ. ಸಾಮಾನ್ಯವಾಗಿ ಆಕಳು ಮತ್ತು ಎಮ್ಮೆಗಳು ಗರ್ಭಧರಿಸಿದಾಗ ಪೀಡೆ, ಪಿಶಾಚಿಗಳ ಕೆಟ್ಟ ದೃಷ್ಟಿ ಬೀಳಬಾರದೆಂಬ ಕಾರಣಕ್ಕೆ ಜಾನುವಾರುಗಳ ಕೊರಳಿಗೆ ಕಟ್ಟುತ್ತಾರೆ. ಇದರಿಂದ ಪೀಡೆ ಪಿಶಾಚಿಗಳ ಕಾಟ ಬರುವುದಿಲ್ಲ ಎನ್ನುವುದು ಲಂಬಾಣಿಗರ ನಂಬಿಕೆ.

ಬಲಿಯಾ



ಲಂಬಾಣಿಗರ ಭಾಷೆಯಲ್ಲಿ ಬಲಿಯಾ ಎಂದರೆ ತೋಳಬಂದಿ ಎಂದರ್ಥ. ಲಂಬಾಣಿ ಮಹಿಳೆಯರು ತಮ್ಮ ತೋಳುಗಳಲ್ಲಿ ಇವನ್ನು ಧರಿಸುತ್ತಾರೆ. ಒಂದೊಂದು ತೋಳಿಗೆ ಎರಡೆರಡು ಬಳೆಗಳೆಂಬುದು ಲೆಕ್ಕ. ಈ ಬಳೆಗಳನ್ನು ತೊಡುವುದು ಅಲಂಕಾರಕ್ಕಾಗಿ ಎಂದು ಮೇಲು ನೋಟಕ್ಕೆ ಅನಿಸಿದರೂ ಇದು ಅವರ ಸಾಮಾಜಿಕ, ಧಾರ್ಮಿಕ ಕಟ್ಟು ಕಟ್ಟಳೆಯಂತೆ ತೋಳಲ್ಲಿ ಧರಿಸಲ್ಪಡುತ್ತದೆ. ಇವು ಇತರರ ತಾಳಿಗೆ/ಮಂಗಲಸೂತ್ರಕ್ಕೆ ಸಮಾನವಾದ ಸಂಕಲ್ಪದಿಂದ ಕೂಡಿದವು. ಮದುವೆಯಾದ ದಿನದಂದು ಗಂಡನ ಮನೆಯವರು ಕೊಡುವ ಇಂಥ ಐದು ಬಳೆಗಳಲ್ಲಿ ನಾಲ್ಕನ್ನು ವಿವಾಹಿತೆ ಧರಿಸಿದರೆ ಉಳಿದ ಒಂದನ್ನು ಅವಳ ತಾಯಿಗೆ ಕೊಡುವ ಸಂಪ್ರದಾಯವಿದೆ. ತಾಯಿಗೆ ಈ ಬಳೆಯು ಮಗಳನ್ನು ಕೊಟ್ಟುದಕ್ಕೆ ಪ್ರತಿಯಾಗಿ ನೀಡುವ ಕಾಣಿಕೆಯಾಗಿರುತ್ತದೆ. ತೋಳಿಗೆ ಈ ಬಳೆಯನ್ನು ಧರಿಸುವುದೆಂದರೆ ಗಂಡನೇ ತಾಳಿಕಟ್ಟಿದ್ದಕ್ಕೆ ಸಮಾನವಾಗುತ್ತದೆ. ಗಂಡ ಜೀವಂತವಿರುವ ತನಕ ಇದನ್ನು ತೆಗೆದು ಹಾಕುವಂತಿಲ್ಲ. ಗಂಡನು ಸತ್ತಾಗ ಕೆಲವರು ಈ ಬಳೆಗಳನ್ನು ಪತಿಯ ಚಿತೆಗೆ ಹಾಕುವ ರೂಢಿ ಇತ್ತು. ಈಗ ಅಂಥ ಆಚರಣೆ ಕಡಿಮೆಯಾಗಿದೆ.



ಬಲಿಯಾಗಳನ್ನು ಫೈಬರ್ ಅಥವಾ ರಬ್ಬರ್‌ನಿಂದ ತಯಾರಿಸುತ್ತಾರೆ. ಬಳೆಯ ಒಂದು ಭಾಗವನ್ನು ತುಂಡರಿಸಿರುವ ಕಾರಣ ತೋಳುಗಳಲ್ಲಿ ಅದನ್ನು ಧರಿಸಲು ಸುಲಭವಾಗುತ್ತದೆ. ಲಂಬಾಣಿ ಸಮುದಾಯವು ವಿವಾಹಗಳಲ್ಲಿ ಸರಗಳನ್ನು ಬಳಸಲು ತೊಡಗಿದ ಬಳಿಕ ಬಲಿಯಾದ ಪ್ರಾಧಾನ್ಯ ಮತ್ತು ಅಗತ್ಯ ಕಡಿಮೆಯಾಗುತ್ತ ಬರುತ್ತಿದೆ. ಲಂಬಾಣಿ ಸ್ತ್ರೀಯರು ಪಾರಂಪರಿಕ ಉಡುಗೆಗಳನ್ನು ಬಿಟ್ಟು ಸೀರೆ/ಸೆಲ್ವಾರ್ ಕಮೀಜ್ ಧರಿಸಲಾರಂಭಿಸಿದ ಬಳಿಕ ಬಲಿಯಾ ಅವರಿಗೆ ಆಕರ್ಷಕ ಸಾಧನವಾಗುವಲ್ಲಿ ವಿಫಲವಾಗಿದೆ.

ದೃಷ್ಟಿಗೊಂಬೆ



ಹೊಸ ಮನೆಗೆ ದೃಷ್ಟಿತಾಗದಂತೆ ಹಾಗೂ ಅಲಂಕಾರಕ್ಕಾಗಿ ಬಳಸುವಂತಹ ಬಿದಿರಿನ ವಸ್ತು. ಇದು ಸುಮಾರು ಮುಕ್ಕಾಲು ಅಡಿ ಉದ್ದವಿರುತ್ತದೆ. ಇದರ ಮೈಮೇಲೆಲ್ಲಾ ಚಿಕ್ಕ ಚಿಕ್ಕ ಚುಕ್ಕೆಗಳ ಆಕಾರದಿಂದ ಕೂಡಿದ್ದು (ಇವು ಬೇರುಗಳನ್ನು ಕತ್ತರಿಸಿದ ಬುಡ)ಬಿದಿರಿನ ಗಡ್ಡೆಯಿಂದ ನಿರ್ಮಿತವಾಗಿದೆ. ಇದನ್ನು ಮನೆಯ ಮುಂಭಾಗದಲ್ಲಿ ಜೋತಾಡಿಸಿ ಕಣ್ಣಿಗೆ ಕಾಣುವಂತೆ ಕಟ್ಟಿರುತ್ತಾರೆ. ಕಟ್ಟಿರುವ ಮನೆಗೆ ದೃಷ್ಟಿ ತಗಲಬಾರದು ಎಂಬ ನಂಬಿಕೆಯಿಂದ ಇದನ್ನು ಕಟ್ಟುತ್ತಾರೆ. ಅಲ್ಲದೆ ರಾತ್ರಿ ಸಂದರ್ಭದಲ್ಲಿ ಪ್ರಾಣಿ ಪಕ್ಷಿಗಳು ಮನೆಯೊಳಗೆ ನುಸುಳಬಾರದು ಎನ್ನುವ ಕಾರಣಕ್ಕೂ ಈ ಗೊಂಬೆಯನ್ನು ಕಟ್ಟುತ್ತಾರೆ.

ಮರದ ಸರಪಳಿ



ಮರದಿಂದ ತಯಾರಿಸಿದ ಸರಪಳಿ. ಇದನ್ನು ಅಲಂಕಾರಕ್ಕಾಗಿ ಬಳಸಲಾಗುತ್ತದೆ. ಒಂದೇ ಮರದ ತುಂಡಿನಿಂದ ಕೊರೆದು ಸುಂದರವಾದ ಈ ಸರಪಳಿ ನಿರ್ಮಿಸಲಾಗಿದೆ. ಇದು ಕಲಾವಿದನ ಉತ್ತಮ ಕಲಾ ಕೌಶಲ್ಯಕ್ಕೆ ಸಾಕ್ಷಿಯೆನಿಸಿದೆ. ಮರದ ತುಂಡು ಎಲ್ಲೂ ಒಡೆಯದಂತೆ ಒಂದರೊಳಗೆ ಮತ್ತೊಂದು ಬಳೆಯನ್ನು ಜೋಡಿಸಿ ಒಂದು ಅಡಿಯಷ್ಟು ಉದ್ದದ ಈ ಸರಪಳಿಯನ್ನು ನಿರ್ಮಿಸಲಾಗಿದೆ. ಇದರ ಒಂದು ತುದಿಯಲ್ಲಿ ಚೌಕಾಕಾರದ ಬೀಗವಿರುವಂತೆ ಕೆತ್ತಲಾಗಿದೆ. ಬಡಗಿಗಳು ಹವ್ಯಾಸಕ್ಕಾಗಿಯೂ ಇಂತಹವುಗಳನ್ನು ಅಪರೂಪವಾಗಿ ನಿರ್ಮಿಸುತ್ತಿದ್ದರು

ಎನ್ನಲಾಗಿದೆ. ಈ ಸರಪಳಿಯಲ್ಲಿ ಎಲ್ಲಿಯೂ ಕೊಂಡಿಗಳು ಜೋಡಣೆಯಾಗದೆ ತಾಳ್ಮೆಯಿಂದ ಅವುಗಳನ್ನು ಕೊರೆದೇ ತಯಾರಿಸಿದ ಜಾಣ್ಮೆಯು ದಂಗುಬಡಿಸುವಂಥದ್ದು.

ಮುತ್ತಿನಸರ



ಅಲಂಕಾರಕ್ಕಾಗಿ ಗೊಂಬೆಗೆ ಹಾಕುವ ಮುತ್ತಿನ ಸರ. ಇದನ್ನು ಬಣ್ಣ ಬಣ್ಣದ ಮುತ್ತಿನ ಮಣಿಗಳಿಂದ ಹೆಣೆದಿದ್ದಾರೆ. ದೊಡ್ಡ ಮತ್ತು ಚಿಕ್ಕ ಮುತ್ತಿನ ಮಣಿಗಳನ್ನು ಪ್ಲಾಸ್ಟಿಕ್ ದಾರಕ್ಕೆ ಪೋಣಿಸಲಾಗಿದೆ. ಮನೆಯ ಗೋಡೆಯ ಮೇಲೆ ಅಥವಾ ಷೋಕೇಸ್‌ನಲ್ಲಿ ಅಲಂಕಾರಕ್ಕಾಗಿ ಹಾಕುವ ಕ್ರಮವೂ ರೂಢಿಯಲ್ಲಿದೆ ಅಲ್ಲದೆ ಮನೆಯ ಅಲಂಕಾರವನ್ನು ಹೆಚ್ಚಿಸಲು ಅಪರೂಪವಾಗಿ ಬಳಕೆಯಾಗುತ್ತಿದೆ.

ಸಾರಂಗದ ಕೊಂಬು



ಮನೆಯ ಮುಂದೆ ಅಲಂಕಾರಕ್ಕಾಗಿ ಬಾಗಿಲ ಮೇಲ್ಭಾಗದಲ್ಲಿ ಮರದ ಸಾರಂಗದ ಮುಖವಾಡಕ್ಕೆ ಈ ಕೊಂಬನ್ನು ಜೋಡಿಸಿ ಇಡುತ್ತಾರೆ. ಇದರಲ್ಲಿ ಗಟ್ಟಿಮುಟ್ಟಾದ ವಸ್ತುಗಳನ್ನು ನೇತು ಹಾಕಲೂ ಬಳಸುತ್ತಾರೆ. ಈ ಕೊಂಬುಗಳ ಹೆಚ್ಚಿನ ಭಾಗವೂ ಟೊಳ್ಳಾಗಿರುತ್ತದೆ. ತಳಭಾಗದ ದಪ್ಪ ಸುಮಾರು ಒಂದೂವರೆ ಇಂಚಿನಷ್ಟಿದ್ದರೆ ತುದಿಯ ಕಡೆಗೆ ಸಾಗುತ್ತ ಗಾತ್ರ ಕಡಿಮೆಯಾಗಿ ತುದಿಯು ಚೂಪಾಗಿರುತ್ತದೆ. ನೇರವಾಗಿರದೆ ವಕ್ರ ವಕ್ರವಾಗಿರುವ ಈ ಕೊಂಬಿನ ಮೇಲೆ ಬಳೆಯಾಕಾರದ ಗೆರೆಗಳಿರುತ್ತವೆ. ಇದು ಸಾರಂಗದ ಕೊಂಬಾಗಿದ್ದು ಹಿಂದೆ ಯಾವುದೋ ಸಂದರ್ಭದಲ್ಲಿ ಅದು ಸತ್ತ ಬಳಿಕ ಅದನ್ನು ಸಂಗ್ರಹಿಸಲಾಗಿದೆ ಅಥವಾ ಬೇಟೆಯಾಡಿ ಅದನ್ನು ಸಂಗ್ರಹಿಸಬಹುದಾಗಿತ್ತು. ಇತ್ತೀಚಿಗೆ ಇದರ ಲಭ್ಯತೆ ಕಡಿಮೆಯಾಗಿದ್ದು ಬಳಕೆಯೂ ಕಡಿಮೆಯಾಗಿದೆ. ಹೀಗೆಯೇ ಕಾಡು ಕೋಣಗಳ ಕೊಂಬನ್ನೂ ಬಳಸಲಾಗುತ್ತದೆ.



ಸ್ವಾಗತ ಮೂರ್ತಿ



ಮನೆಯ ಮುಂಬಾಗಿಲ ಮೇಲ್ತುದಿಗೆ ಸಮಾನಾಂತರವಾಗಿ ಗೋಡೆಗಳಲ್ಲಿ ಅಲಂಕಾರಕ್ಕಾಗಿ ಹಾಕಲು ಬಳಸುವ ಮೂರ್ತಿ. ಇದು ಸುಮಾರು ಒಂದು ಅಡಿ ಉದ್ದವಿರುತ್ತದೆ. ಸುಮಾರು ಎಂಟು ಇಂಚು ಅಗಲವಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಅತಿಥಿಗಳಿಗೆ ಸ್ವಾಗತ ಕೋರಲು ಇವುಗಳನ್ನು ಹಾಕುತ್ತಾರೆ. ಈ ಸ್ವಾಗತಮೂರ್ತಿಯು ವಸ್ತ್ರಾಭರಣ ಭೂಷಿತಳಾಗಿರುವ ಒಬ್ಬ ಹೆಣ್ಣು ಕೈಮುಗಿದು ಅತಿಥಿಗಳಿಗೆ ಸ್ವಾಗತವನ್ನು ಕೋರುವಂತೆ ಕೆತ್ತಿರುತ್ತಾರೆ. ಈ ಸ್ವಾಗತ ಮೂರ್ತಿಯನ್ನು ಸಾಗುವಾನಿಯಂಥ ಮರಗಳಿಂದ ತಯಾರು ಮಾಡುತ್ತಾರೆ.

ಹಣೆಕಟ್ಟು



ಜನಪದರಿಗೆ ಎತ್ತುಗಳೆಂದರೆ ಪಂಚಪ್ರಾಣ. ಅವು ತಮ್ಮ ಕುಟುಂಬದ ಸದಸ್ಯರೆಂದೂ ಸುಖ ಸಂಪದಗಳ ಕಾರಣಕರ್ತರೆಂದೂ ಭಾವನೆ. ಅವನ್ನು ನಾನಾ ವಿಧ ಆರೈಕೆ ಮಾಡಿ, ಶೃಂಗರಿಸಿ ಆನಂದಿಸುವುದು ಅನೇಕರ ಹವ್ಯಾಸ. ಹಣೆಕಟ್ಟು ಅಂಥ ಒಂದು ಅಲಂಕಾರ ಸಾಧನ. ಇದು ಸುಮಾರು ಎಂಟರಿಂದ ಹತ್ತು ಇಂಚುಗಳಷ್ಟು ಉದ್ದ ಮತ್ತು ಸುಮಾರು ಆರರಿಂದ ಎಂಟು ಇಂಚುಗಳಷ್ಟು ಅಗಲವಿದ್ದು ಬೇರೆ ಬೇರೆ ಆಕಾರದಲ್ಲಿರುತ್ತವೆ. ಅರಳಿ ಎಲೆ, ವಜ್ರಾಕಾರ, ಅರ್ಧಚಂದ್ರ ಮುಂತಾದ ಆಕಾರದಲ್ಲಿ ಹಣೆಕಟ್ಟುಗಳನ್ನು ನಿರ್ಮಿಸುತ್ತಾರೆ. ಸರಳವಾದ ದಾರವೊಂದಕ್ಕೆ ಪದಕವನ್ನು ಜೋಡಿಸಿದಂತೆಯೂ ಇದು ಇರುತ್ತದೆ. ದಪ್ಪ ಬಟ್ಟೆಯ ಮೇಲೆ ಕನ್ನಡಿಯ ಚೂರು, ಬಣ್ಣಬಣ್ಣದ ಮಣಿಗಳು, ಮುತ್ತುಗಳು, ಕವಡೆ, ಚಿಪ್ಪುಗಳು, ಪುಟ್ಟ ಶಂಖಗಳು, ತೂತಿನ ಬಿಲ್ಲೆ, ನಾನಾ ಬಣ್ಣದ ದಾರಗಳು, ಕಿರುಗೆಜ್ಜೆ ಮುಂತಾದುವುಗಳನ್ನು ನಾನಾ ವಿನ್ಯಾಸಗಳಲ್ಲಿ ಪೋಣಿಸಿ ಹಣೆಕಟ್ಟನ್ನು ರಚಿಸುತ್ತಾರೆ. ಹೊರಂಚಿನ ಸುತ್ತ ಅಲ್ಲಲ್ಲಿ ಉಣ್ಣೆಯ ಗೊಂಡೆಗಳನ್ನು ಪೋಣಿಸಿ ಹಣೆಕಟ್ಟನ್ನು ಅಲಂಕರಿಸುತ್ತಾರೆ. ಹಣೆಕಟ್ಟನ್ನು ನಿತ್ಯಬಳಕೆ ಮಾಡುವುದಿಲ್ಲ. ಕಾರ ಹುಣ್ಣಿಮೆ, ಹಟ್ಟಿ ಹಬ್ಬ, ಮದುವೆ ದಿಬ್ಬಣ,

ಮೆರವಣಿಗೆ ಮುಂತಾದ ಸಂದರ್ಭಗಳಲ್ಲಿ ಹಣೆಕಟ್ಟು, ಕೋಡಣಸು ಮುಂತಾದವುಗಳಿಂದ ಎತ್ತುಗಳನ್ನು ಅಲಂಕರಿಸಲಾಗುತ್ತದೆ. ಕಾರ ಹುಣ್ಣಿಮೆ ಸಂದರ್ಭದಲ್ಲಿ ಕರಿಬಿಡುವುದು/ಹೋರಿ ಬೆದರಿಸುವುದು ಎಂಬ ಆಚರಣೆಯಲ್ಲಿ ಕೂಡ ಈ ರೀತಿ ಎತ್ತುಗಳನ್ನು ಅಲಂಕಾರ ಮಾಡುತ್ತಾರೆ.

ಆಟ/ಆಟಿಕೆ

ಸಮುದಾಯದ ಪಾರಂಪರಿಕ ಜ್ಞಾನ ಕಿರಿಯ ತಲೆಮಾರಿಗೆ ಹಸ್ತಾಂತರವಾಗುವುದಕ್ಕೆ ಪೂರಕವಾದ ಪರಿಕರಗಳನ್ನು ಜನಪದರು ನಿರ್ಮಿಸಿಕೊಂಡಿದ್ದಾರೆ. ಅವರ ಜಾಣ್ಮೆಗೆ ಉದಾಹರಣೆಗಾಗಿ ಗ್ರಾಮೀಣ ಮಕ್ಕಳು ನಲಿಯುತ್ತ ಆಟವಾಡುತ್ತ ಕಲಿತುಕೊಳ್ಳುವುದಕ್ಕೆ ಸೂಕ್ತವಾದ, ಅವರ ಮನಕ್ಕೆ ಮುದವನ್ನೂ ಆಸಕ್ತಿಯನ್ನೂ ತರಬಲ್ಲ, ಅನೇಕ ಆಟಿಕೆಗಳಿವೆ. ಇವು ಕ್ಷಿಪ್ರಗತಿಯಲ್ಲಿ ಮಕ್ಕಳ ಬೌದ್ಧಿಕ ವಿಕಾಸವನ್ನು ಮಾಡುವಂಥವು ಈ ವಿಭಾಗದಲ್ಲಿ ಅಂತಹ ವಸ್ತುಗಳನ್ನು ಪರಿಚಯಿಸಲು ಆರಂಭಿಸಿದ್ದೇವೆ. ಬೀಸುವ ಕಲ್ಲು, ಮೊರ, ಬುಟ್ಟಿ, ಗೊಂಬೆಗಳು ಮುಂತಾದವುಗಳ ಮೂಲಕ ಅ ಮಕ್ಕಳಿಗೆ ಗ್ರಾಮೀಣ ಬದುಕಿನ ಸೊಗಡನ್ನುಣಿಸಿ ಮುಂದಿನ ದಿನಗಳಿಗೆ ಅವರನ್ನು ಅಣಿಮಾಡುವ ಕೆಲಸವನ್ನು ಜನಪದರು ಕೌಶಲಪೂರ್ಣವಾಗಿ ನಿರ್ವಹಿಸುತ್ತಾರೆ.

ಅಳುಗುಳಿಮಣೆ/ಚೆನ್ನೆಮಣೆ



ಜನರು ತಮ್ಮ ಬಿಡುವಿನ ವೇಳೆಯಲ್ಲಿ ಬೇಸರ ಕಳೆಯಲು ಆಡುವಂತಹ ಆಟದ ಒಂದು ಪರಿಕರ. ಚಿಕ್ಕ ವಯಸ್ಸಿನವರಿಂದ ದೊಡ್ಡ ವಯಸ್ಸಿನವರೆಗೂ ಹೆಣ್ಣು ಗಂಡು ಎಂಬ ಭೇದ ಭಾವವಿಲ್ಲದೆ ಈ ಆಟವನ್ನು ಆಡುತ್ತಾರೆ. ಈ ಪರಿಕರವು ಸುಮಾರು ಅರ್ಧ ಅಡಿ ಅಗಲ ಎರಡು ಅಡಿ ಉದ್ದವಿರುತ್ತದೆ. ಈ ಮಣೆಯಲ್ಲಿ ಏಳು ಗುಳಿಗಳುಳ್ಳ ಎರಡು ಸಾಲುಗಳಿವೆ. ಈ ಆಟಕ್ಕೆ ಕವಡೆ, ಮಂಜೊಟ್ಟಿ ಬೀಜ, ಹುಣಸೆ ಬೀಜ, ಮುಂತಾದವುಗಳನ್ನು ಬಳಸುತ್ತಾರೆ. ಈ ಆಟಕ್ಕೆ ಸಂಬಂಧಿಸಿದಂತೆ ಕೆಲವು ಜನಪದ ಕತೆಗಳಿವೆ. ಜನಪದರು ತಮ್ಮ ಮನೆಯಲ್ಲಿ ಕುಳಿತು ಬಿಡುವಿದ್ದಾಗ (ಸಾಮಾನ್ಯವಾಗಿ ಮಳೆಗಾಲದಲ್ಲಿ) ಇದನ್ನು ಆಡುವ ಕ್ರಮ ಹೆಚ್ಚು ರೂಢಿಯಲ್ಲಿದೆ. ಸಾಗುವಾನಿ, ಹಲಸು ಮುಂತಾದ ಮರದಿಂದ ತಯಾರಿಸುತ್ತಾರೆ. ಆಟಿತಿಂಗಳಲ್ಲಷ್ಟೆ ಈ ಆಟವನ್ನು ಆಡಬೇಕೆಂಬ ವಿಧಿ ಮತ್ತು ಉಳಿದ ತಿಂಗಳುಗಳಲ್ಲಿ ಆಡಬಾರದೆಂಬ ನಿಷೇಧ ತುಳುನಾಡಿನಲ್ಲಿದೆ.

ಆನೆಗೊಂಬೆ

ಮಕ್ಕಳ ಆಟಿಕೆಗಾಗಿ ಬಳಸುವ ವಸ್ತು. ಇದು ಸುಮಾರು ನಾಲ್ಕೂವರೆ ಇಂಚು ಎತ್ತರ, ನಾಲ್ಕು ಇಂಚು ಅಗಲವಿದೆ. ಇದನ್ನು ಮಕ್ಕಳು ಆಟಿಕೆಗಾಗಿ ಬಳಸುತ್ತಾರೆ. ಸೂಕ್ಷ್ಮಕೆತ್ತನೆಯಿಂದ ಬಳಪದ ಕಲ್ಲಿನಲ್ಲಿ ಇದನ್ನು ಶಿಲ್ಪಿ ಕೆತ್ತಿದ್ದಾನೆ.



ಕಲ್ಪುಟ್ಟಿ



ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳು ಅಡುಗೆ ಮಾಡುವ ಆಟಕ್ಕಾಗಿ ಇದನ್ನು ಬಳಸುತ್ತಾರೆ. ಇದು ಸುಮಾರು೨ ಇಂಚು ವ್ಯಾಸ ಇದೆ. ಆಟ ಆಡುವ ಸಂದರ್ಭದಲ್ಲಿ ಚಟ್ನಿ, ಹಿಂಡಿ, ಮೊಸರು ಇಡುವ ಪಾತ್ರವನ್ನಾಗಿ ಇದನ್ನು ಬಳಕೆ ಮಾಡುತ್ತಾರೆ. ಬಳಪದ ಕಲ್ಲಿನಿಂದ ತಯಾರಿಸಲಾಗಿದೆ.

ತತ್ರಾಣಿ

ಕುಡಿಯುವ ನೀರು ಹಾಕಿಡಲು ಬಳಸುವ ಮಣ್ಣಿನ ಸಾಧನ. ಇದನ್ನು ಹೊಲಗಳಲ್ಲಿ ಕೆಲಸ ಮಾಡುವಾಗ ಕುಡಿಯುವ ನೀರಿನ ಅಗತ್ಯವನ್ನು ಪೂರೈಸಿಕೊಳ್ಳುವುದಕ್ಕೆ ಬಳಸಿಕೊಳ್ಳುತ್ತಾರೆ. ಇಂತಹ ವಸ್ತುವನ್ನು ಮಕ್ಕಳು ಆಟಿಕೆಗಾಗಿ ಬಳಸುತ್ತಾರೆ. ಇದು ಅತ್ಯಂತ ಕಿರಿದಾಗಿರುತ್ತದೆ.



ದೂಡುಬಂಡಿ



ಸುಮಾರು ಒಂದು ವರ್ಷದ ಆಸುಪಾಸಿನ ಮಕ್ಕಳು ನಡಿಗೆಯನ್ನು ಕಲಿಯುವ ಹಂತದಲ್ಲಿ ನಡೆಯಲು ಆಸರೆಯಾಗಿ ಇದನ್ನು ಬಳಸುತ್ತಾರೆ. ಈ ಬಂಡಿಯಲ್ಲಿ ಐದು ಪಟ್ಟಿಗಳು ಮೂರು ಚಕ್ರಗಳು ಇವೆ. ಮೇಲ್ಭಾಗದಲ್ಲಿ ಎರಡು ಕಡೆ ಹಿಡಿಕೆ ಇದೆ. ಒಂದೂವರೆ ಅಡಿ ಉದ್ದದ ಪಟ್ಟಿಗಳು ಒಂದೂವರೆ ಅಡಿ ಉದ್ದದ ಹಿಡಿಕೆ ಸಮೇತ ಪಟ್ಟಿ, ಮೂರು ಇಂಚು ವ್ಯಾಸ ಇರುವ ಮೂರು ಚಕ್ರಗಳನ್ನು ಒಳಗೊಂಡಿರುತ್ತದೆ. ಮಕ್ಕಳು ಈ ಬಂಡಿಯನ್ನು ಹಿಡಿದುಕೊಂಡು ಸರಾಗವಾಗಿ



ನಡೆಯುವುದನ್ನು ಕಲಿಯುತ್ತಾರೆ. ಪ್ಲಾಸ್ಟಿಕ್ ಬಂಡಿ ಬಳಕೆಗೆ ಬಂದ ನಂತರ ಈ ಬಂಡಿಗಳ ಬಳಕೆ ಕಡಿಮೆಯಾಗಿದೆ.

ಬೀಸೋಕಲ್ಲು



ಇದು ಸುಮಾರು ಏಳು ಇಂಚುವ್ಯಾಸದ ಆಟಿಕೆ ಬೀಸುವ ಕಲ್ಲು. ಇದರ ತಳಗಲ್ಲು ಚೌಕಾಕಾರದಲ್ಲಿದೆ. (ಬಳಕೆಯ ಕಲ್ಲಲ್ಲಿ ವೃತ್ತಾಕಾರ ವಿರುತ್ತದೆ). ಇದರ ವಿಶೇಷವೆಂದರೆ ಇದರ ಮೇಲಿನ ಕಲ್ಲು ಕಾಷ್ಠಚಿತ್ತಾರದಿಂದ ಆಕರ್ಷಕವಾಗಿದೆ. ದಳದಳವಾಗಿ ಸೂರ್ಯಕಾಂತಿ ಅರಳಿದಂತೆ ಮಕ್ಕಳ ಮನಸ್ಸನ್ನು ಮುದಗೊಳಿಸುವಂತಿದೆ. ನಡುಗೂಟಕ್ಕೆ ಜೋಡಣೆಯಾಗುವ ರಂಧ್ರದ ಇಬ್ಬದಿಗಳಲ್ಲಿ ಇನ್ನೆರಡು ರಂಧ್ರಗಳಿದ್ದು ನಿಜವಾಗಿಯೂ ಕಾಳುಗಳನ್ನು ಒಳಗೆ ಎಳೆದುಕೊಳ್ಳುವಂತಿದೆ. ಹೊರ ಅಂಚಿನ ಒಂದೆಡೆ ಹಿಡಿಕೆಯ ಗೂಟವನ್ನು ಜೋಡಿಸುವ ರಂಧ್ರವೂ ಇದೆ. ಹಗುರವಾದ ಮರದಿಂದ ರಚಿತವಾದ ಈ ಒಟ್ಟು ಬೀಸುಗಲ್ಲು ಎಳೆಯ ಪ್ರಾಯದ ಗ್ರಾಮೀಣ ಕನ್ಯೆಯರಿಗೆ ಮುದನೀಡುವಂತೆ ನಿರ್ಮಾಣವಾಗಿದೆ.



ಸರಳರೀತಿಯಲ್ಲೂ ಇಂಥ ಬೀಸುಗಲ್ಲುಗಳು ರಚನೆಯಾಗುತ್ತವೆ. ಎಲ್ಲ ಆಟಿಕೆ ಬೀಸುಕಲ್ಲುಗಳಲ್ಲೂ ತಳಗಲ್ಲು ಚೌಕಾಕಾರವಾಗಿರುತ್ತದೆ. ನಡುಗೂಟವೂ ಹಿಡಿಗೂಟದ ರಂಧ್ರವೂ ಇದ್ದೇ ಇರುತ್ತವೆ. ಮೇಲಿನ ಭಾಗ ಸರಳವಾಗಿ ವೃತ್ತಾಕಾರದ ಹಲಗೆಯಷ್ಟೆ ಆಗಿರುವುದೂ ಇದೆ. ಆಟಿಗೆ ಬೀಸುವ ಕಲ್ಲುಗಳೆಲ್ಲ ಮರದಿಂದಲೇ ರಚಿತವಾಗಿವೆ ಹೊರತು ಕಲ್ಲಿನಿಂದಲ್ಲ ಎನ್ನವುದು ಗಮನಾರ್ಹ. ಚಿಕ್ಕಂದಿನಲ್ಲೆ ಮಕ್ಕಳನ್ನು ಮುಂದಿನ ದಿನಗಳ ಬದುಕಿಗೆ ಅಣಿಗೊಳಿಸುವ ಸಿದ್ಧತೆ ಎಂಬ ನೆಲೆಯಲ್ಲಿ ಆಟಿಕೆಯ ಸಾಮಗ್ರಿಗಳಾಗಿ ಗೊಂಬೆ, ತತ್ರಾಣಿ, ಮೊರ, ಬುಟ್ಟಿ, ಬೀಸುಗಲ್ಲು ಮುಂತಾದವುಕ್ಕೆ ತುಂಬ ಸಾಂಸ್ಕೃತಿಕ ಮಹತ್ತ್ವವಿದೆ.



ಬುಗುರಿ



ಚಿಕ್ಕಮಕ್ಕಳಿಂದ ಹಿಡಿದು ಪ್ರಾಯದ ಮಕ್ಕಳವರೆಗೂ ಆಡುವಂತಹ ಒಂದು ಗ್ರಾಮೀಣ ಆಟವೆಂದರೆ ಬುಗುರಿ. ಗ್ರಾಮೀಣ ಪ್ರದೇಶಗಳಲ್ಲಿ ಈ ಆಟವು ಹೆಚ್ಚಾಗಿ ಕಂಡುಬರುತ್ತದೆ. ಸುಮಾರು ಮೂರು ಇಂಚಿನಿಂದ ಐದು ಇಂಚು ಎತ್ತರದ ಬುಗುರಿಗಳಿರುತ್ತವೆ. ಬುಗುರಿಯು ಮಧ್ಯದವರೆಗೆ ಶಂಖದ ಆಕಾರದಲ್ಲಿರುತ್ತದೆ. ತಳವು ಮೊಳೆಯ ಅಗ್ರಭಾಗದಿಂದ ಕೂಡಿದ್ದು ಮೇಲೇರಿದಂತೆ ದೊಡ್ಡದಾಗುತ್ತ ಹೋಗುತ್ತದೆ. ಬುಡದಿಂದಲೇ ಆರಂಭಿಸಿ ಮೇಲಿನವರೆಗೂ ಬುಗುರಿಯ ಸುತ್ತಲೂ ಅಡ್ಡಕ್ಕೆ ಗೆರೆಗಳನ್ನು ಕೊರೆದಿರುತ್ತಾರೆ. ಅವುಗಳ ಮೇಲೆಯೇ ದಾರವನ್ನು ಸುತ್ತಿ ವಿಶಿಷ್ಟ ಕೌಶಲ್ಯದಿಂದ ಬುಗರಿಯನ್ನು ಜೋರಾಗಿ ಬೀಸುತ್ತಾರೆ. ಬುಗುರಿಯು ಹೀಗೆ ಬೀಸಿದ ರಭಸಕ್ಕೆ ತುಂಬ ಹೊತ್ತು ನೆಲದ ಮೇಲೆ ತಿರುಗುತ್ತದೆ. ಎದುರಾಳಿಯ ಬುಗುರಿಯ ಮೇಲೆಯೇ ಹೀಗೆ ಹೊಡೆದು ಅದನ್ನು ಕೆಡವುವಂಥ ಆಟಗಳು ಸಮರಕಲೆಯ ಮೂಲ ಪಾಠದಂತೆ ಕಂಡುಬರುತ್ತವೆ.



ಬುಟ್ಟಿ



ಗ್ರಾಮೀಣ ಪ್ರದೇಶಗಳಲ್ಲಿ ಚಿಕ್ಕ ಮಕ್ಕಳು ಆಟ ಆಡುವ ಚಿಕ್ಕ ಬುಟ್ಟಿ. ಇದು ಸುಮಾರು ಮೂರು ಇಂಚು ಎತ್ತರವಾಗಿದೆ. ಇದರ ತಳಭಾಗವು ಎರಡು ಇಂಚು ಇದ್ದು ಸಮತಟ್ಟಾಗಿರುತ್ತದೆ. ಇದರ ಮೇಲ್ಭಾಗವು ಐದು ಇಂಚು ವ್ಯಾಸವಿರುತ್ತದೆ. ಈ ಬುಟ್ಟಿಯನ್ನು ಬಿದಿರಿನ ಸಣ್ಣ ಸಣ್ಣ ಕಡ್ಡಿಗಳಿಂದ ಹೆಣೆದು ಗೇರೆಣ್ಣೆ ಹಚ್ಚುತ್ತಾರೆ. ಚಿಕ್ಕ ಮಕ್ಕಳು ಆಟ ಆಡುವ ಸಂದರ್ಭದಲ್ಲಿ ಮಣ್ಣಿನಲ್ಲಿ ಮನೆಕಟ್ಟಿಕೊಂಡು ಈ ಬುಟ್ಟಿಯಲ್ಲಿ ಮಣ್ಣು ಕಲ್ಲು, ಹುಲ್ಲು, ಸೊಪ್ಪು ತುಂಬಿಕೊಂಡು ಆಟವನ್ನು ಆಡುತ್ತಾರೆ. ಬದುಕಿನ ಮೂಲಪಾಠಗಳನ್ನು ಮಕ್ಕಳು ಇಂಥ ಆಟಗಳಿಂದ ಕಲಿಯಲು ಅವಕಾಶವಾಗುತ್ತಿತ್ತು. ಇತ್ತೀಚೆಗೆ ಆಟದ ಪ್ಲಾಸ್ಟಿಕ್ ವಸ್ತುಗಳು ಬಂದ ಮೇಲೆ ಇಂಥ ವಸ್ತುಗಳು ಕಣ್ಮರೆಯಾಗುತ್ತಿವೆ.



ಮಂಕರಿ/ ಮುತ್ಲ



ಇದು ಒಂದು ಪುಟ್ಟ ಮೊರವಾಗಿದ್ದು ಮಕ್ಕಳಿಗೆ ಆಟಿಕೆಯಾಗಿಯೂ ತರಬೇತಿ ಸಾಧನವಾಗಿಯೂ ಬಳಕೆಯಾಗುತ್ತದೆ. ಇದನ್ನು ಸ್ಥಳೀಯರು ಮಂಕರಿ ಎಂದು ಕರೆಯತ್ತಾರೆ. ಮಕ್ಕಳ ವಯಸ್ಸು ಗಾತ್ರಗಳಿಗನುಗುಣವಾಗಿ ಇದರ ಗಾತ್ರದಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಿರುತ್ತವೆ. ಇದನ್ನು ಪುಟ್ಟ ಹುಡುಗಿಯರು ಎತ್ತಿಕೊಂಡು 'ಚಪ್ಪರಿಸುವ', ಕೇರುವ ಕೆಲಸವನ್ನು ಆಟವಾಡುತ್ತಾ ಆಡುತ್ತ ಕಲಿತು ಬಿಡುತ್ತಾರೆ. ಇದನ್ನು ಬಿದಿರು ಬೆತ್ತಗಳ ಸೀಳುಗಳಿಂದ ತಯಾರಿಸಿ ಅದಕ್ಕೆ ಗೇರೆಣ್ಣೆಯನ್ನು ಲೇಪಿಸಲಾಗುತ್ತದೆ. ಇದು ಸುಮಾರು ಆರು ಇಂಚಿನಿಂದ ಎಂಟು ಇಂಚುಗಳ ತನಕ ಉದ್ದಗಲವುಳ್ಳದ್ದಾಗಿರುತ್ತದೆ.

ಇದು ಕೇವಲ ಮಕ್ಕಳ ಆಟಿಕೆಯಾಗಿ ಮಾತ್ರವಲ್ಲದೆ ದೇವರಿಗೆ ನೈವೇದ್ಯವನ್ನು ಇಡಲು ಮತ್ತು ದೇವರನ್ನು ಉದ್ವಸನ ಮಾಡುವಾಗ (ಕಳುಹಿಸಿಕೊಡುವುದು) ನೈವೇದ್ಯ, ಬಳೆ, ತಾಂಬೂಲ, ಕುಡಿಕೆ ಇತ್ಯಾದಿಗಳನ್ನು ಇಟ್ಟುಕೊಳ್ಳುವುದಕ್ಕೂ ಬಳಕೆಯಾಗುತ್ತದೆ. ಮುತ್ಲವು ಆಟಿಕೆಯಾಗಿ ಬಳಕೆಯಾಗುವ ಸಂದರ್ಭಗಳಾಗಲಿ ಈ ಆಚರಣೆಯಾಗಲಿ ಹಳ್ಳಿಗಳಲ್ಲಿ ಇತ್ತೀಚೆಗೆ ತೀರ ವಿರಳವಾಗಿವೆ.

ಕಲೆ

ಜನಪದ ಬದುಕಲ್ಲಿ ಹಾಡು ಕುಣಿತಗಳದು ಸಿಂಹಪಾಲು. ಬದುಕಿನ ಕಷ್ಟಕಾರ್ಪಣ್ಯಗಳನ್ನು ಸಹ್ಯವಾಗಿಸಿಕೊಳ್ಳಲು, ಸುಖ ಸಂತೋಷಗಳನ್ನು ಇತರರಿಗೆ ಹಂಚಲು, ಕಲೆ ಮನುಷ್ಯಮನಸ್ಸಿಗೆ ಸೂಕ್ತ ಮಾಧ್ಯಮ. ಈ ವಿಭಾಗದಲ್ಲಿ ಕೆಲವು ಕಲಾ ಪರಿಕರಗಳನ್ನು ಪರಿಚಯ ಮಾಡಿಸಲು ಪ್ರಾರಂಭಿಸಿದೆ. ಇದರಲ್ಲಿ ಧಾರ್ಮಿಕ ಕಲಾಪರಿಕರಗಳು, ಮನೋರಂಜನೆ ಕಲಾಪರಿಕರಗಳು, ಮತ್ತು ಉಭಯೋದ್ದೇಶೀ ಪರಿಕರಗಳು ಒಳಗೊಳ್ಳುತ್ತವೆ. ದೃಶ್ಯ ಮತ್ತು ಶ್ರವ್ಯಕಲೆಗಳ ಪರಿಕರಗಳು ಜನಪದರ ಕಲಾಸಕ್ತಿಯ ದ್ಯೋತಕಗಳಾಗಿ ತಮ್ಮದೇ ವೈಶಿಷ್ಟಗಳನ್ನುಳ್ಳವು. ಈ ವಿಭಾಗದಲ್ಲಿ ಕೆಲವು ವಸ್ತುಗಳು ಮಾತ್ರ ಈ ಪ್ರಾಥಮಿಕ ಹಂತದಲ್ಲಿ ಅಡಕವಾಗಿವೆ. ಮುಂದಿನ ಸಂಪುಟಗಳು ಇನ್ನಷ್ಟು ಇಂಥ ಸಾಮಗ್ರಿಗಳಿಂದ ಸಂಪನ್ನವಾಗಲಿವೆ.

ಏಕತಾರಿ/ತಂಬೂರಿ



ಜನಪದ ಸಂಗೀತ ಸಾಧನಗಳಲ್ಲಿ ಒಂದು. ಇದು ಸುಮಾರು ನಾಲ್ಕರಿಂದ ಐದು ಅಡಿ ಉದ್ದವಿದೆ. ಇದರ ಕೆಳಭಾಗದಲ್ಲಿ ಬಿದರಿನ ಕಡ್ಡಿಗಳನ್ನು ಕುಂಬಳಕಾಯಿಯ ಆಕಾರದಲ್ಲಿ ಹೆಣೆದಿದೆ. ಇದರ ಅಲಂಕಾರಕ್ಕಾಗಿ ವಿವಿಧ ಬಣ್ಣಗಳನ್ನು ಲೇಪಿಸಿದೆ. ಇದಕ್ಕೆ ಸುಮಾರು ನಾಲ್ಕರಿಂದ ಐದು ಅಡಿ ಉದ್ದದ ಬಿದರಿನ ಕೋಲನ್ನು ಜೋಡಿಸಿ ಅದರ ಕೊನೆಯ ತುದಿಯಿಂದ ಸ್ವಲ್ಪ ಕೆಳಭಾಗದಲ್ಲಿ ಬೆಣೆ ಜೋಡಿಸಿದ್ದಕ್ಕೆ ಬುರುಡೆಯಿಂದ ಹೊರಟ ತಂತಿಯನ್ನು ಬಿಗಿಯಲಾಗಿದೆ. ಬುಟ್ಟಿಯ ಮೇಲೆ ಹಾದು ಹೋದ ತಂತಿಯ ಬುಟ್ಟಿಗೆ ತಾಗದಂತೆ ನಾಣ್ಯ ಅಥವಾ ಗಡಿಗೆಯ ತುಂಡನ್ನು ಮೇಣದ ಸಹಾಯದಿಂದ ಅಂಟಿಸಿ ಇಟ್ಟಿದ್ದಾರೆ. ಆಗ ಅದರ ನಾದ ಸ್ಪಷ್ಟವಾಗಿ ಹೊರಹೊಮ್ಮುತ್ತದೆ. ಈ ತರಹದ ಏಕತಾರಿ ಅಪೂರ್ವವಾಗಿದೆ. ದಾಸರ ಪದಗಳನ್ನು ಹಾಡಲು ಏಕತಾರಿಗಳನ್ನು ಬಳಸುತ್ತಾರೆ. ಕೆಲವು ಕಡೆ ಭಜನೆ ಮಾಡುವ ಸಂದರ್ಭಗಳಲ್ಲಿ ಕೂಡ ಅವನ್ನು ಉಪಯೋಗಿಸುತ್ತಾರೆ. ಏಕತಾರಿಯು ತಂತಿವಾದ್ಯ.

ಕೋಲಾಟದ ಕೋಲುಗಳು



ಕೋಲಾಟದಲ್ಲಿ ಬಳಸುವ ವಸ್ತುಗಳು. ಇವು ಸುಮಾರು ಹದಿನಾಲ್ಕು ಇಂಚು ಉದ್ದ, ಮೂರು ಇಂಚು ಸುತ್ತಳತೆ ಹೊಂದಿವೆ. ಜನಪದ ಕಲೆಯಾದ ಕೋಲಾಟದಲ್ಲಿ ಒಬ್ಬರು ಮತ್ತೊಬ್ಬರೊಂದಿಗೆ ಕೋಲು ಹಾಕಲು ಬಳಸುವ ಈ ಕೋಲುಗಳ ನಾದವು ಜೋರಾಗಿಯೂ ಹಿತಕರವಾಗಿಯೂ ಇರುತ್ತದೆ. ಇವುಗಳನ್ನು ಅತ್ತಿಮರದಿಂದ ಕಲಾವಿದರೇ ತಯಾರಿಸಿಕೊಳ್ಳುತ್ತಾರೆ. ಕೋಲು ಕತ್ತರಿಸುವಾಗ ಹಾಗೂ ಆಟ ಮುಗಿದಾಗ ವಿಶಿಷ್ಠ ಬಗೆಯ ವಿಧಿ–ನಿಷೇಧ, ಪದ್ಧತಿ ಆಚರಣೆಗಳ ಚೌಕಟ್ಟಿನಲ್ಲಿ ನಡೆಯುವುದು ಗಮನಾರ್ಹ.

ಗೆಜ್ಜೆಪಟ್ಟಿ



ಜನಪದ ಕಲಾವಿದರು ನೃತ್ಯ ಮಾಡುವ ಸಂದರ್ಭದಲ್ಲಿ ಬಳಕೆ ಮಾಡುವ ಸಾಮಗ್ರಿ. ಸುಮಾರು ಒಂದು ಅಡಿ ಉದ್ದ ಎರಡು ಇಂಚು ಅಗಲದ ಬಟ್ಟೆಯ ಪಟ್ಟಿಗೆ ಎರಡು ಅಥವಾ ಮೂರು ಸಾಲುಗಳಲ್ಲಿ ಸಣ್ಣ ಸಣ್ಣ ಗೆಜ್ಜೆಗಳನ್ನು ಪೋಣಿಸುತ್ತಾರೆ. ಯಕ್ಷಗಾನ ದೊಡ್ಡಾಟ, ವೀರಭದ್ರನ ಕುಣಿತ, ಪೂಜಾಕುಣಿತ, ಕೋಲಾಟ ಮುಂತಾದ ಕುಣಿತಗಳನ್ನು ಮಾಡುವಾಗ ಈ ಗೆಜ್ಜೆಸರವನ್ನು ಬಳಕೆ ಮಾಡುತ್ತಾರೆ. ಗೆಜ್ಜೆಗಳನ್ನು ಕಂಚಿನಿಂದ ತಯಾರು ಮಾಡುತ್ತಾರೆ. ಜನಪದ ಕಲಾವಿದರು ಈ ಗೆಜ್ಜೆ ಸರಕ್ಕೆ ವಿಶೇಷವಾದ ಗೌರವವನ್ನು ಕೊಡುತ್ತಾರೆ.



ಡೊಳ್ಳಿನ ಪಡಗ



ಕರ್ನಾಟಕ ಜನಪದ ವಾದ್ಯಗಳಲ್ಲಿ ಹೆಚ್ಚು ಪ್ರಚಲಿತವಾಗಿರುವ ಒಂದು ವಾದ್ಯ-ಡೊಳ್ಳು. ಇದು ಮೂಲತಃ ಒಂದು ಧಾರ್ಮಿಕ ವಾದ್ಯ. ಆತೋದ್ಯವಾದ್ಯ ವಿಭಾಗಕ್ಕೆ ಸೇರಿದ್ದು. ಹಾಲುಮತ ಸಮುದಾಯದವರು ಇದನ್ನು ತಮ್ಮ ಕುಲವಾದ್ಯವೆಂದು ಪರಿಗಣಿಸುತ್ತಾರೆ. ಬೀರಪ್ಪ, ಮಾಲಿಂಗರಾಯ, ಮಾಯವ್ವ, ಅಮೋಘಸಿದ್ಧ, ರೇವಣಸಿದ್ಧ ಮುಂತಾದ ದೈವಗಳ ಆರಾಧನೆಯಲ್ಲಿ ಇದು ಬಳಕೆಯಾಗುತ್ತದೆ. ಗ್ರಾಮದ ಪ್ರತಿಯೊಂದು ಮಂಗಳ ಕಾರ್ಯಕ್ಕೂ ಇದು ಅತ್ಯಗತ್ಯವೆಂದು ಪರಿಗಣಿತವಾಗಿದೆ. ಸುಮಾರು ಅರ್ಧ ಅಂಗುಲ ದಪ್ಪದ ಒಂದೂವರೆ ಅಥವಾ ಎರಡು ಅಡಿ ವ್ಯಾಸದ ಮರದ ತುಂಡನ್ನು ಸಿಲಿಂಡರ್ ಆಕಾರದಲ್ಲಿ ಕೊರೆಯಲಾಗುತ್ತದೆ. ಬೇವು, ಹೊನ್ನೆ, ಮಾವು, ಹೆಬ್ಬೇವು, ಹಲಸು, ಹೆಬ್ಬಲಸು, ಶಿವನೆ ಇತ್ಯಾದಿ ಮರಗಳಿಂದ ಪಡಗಗಳನ್ನು ತಯಾರಿಸುತ್ತಾರೆ.



ತಾಳ



ತಾಳವನ್ನು ಸಾಮಾನ್ಯವಾಗಿ ಭಜನೆ ಸಂದರ್ಭಗಳಲ್ಲಿ ಸಂಗೀತ ಸಾಧನವಾಗಿ ಬಳಸಲಾಗುತ್ತದೆ. ಯಕ್ಷಗಾನ, ದೊಡ್ಡಾಟಗಳ ಭಾಗವತರು ಕೂಡ ಇಂಥ ತಾಳಗಳನ್ನು ಬಾರಿಸುತ್ತ ಭಾಗವತಿಕೆ ಮಾಡುತ್ತಾರೆ. ಹಿತ್ತಾಳೆ ಅಥವಾ ಕಂಚಿನಿಂದ ತಯಾರಿಸಲಾಗುವ ಈ ತಾಳಗಳು ವೃತ್ತಾಕಾರದಲ್ಲಿರುತ್ತವೆ. ಮಧ್ಯದಲ್ಲಿ ರಂಧ್ರವಿರುತ್ತವೆ. ಅವುಗಳಿಗೆ ಹಗ್ಗಗಳನ್ನು ಪೋಣಿಸಿಕೊಳ್ಳುತ್ತಾರೆ. ತಾಳವೆಂದರೆ ಜೋಡಿಯಾಗಿ ಗುರುತಿಸಲಾಗುತ್ತಿದೆಯೇ ಹೊರತು ಏಕವಸ್ತುವಾಗಿ ಅಲ್ಲ. ಇವುಗಳಿಗೆ ಹಿಡಿಕೆಯಾಗಿ ಹಗ್ಗವನ್ನು ಹಾಕಲಾಗಿರುತ್ತದೆ.



ಮದ್ದಲೆ ಪಡಗ



ಜಾನಪದ ವಾದ್ಯಗಳಲ್ಲಿ ತುಂಬ ಹೆಚ್ಚು ಬಳಕೆಯಾಗುವ ಒಂದು ಸಾಧನ ಮದ್ದಳೆ. ಇದು ಮರವನ್ನು ಕೊರೆದು ಟೊಳ್ಳಾಗಿಸಿಕೊಂಡು ರಚಿಸಿಕೊಂಡ ಪಡುಗ/ಕುತ್ತಿಗೆ ಎರಡು ಬದಿಗೂ ಚರ್ಮ 'ಮುಚ್ಚಿಗೆ' ಯನ್ನು ತಯಾರಿಸಿಕೊಂಡು ಮುಚ್ಚುತ್ತಾರೆ. ಮುಚ್ಚಿಗೆಯನ್ನು ಬಿಗಿಯಲು ಪರಸ್ಪರ ಚರ್ಮದ 'ಬಾರ'/ಮಿಣಿಗಳನ್ನು ಉಪಯೋಗಿಸುತ್ತಾರೆ. ಸಂಗೀತ ಕಛೇರಿ, ಯಕ್ಷಗಾನ, ನೃತ್ಯ ಮುಂತಾದೆಡೆ ಮದ್ದಲೆಯ ಬಳಕೆ ಇದೆ. ಮದ್ದಲೆ ಪಡಗವು ಮಧ್ಯಭಾಗದಲ್ಲಿ ದೊಡ್ಡದಾಗಿರುತ್ತದೆ. ಪಡುಗಗಳಲ್ಲಿ ನಾನಾ ಗಾತ್ರದವುಗಳನ್ನು ಕಾಣಬಹುದು. ಸುಮಾರು ಎರಡೂವರೆ ಅಡಿಯಿಂದ ಮೂರೂವರೆ ಅಡಿ ಉದ್ದವಿರುತ್ತದೆ. ಹಲಸು, ದೊಡ್ಡಹಲಸು/ಹೆಬ್ಬಲಸು, ಕಾಚಿ ಮುಂತಾದ ಮರಗಳಿಂದ ಇದನ್ನು ತಯಾರಿಸುತ್ತಾರೆ. ಮದ್ದಲೆಯು ದೇವವಾದ್ಯವಾಗಿದ್ದು ಆತೋದ್ಯವಾದ್ಯ ಎಂಬ ವಿಭಾಗಕ್ಕೆ ಸೇರುತ್ತದೆ.



ಶಹನಾಯಿ/ಸುಂದರಿ



ಕೊಳವೆಯಾಕಾರದಲ್ಲಿರುವ ಶಹನಾಯಿಯು ಊದುವ ವಾದ್ಯವಾಗಿದೆ(ಸುಷಿರ). ಇದರ ತುದಿಯು ಪುಟ್ಟ ಧ್ವನಿವರ್ಧಕದ ಬಾಯಿಯಾಕಾರದಲ್ಲಿದೆ. ಸುಮಾರು ಒಂದೂವರೆ ಅಡಿ ಉದ್ದ ಇರುವ ಶಹನಾಯಿಗೆ

ಒಂಚು ಇಂಚು ಅಂತರದಲ್ಲಿ ಏಳು, ಅಧಿಕ ಒಂದು ಮತ್ತು ಪಾರ್ಶ್ವದಲ್ಲಿ ಎರಡೆರಡು ಹೀಗೆ ಒಟ್ಟು ಹನ್ನೆರಡು ರಂಧ್ರಗಳಿರುತ್ತವೆ. ಊದುವ ತುದಿ ಸುಮಾರು ಅರ್ಧ ಇಂಚು ವ್ಯಾಸವಿದ್ದು ಮತ್ತೊಂದು ಕೊನೆಯು ಸುಮಾರು ಒಂದು ಇಂಚು ವ್ಯಾಸವಿದೆ. ಶಹನಾಯಿಯು ಉತ್ಕೃಷ್ಟ ಸಂಗೀತೋಪಕರಣವಾಗಿದ್ದು ಶ್ರೇಷ್ಠ ಮರದಿಂದಷ್ಟೇ ಅದನ್ನು ತಯಾರಿಸುತ್ತಾರೆ. ದೊಡ್ಡಾಟದಲ್ಲಿ ಬಳಕೆಯಾಗುವ ಮುಖವಿಣೆಯು ಶಹನಾಯಿಯ ಸೋದರವರ್ಗದ ವಾದ್ಯ. ಮುಖವೀಣೆಯ ಪಡುಗಕ್ಕೆ ಒಂದ್ರಿ ಎಂದು ಹೆಸರು.



ಹಲಗೆ/ತಮಟೆ



ಹಿಂದಿನ ಕಾಲದಲ್ಲಿ ಹಳ್ಳಿಗಳಲ್ಲಿ ಆಜ್ಞೆ, ಸುದ್ದಿಗಳನ್ನು ಸಾರ್ವಜನಿಕರಿಗೆ ತಿಳಿಸುವುದಕ್ಕೆ ; ಹಬ್ಬ ಹರಿದಿನ, ದೇವರ ಮೆರವಣಿಗೆ, ಮದುವೆ ಮೆರವಣಿಗೆ, ಶವಸಂಸ್ಕಾರ ಸಂದರ್ಭದ ಮೆರವಣಿಗೆ ಮುಂತಾದ ಸಂದರ್ಭಗಳಲ್ಲಿ, ರಾಧಾನಾಟ ಮುಂತಾದ ಬಯಲಾಟ ಪ್ರಕಾರಗಳ ಪ್ರದರ್ಶನದ ಸಂದರ್ಭದಲ್ಲಿ ಈ ವಾದ್ಯವು ಬಳಕೆಯಾಗುತ್ತಿತ್ತು. ಇದು ಸುಮಾರು ಎರಡು ಅಡಿ ವ್ಯಾಸ ಸುಮಾರು ನಾಲ್ಕು ಇಂಚು ಎತ್ತರವಿರುತ್ತದೆ. ಮರದಕಟ್ಟಿ (Frame)ಗೆ ಮೇಕೆ/ಆಡು/ಎಮ್ಮೆ ಕರುವಿನ ಚರ್ಮವನ್ನು ಒಂದು ಬದಿಯಲ್ಲಿ ಮುಚ್ಚಿ ಬಿಗಿಗೊಳಿಸಲಾಗುತ್ತದೆ. ಹಾಗೆ ಬಿಗಿಗೊಳಿಸಿಕೊಳ್ಳುವುದಕ್ಕೆ ಕಬ್ಬಿಣದ ತಂತಿಯಿಂದ ನಿರ್ಮಿಸಿದ ಬಲೆಯ ತುಂಡಿನಂಥ ಸಾಧನವನ್ನು ಮರದ ಕಟ್ಟಿಗೆಗೆ ಜೋಡಿಸಿಟ್ಟಿರುತ್ತಾರೆ.



ಹಲಗೆಯನ್ನು ಒಂದು ಕೈಯಲ್ಲಿ ಗುಣಿ ಎಂಬ ಕೋಲಿನಿಂದಲೂ, ಇನ್ನೊಂದು ಕೈಯಲ್ಲಿ ತೆಳ್ಳನೆಯ ಮತ್ತು ಉದ್ದ ಕಿರಿದಾದ ಚಿಟಿಕೆ ಎಂಬ ಕೋಲಿನಿಂದಲೂ ಬಡಿಯುತ್ತಾರೆ. ತಮಟೆಯನ್ನು ಬಿಸಿಲಲ್ಲಾಗಲಿ ಬೆಂಕಿಯಲ್ಲಾಗಲಿ ಒಂದಿಷ್ಟು ಹದಕ್ಕೆ ಬಿಸಿಮಾಡಿಕೊಂಡರೆ ಶ್ರುತಿಗೆ ಹೊಂದಿಕೊಂಡು ಚೆನ್ನಾಗಿ ಶಬ್ದವು ಹೊರಡುತ್ತದೆ.

ಮಾಪನ

ಎಣಿಸುವುದು, ತೂಕಮಾಡುವುದು ಮತ್ತು ಅಳತೆ ಮಾಡುವುದು ಒಂದು ಅದ್ಭುತ ಲೋಕ. ಲೋಕವ್ಯಾಪಾರವೇ ಈ ಮುಗ್ಗಾಲಿ ವಹಿವಾಟಿನಲ್ಲಿ ನಡೆಯುತ್ತದೆಯಲ್ಲವೇ? ಜನಪದರು ಈ ಅತ್ಯಗತ್ಯ ಮತ್ತು ಕೌಶಲಪೂರ್ಣ ಕೆಲಸವನ್ನು ಎಷ್ಟು ಸಮರ್ಪಕವಾಗಿ ನಿರ್ವಹಿಸಿದ್ದಾರೆ ಎಂಬುದನ್ನು ಅಧ್ಯಯನ ಮಾಡುವುದೇ ಕುತೂಹಲದ ಸಂಗತಿ. ಅಂತಹ ಸಾಧನಗಳಲ್ಲಿ ಕೆಲವನ್ನಷ್ಟೆ ಸದ್ಯ ಪರಿಚಯಿಸುತ್ತಿದ್ದೇವೆ.

ಗೆಜ್ಜೆ ಚಟಾಕು



ಸಣ್ಣ ಪ್ರಮಾಣದಲ್ಲಿ ಕಾಳುಗಳನ್ನು ಅಳೆಯಲು ಬಳಸುವ ಮಾಪಕ. ಇದು ವೃತ್ತಾಕಾರದಲ್ಲಿರುತ್ತದೆ. ವ್ಯಾಸವು ಸುಮಾರು ಮೂರು ಇಂಚು, ಎತ್ತರ ಸುಮಾರು ನಾಲ್ಕೂವರೆ ಇಂಚು ಇದರಲ್ಲಿ ತುಂಬಿ ಅಳೆದರೆ(ಹಿಡಿಸುವಷ್ಟು ಕಾಳು) ಹಿಂದಿನ ಕಾಲದ ಒಂದು ಕಾಲ್ಪಾವಿನ ನಾಲ್ಕನೇ ಒಂದು ಪಾಲು ಆಗುತ್ತದೆ. ಇದನ್ನು ಕಬ್ಬಿಣದ ತಗಡಿನಿಂದ ನಿರ್ಮಿಸಿ ಬಾಯಿಯ ಕೆಳಗಿನ ಸುತ್ತ ಹಿತ್ತಾಳೆಯ ಕಟ್ಟನ್ನು ಕಟ್ಟಿರುತ್ತಾರೆ. ಅಳೆದು ಸುರಿದಾಗ ಸದ್ದಾಗುವಂತೆ ಇದರ ತಳದ ಒಳಭಾಗದಲ್ಲಿ ಗೆಜ್ಜೆಯಗುಂಡಿನಂತ ರಚನೆಗಳನ್ನು ಅಳವಡಿಸಿರುವುದರಿಂದಲೇ ಇದಕ್ಕೆ ಗೆಜ್ಜೆ ಅಟವಿ ಎಂದು ಹೆಸರು. ಮೆಟ್ರಿಕ ಪದ್ಧತಿಯ ಹೊಸ ಮಾಪನಗಳು ಬಂದ ಬಳಿಕ ಇಂಥ ವಸ್ತುಗಳು ಮರೆಗೆ ಸರಿಯುತ್ತಿವೆ.

ಚಟಾಕು



ದವಸ ಧಾನ್ಯಗಳನ್ನು ಅಳತೆ ಮಾಡಲು ಬಳಸುತ್ತಿದ್ದ ಪರಿಕರ. ಇದು ಸುಮಾರು ನಾಲ್ಕು ಇಂಚು ಉದ್ದ ಎರಡು ಇಂಚು ವ್ಯಾಸ ಇದೆ. ಮೇಲ್ಭಾಗ ಮತ್ತು ತಳಭಾಗದಲ್ಲಿ ಅರ್ಧ ಇಂಚು ಅಗಲದ ಒಂದೊಂದು ಪಟ್ಟಿ ಇದೆ. 'ಚಟಾಕು' ಪಾವಿನ ಅರ್ಧ ಭಾಗವಾಗಿರುತ್ತದೆ. ಇದನ್ನು ಕಬ್ಬಿಣದ ತಗಡಿನಿಂದ ತಯಾರಿಸಿದ್ದಾರೆ. ಅಡುಗೆ ಮನೆಗಳಲ್ಲಿ ಹಾಗೂ ವ್ಯಾಪಾರ ಕೇಂದ್ರಗಳಲ್ಲಿ ಬಳಕೆ ಮಾಡುತ್ತಿದ್ದರು.

ಚಿನಿವಾರ ತಕ್ಕಡಿ



ಚಿನ್ನ ಬೆಳ್ಳಿಯಂಥ ಅಮೂಲ್ಯ ಲೋಹಗಳನ್ನು ತೂಕ ಮಾಡುವುದಕ್ಕೆ ಬಳಸುವ ಸಾಧನ. ತಕ್ಕಡಿದಿಂಡು ಸುಮಾರು ಏಳು ಇಂಚು ಉದ್ದವಿದ್ದು, ಮಧ್ಯಭಾಗದಲ್ಲಿ ಒಂದು ಹಿಡಿಕೆ ಇದೆ. ದಿಂಡಿನ ಕೆಳಭಾಗದಲ್ಲಿ ಒಂದು ಮುಳ್ಳು ಇದೆ. ತಕ್ಕಡಿ ದಿಂಡಿನ ಎರಡು ತುದಿಗೂ ಒಂದು ಅಡಿ ಉದ್ದದ ಮೂರು ದಾರಗಳಿಂದ ತಕ್ಕಡಿಯ ತಟ್ಟೆಗಳನ್ನು ಕಟ್ಟಿದ್ದಾರೆ. ತಕ್ಕಡಿಯ ಮಧ್ಯಭಾಗದ ಹಿಡಿಕೆಯನ್ನು ಕೈಯಿಂದ ಎತ್ತಿಹಿಡಿದು ತೂಕ ಮಾಡುತ್ತಾರೆ. ಎಡಭಾಗದ ತಕ್ಕಡಿ ತಟ್ಟೆಯಲ್ಲಿ ತೂಕದ ಕಲ್ಲನ್ನೂ ಬಲಭಾಗದ ತಕ್ಕಡಿ ತಟ್ಟೆಯಲ್ಲಿ ಚಿನ್ನ ಬೆಳ್ಳಿ(ಆಭರಣ)ಗಳನ್ನೂ ಇಟ್ಟು ತೂಕಮಾಡುವುದು ಸಂಪ್ರದಾಯ ಹಾಗೂ ನಿಯಮ.

ದಂಡಿಗೆ/ತಕ್ಕಡಿ



ತೂಕಮಾಡಲು ಕಬ್ಬಿಣದ ಮಾಪಕಗಳು ಬರುವ ಮುನ್ನ ಹಳ್ಳಿಗಳಲ್ಲಿ ಬೆಳೆದ ಬೆಳೆಗಳನ್ನು ಮತ್ತು ಇತರ ವಸ್ತುಗಳನ್ನು ತೂಕ ಮಾಡುವುದಕ್ಕೆ ಬಳಸುತ್ತಿದ್ದ ಸಾಧನ. ಇದರಲ್ಲಿ ದಿಂಡು, ಪಲ್ಲಿ ಎಂಬ ಭಾಗಗಳಿವೆ. ದಿಂಡನ್ನು ಸು. ನಾಲ್ಕರಿಂದ ಐದು ಅಡಿಗಳಷ್ಟು ಉದ್ದದ ಬಲವಾದ ಮರದ ದಂಡವೊಂದರಿಂದ ತಯಾರಿಸುತ್ತಾರೆ. ಎರಡು ತುದಿಗಳಲ್ಲಿ ಕೊರೆದ ರಂಧ್ರಗಳ ಮೂಲಕ ನೂಲು/ಹಗ್ಗದಿಂದ ಜೋತಾಡಿಸಲಾಗುವ ತಟ್ಟೆಯಾಕಾರದ ಪಲ್ಲಿಗಳಿರುತ್ತವೆ. ಇವು ಮಧ್ಯದಲ್ಲಿ ಒಂದೆರಡಿಂಚು ತಗ್ಗಾಗಿ ವೃತ್ತಾಕಾರದ ರಚನೆಗಳು. ಇವನ್ನು ಬಿದಿರಿನ ಸೀಳುಗಳಿಂದ ಹೆಣೆದು ಅದರ ರಂಧ್ರಗಳು ಮುಚ್ಚುಹೋಗುವಂತೆ ಗೇರಣ್ಣೆ, ಸುಟ್ಟಬಟ್ಟೆಯ ಬೂದಿಯನ್ನು ಚೆನ್ನಾಗಿ ಮಿಶ್ರಮಾಡಿಕೊಂಡು ಲೇಪಿಸುತ್ತಾರೆ. ಪಲ್ಲಿಗಳ ವ್ಯಾಸವು ಸುಮಾರು ಹನ್ನೆರಡರಿಂದ ಇಪ್ಪತ್ತು ಇಂಚು ಇರುತ್ತವೆ. ದಂಡಿಗೆಯಲ್ಲಿ ಗಾತ್ರ, ವಿನ್ಯಾಸಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ.

ಪಾವು





ದವಸ ಧಾನ್ಯಗಳನ್ನು ಅಳತೆ ಮಾಡಲು ಬಳಸುತ್ತಿದ್ದ ಸಾಧನ. ಇದು ಸುಮಾರು ಅರ್ಧ ಅಡಿ ಎತ್ತರ ಮೂರು ಇಂಚು ವ್ಯಾಸವಿದೆ. ಇದರ ರಚನೆ ಮತ್ತು ವಿನ್ಯಾಸಗಳಲ್ಲಿ ಹಲವು ವ್ಯತ್ಯಾಸಗಳಿವೆ. ಸಾಮಾನ್ಯವಾಗಿ ಇದರ ಮೇಲ್ಭಾಗ ಮತ್ತು ತಳಭಾಗದಲ್ಲಿ ಒಂದು ಇಂಚು ಅಗಲದ ಪಟ್ಟಿಗಳನ್ನು ಹಾಕಿ ತಯಾರಿಸಿರುವುದು ಹೆಚ್ಚು. ಇದು ಸೇರಿನ ನಾಲ್ಕನೆಯ ಒಂದು ಭಾಗವಿದು. ಈ ಅಳತೆ ಮಾಪಕವನ್ನು ಅಡುಗೆಮನೆಯಲ್ಲೂ ವ್ಯಾಪಾರ ಕೇಂದ್ರಗಳಲ್ಲೂ ಬಳಸುತ್ತಿದ್ದರು. ಕಬ್ಬಿಣದ ತಗಡಿನಿಂದ ಇದನ್ನು ತಯಾರಿಸಿದ್ದಾರೆ.

ಪಂಚೇರುಗಲ್ಲು



ವಸ್ತು, ದವಸ ಧಾನ್ಯಗಳನ್ನು ತಕ್ಕಡಿಯಲ್ಲಿಟ್ಟು ತೂಕ ಮಾಡುವ ಸಂದರ್ಭದಲ್ಲಿ ತಕ್ಕಡಿಯ ಒಂದು ಪರಡಿ/ತಟ್ಟೆಯಲ್ಲಿಟ್ಟು ತೂಕ ಮಾಡುವುದಕ್ಕೆ ಬಳಸುತ್ತಿದ್ದ ವಸ್ತು. ಇದು ಇವತ್ತಿನ ಐದು ಕಿ.ಗ್ರಾಂ ತೂಕವನ್ನು ಒಳಗೊಂಡಿದೆ. ಕಬ್ಬಿಣದ ತೂಕದ ಕಲ್ಲುಗಳು ಬಳಕೆಗೆ ಬರುವ ಪೂರ್ವದಲ್ಲಿ ಈ ಕಲ್ಲುಗಳನ್ನೇ ತೂಕ ಮಾಡಲು ಬಳಸಲಾಗುತ್ತಿತ್ತು. ಆಧುನಿಕ ತೂಕ ಪದ್ಧತಿಯ ಬಳಕೆ ಹೆಚ್ಚಾದ ಪರಿಣಾಮವಾಗಿ ಪಾರಂಪರಿಕವಾದ ತೂಕದ ಕಲ್ಲುಗಳ ಉಪಯೋಗ ಕಡಿಮೆಯಾಗಿದೆ.

ಮಣಗಲ್ಲು



ಕಾಳು, ತರಕಾರಿ, ದವಸ–ಧಾನ್ಯ ಹಾಗೂ ವಸ್ತುಗಳನ್ನು ತಕ್ಕಡಿಯಲ್ಲಿಟ್ಟು ತೂಕ ಮಾಡುವ ಸಂದರ್ಭದಲ್ಲಿ ದಂಡಿಗೆಯ ಒಂದು ಪಲ್ಲಿ/ಪರಡಿ/ತಟ್ಟೆಯಲ್ಲಿಟ್ಟು ತೂಕ ಮಾಡುವುದಕ್ಕೆ ಬಳಸುತ್ತಿದ್ದ ಸಾಧನ. ಇದು ಇವತ್ತಿನ ೧೩ಕಿ.ಗ್ರಾಂ ಭಾರದಷ್ಟಿದೆ. ಜನಪದರು ಈ ಕಲ್ಲನ್ನು ಮಣಗಲ್ಲು ಎನ್ನುತ್ತಾರೆ. ಹಿಂದಿನ ದಿನಗಳಲ್ಲಿ ತೂಕಕ್ಕೆ ದಂಡಿಗೆ ಬಳಕೆಯಾಗುತ್ತಿದ್ದ ಕಾಲದಲ್ಲಿ ಇದರ ಬಳಕೆ ಹೆಚ್ಚಾಗಿತ್ತು. ವಿಶೇಷವಾಗಿ ರೈತರಲ್ಲಿ ನಡೆಯುವ ವ್ಯವಹಾರದ ಸಂದರ್ಭದಲ್ಲಿ ಈ ಕಲ್ಲು ಹೆಚ್ಚಾಗಿ ಬಳಕೆಯಾಗುತಿತ್ತು. ಈ ಕಲ್ಲು ವೃತ್ತಾಕಾರವಾಗಿದ್ದು ೫ ಇಂಚು ಎತ್ತರ, ೨೦ ಇಂಚು ವ್ಯಾಸವಿದೆ. ತಳ ಮತ್ತು ಮೇಲ್ಭಾಗ ಚಪ್ಪಟೆಯಾಗಿದೆ. ಮೇಲ್ಭಾಗದಲ್ಲಿ ಹೂವಿನ ಚಿತ್ರವಿದೆ. ಆಧುನಿಕ ತೂಕ ಪದ್ಧತಿಯ ಬಳಕೆ ಸರಳ ಹಾಗೂ ಪಕ್ಕ (ನಿಖರ)ವಾಗಿರುವ ಪರಿಣಾಮವಾಗಿ ಪಾರಂಪರಿಕ ತೂಕದ ಕಲ್ಲುಗಳ ಉಪಯೋಗ ಕಡಿಮೆಯಾಗಿದೆ.

ವೈದ್ಯಕೀಯ

ಜನಪದರು ತಮ್ಮ ಮತ್ತು ತಮ್ಮ ಜಾನುವಾರುಗಳ ಆರೋಗ್ಯವನ್ನು ಕಾಪಾಡಿಕೊಳ್ಳಲು ಪಾರಂಪರಿಕವಾಗಿ ಅನೇಕ ವಿಧಾನಗಳನ್ನು ಅನುಸರಿಸುತ್ತಾರೆ. ಶುಶ್ರೂಷೆ ಮಾಡಲು ಅಗತ್ಯವಾದ ಪರಿಕರಗಳನ್ನೂ ಸ್ವತಃ ನಿರ್ಮಿಸಿಕೊಳ್ಳುತ್ತಾರೆ. ಅಂತಹ ಕೆಲವು ಪರಿಕರಗಳನ್ನು ಈ ವಿಭಾಗದಲ್ಲಿ ಪರಿಚಯಿಸುತ್ತಿದ್ದೇವೆ.

ಗುಲ್ಲು



ಜಾನುವಾರುಗಳಿಗೆ ಬರೆ ಹಾಕಲು ಬಳಸುವ ಸರಳು. ಇದು ಸುಮಾರು ಎರಡು ಅಡಿ ಉದ್ದವಿದ್ದು ತುದಿಯು 'S' ಆಕಾರದಲ್ಲಿ ವಿನ್ಯಾಸಗೊಂಡಿರುತ್ತದೆ. ಸರಳು ಕಿರುಬೆರಳ ಗಾತ್ರ ದಪ್ಪ. ವಿಶೇಷವಾಗಿ ದೀಪಾವಳಿಯ ಅಮಾವಾಸ್ಯೆಯಂದು ಬರುವ 'ಹಟ್ಟಿಹಬ್ಬ'ದ ಸಂದರ್ಭದಲ್ಲಿ ಎತ್ತು, ದನ, ಕರುಗಳಿಗೆ ಇದನ್ನು ಕಾಯಿಸಿ ಬರೆ ಹಾಕಲಾಗುತ್ತದೆ. ಬರೆಹಾಕುವುದರಿಂದ ಎತ್ತು ಮತ್ತು ಈದ ಹಸುಗಳಿಗೆ ಬರುವ 'ಚಪ್ಪೆಬೇನೆ'ಯು ನಿವಾರಣೆಯಾಗುತ್ತದೆ ಎನ್ನುವುದು ಜನಪದ ಅನುಭವ. ಹಾಗೂ ರೋಗ ತಡೆಗಟ್ಟುವ ಮುಂಜಾಗ್ರತಾ ಕ್ರಮವಾಗಿಯೂ ಈ ಸರಳಿನಿಂದ ಬರೆ ಹಾಕಲಾಗುತ್ತದೆ.

ಗೊಟ್ಟ



ಜಾನುವಾರುಗಳಿಗೆ ಔಷಧಿ ಕುಡಿಸಲು ಬಳಸುವ ಬಿದಿರ ಅಂಡೆ. ಬಿದಿರ ತುಂಡಿನಲ್ಲಿ ಒಂದು ಗಂಟನ್ನು ಹಾಗೆಯೇ ಉಳಿಸಿಕೊಂಡು ಇನ್ನೊಂದು ತುದಿಯನ್ನು ಒಂದು ವಿಶಿಷ್ಟಕೋನದಲ್ಲಿ ಕತ್ತರಿಸಿಕೊಳ್ಳಲಾಗುತ್ತದೆ. ಇದರಿಂದ ಗೊಟ್ಟದ ತುದಿಯನ್ನು ಜಾನುವಾರುಗಳ ಬಾಯಿಯೊಳಕ್ಕೆ ಸೇರಿಸಿಕೊಳ್ಳಲು ಅನುಕೂಲವಾಗುತ್ತದೆ. ಸಣ್ಣಕರುಗಳಿಗೆ ಹಾಲು ಕುಡಿಸಲು ಚಿಕ್ಕ ಗೊಟ್ಟವನ್ನು ಬಳಸುತ್ತಾರೆ. ಇದು ಸುಮಾರು ಎಂಟು ಇಂಚಿನಿಂದ ಎರಡು ಅಡಿಗಳ ತನಕ ಉದ್ದವಿರುತ್ತದೆ. ಸುತ್ತಳತೆ ಕೂಡ ಬೇರೆ ಬೇರೆ ಇರುತ್ತದೆ. ಒಳ್ಳೆಯ ಬಿದಿರಿನಿಂದ ತಯಾರಿಸಿ ಜೋಪಾನವಾಗಿ ಇಟ್ಟುಕೊಂಡರೆ ಇದು ವರ್ಷಾನುಗಟ್ಟಲೆ ಬಾಳಿಕೆ ಬರುತ್ತದೆ.



ಚಿಮಟಿಗೆ/ಮುಳ್ಳುಗಡ್ಡಿ



ಮನುಷ್ಯರು ಅಥವಾ ಪ್ರಾಣಿಗಳ ದೇಹದೊಳಗೆ ಚುಚ್ಚಿಕೊಂಡ ಮುಳ್ಳು, ಸೇರಿದ ಕಸಕಡ್ಡಿ–ಕಲ್ಲುಚೂರು ಮುಂತಾದುವನ್ನು ಕೀಳಲು ಬಳಸುವ ಸಾಮಗ್ರಿ ಇವು ಇಕ್ಕುಳದ ಹಾಗಿದ್ದು ಗಾತ್ರದಲ್ಲಿ ವಿಭಿನ್ನವಾಗಿರುತ್ತದೆ. ಜಾನುವಾರುಗಳಿಗಾಗಿ ಬಳಸುವ ಚಿಮಟಿಗೆ ದೊಡ್ಡದು, ಮನುಷ್ಯರ ಅಗತ್ಯಕ್ಕೆ ಬಳಸುವುವು ಸಣ್ಣವು. ಉತ್ತರ ಕರ್ನಾಟಕದ ಪಶುಪಾಲಕರಲ್ಲಿ ಇವುಗಳ ಬಳಕೆ ಹೆಚ್ಚು. ಕುರಿ, ದನಗಳ ಕಾಲಗೊರಸಿನಲ್ಲಿ ಸಿಕ್ಕಿಹಾಕಿಕೊಂಡ ಸಣ್ಣ ಗಾತ್ರದ ಕಲ್ಲು ಮುಂತಾದುವನ್ನು ಕೀಳುವುದಕ್ಕೂ ಚಿಮಟಿಗೆಯು ಬಳಕೆಯಾಗುತ್ತದೆ. ಚಿಮಟಿಗೆಗಳನ್ನು ಜೋಡಿಸಿಕೊಂಡಿರುವ ಗುಚ್ಛದಲ್ಲಿ ಸೂಜಿಯಂಥ ಮತ್ತು ಸೌಟಿನಂಥ ವಸ್ತುಗಳಿರುತ್ತವೆ. ದೇಹದಲ್ಲಿ ಸೇರಿಕೊಂಡ ಮುಳ್ಳು ಅಥವಾ ಕಶ್ಮಲಗಳನ್ನು ಬಗಿದು ತೆಗೆಯಲು ಸೂಜಿಯಾಕಾರದ ಉಪಕರಣವನ್ನು ಬಳಸಿದರೆ ಗಾಯವಾದ ಜಾಗಕ್ಕೆ ಔಷಧ ಹಾಕಲು ಸೌಟಿನಾಕಾರದ ಉಪಕರಣದ ಬಳಕೆಯಾಗುತ್ತದೆ. ಕಿವಿಯ ಗುಗ್ಗೆ/ಕೊಕ್ಕಿಯನ್ನು ತೆಗೆದು ಹಾಕಲೂ ಇದು ಬಳಕೆಯಾಗುತ್ತದೆ. ಚಿಮಟಿಗೆಯು ಉತ್ತರ ಕರ್ನಾಟಕದ ಪಶುಪಾಲಕರಲ್ಲಿ, ವಿಶೇಷವಾಗಿ ಅಲೆಮಾರಿ ಕುರಿಗಾಹಿಗಳಲ್ಲಿ ಬಳಕೆ ಹೆಚ್ಚು.

ಚಿಮಟಿಗೆಯನ್ನು ಕಬ್ಬಿಣ, ತಾಮ್ರ ಮುಂತಾದ ಲೋಹಗಳಿಂದ ತಯಾರಿಸುತ್ತಾರೆ. ಜೋಳಿಗೇರು ಎನ್ನುವ ಸಮುದಾಯದವರು ಚಿಮಟಿಗೆಯನ್ನು ತಯಾರಿಸಿ ಗ್ರಾಮ, ಸಂತೆ, ಜಾತ್ರೆ ಮುಂತಾದ ಸ್ಥಳಗಳಲ್ಲಿ ಮಾರಾಟಮಾಡುತ್ತಾರೆ.

ಇತರ ಕಸುಬು

ಗ್ರಾಮೀಣ ಬದುಕಿನಲ್ಲಿ ಬೇಸಾಯವನ್ನು ಅವಲಂಬಿಸಿಯೇ ಇತರ ಅನೇಕ ಕಸುಬುಗಳು ಸುತ್ತುತ್ತವೆ. ಕಮ್ಮಾರ, ಬಡಗಿ, ಕುಂಬಾರ, ನೇಕಾರ, ಚಮ್ಮಾರ ಮುಂತಾದ ವೃತ್ತಿಗಳವರು ಕೃಷಿಕರನ್ನು ಅವಲಂಬಿಸಿ/ಕೃಷಿಗೆ ಪೂರಕವಾಗಿ ಬದುಕುತ್ತಿದ್ದ ಕಾಲ ತುಂಬ ಪ್ರಾಚೀನವೇನೂ ಅಲ್ಲ. ಅಂತೆಯೇ ಬುಟ್ಟಿ–ಚಾಪೆಗಳನ್ನು ಹೆಣೆಯುವ, ಸುಣ್ಣ ಬಣ್ಣಗಳನ್ನು ಸಿದ್ಧಪಡಿಸುವ ಕೆಲಸಗಾರರು ಕೂಡ ಇದಕ್ಕೆ ಹೊರತಾಗಿಲ್ಲ. ಅಂಥವರು ಮತ್ತು ಪಶುಪಾಲನೆ, ಮೀನುಗಾರಿಕೆ, ಬೇಟೆ ಮುಂತಾದವುಗಳಲ್ಲಿ ತೊಡಗಿಕೊಂಡವರು ಬಳಸುವ ಕೆಲವು ಪರಿಕರಗಳನ್ನೂ ಪರಿಚಯಿಸಲು ಈ ವಿಭಾಗದಲ್ಲಿ ತೊಡಗಿದೆ. ಗ್ರಾಮೀಣ ಬದುಕಿನ ಲವಲವಿಕೆಗೆ ಬಿಸಿಲು ಮಳೆಗಳಂಥ ಪ್ರಾಕೃತಿಕ ಪರಿಸರದ ಜತೆಗೆ, ಮಾನವ ನಿರ್ಮಿತವಾದ ನಾನಾ ಕಸುಬುಗಳಿಗೆ ಸಂಬಂಧಿಸಿದ ವಸ್ತುಗಳ ಕೊಡುಗೆ ಕೂಡ ಗಣನೀಯವಾಗಿದೆ. ಕಸುಬುಗಳಿಗೆ ಒದಗುವ ಮುಖ್ಯ ಉದ್ದೇಶದೊಂದಿಗೆ ಈ ವಸ್ತುಗಳಲ್ಲಿ ಕೆಲವು ಜನಪದರ ಕರಕುಶಲತೆಗೂ ಸಾಕ್ಷಿಯಾಗಿದೆ.

ಅಡಿಗಲ್ಲು/ಸೋರೆ ಬಡೆಯುವ ಕಲ್ಲು



ಕುಂಬಾರರು ತಿಗರಿ ಚಕ್ರದಲ್ಲಿ ಗಡಿಗೆಯನ್ನು ತಯಾರಿಸಿ ಹೊರತೆಗೆದ ನಂತರ ಅದನ್ನು ತೆಳುಮಾಡುವುದಕ್ಕಾಗಿ ಬಳಸುವ ಕಲ್ಲಿನ ಸಾಧನ. ಇದರ ಕೆಳಭಾಗ ಚಪ್ಪಟೆಯಾಗಿದ್ದು ನಯವಾಗಿದೆ. ಮೇಲ್ಭಾಗದಲ್ಲಿ ಹಿಡಿದುಕೊಳ್ಳಲು ಹಿಡಿಯನ್ನು ಹೊಂದಿದೆ. ತಿಗರಿಯಿಂದ ತೆಗೆದ ಗಡಿಗೆಯನ್ನು ತೆಳುಮಾಡುವಾಗ ಮೇಲ್ಭಾಗದಲ್ಲಿ ಸೊಳದಿಂದ ಗಡಿಗೆಯನ್ನು ಬಡಿದರೆ ಅಲ್ಲೇ ಒಳಭಾಗದಲ್ಲಿ ಎಡಗೈಯಲ್ಲಿ ಈ ಕಲ್ಲನ್ನು ಉಪಯೋಗಿಸುತ್ತಾರೆ. ಇದರ ಸ್ವರೂಪಗಳಲ್ಲಿ ವ್ಯತ್ಯಾಸ ಕಂಡು ಬರುತ್ತದೆ.



ಅರ



ಇದು ಮೊಂಡಾಗಿರುವ ಹಾಗೂ ಹೊಸದಾಗಿ ತಯಾರಿಸಿರುವ ಆಯುಧಗಳನ್ನು ಚೂಪುಗೊಳಿಸುವ/ಹರಿತಗೊಳಿಸುವ ಕಬ್ಬಿಣದ ಸಲಕರಣೆ. ಸುಮಾರು ನಾಲ್ಕರಿಂದ ಐದು ಇಂಚು ಉದ್ದದ, ಉಕ್ಕಿನಿಂದ ತಯಾರಿಸಲಾದ ಅರವು ಸುತ್ತಲೂ ಒಂದು ಇಂಚು ಅಗಲವಾಗಿದ್ದು ತ್ರಿಭುಜಾಕೃತಿಯಲ್ಲಿರುತ್ತದೆ. ಇದಕ್ಕೆ ಅರ್ಧ ಅಡಿ ಉದ್ದದ ಹಿಡಿಕೆ ಇರುತ್ತದೆ. ಕೃಷಿ, ಕಮ್ಮಾರಿಕೆ ಮತ್ತು ಇತರ ವೃತ್ತಿಗಳವರ ಸಲಕರಣೆಗಳಾದ ಕುಡುಗೋಲು, ಚಾಕು, ಕೊಡಲಿ, ಬಾಚಿ, ಗರಗಸ ಇತ್ಯಾದಿ ವಸ್ತುಗಳ ಅಲಗನ್ನು ಹರಿತಗೊಳಿಸಲು ಇದನ್ನು ಬಳಸಲಾಗುತ್ತದೆ. ಸಲಕರಣೆಗಳನ್ನು ಸಾಣೆ ಹಿಡಿಯುವ ಯಂತ್ರಗಳು ಬಂದಿವೆಯಾದರೂ ಇದರ ಬಳಕೆ ಕಡಿಮೆಯಾಗಿಲ್ಲ. ಗರಗಸದ ಹಲ್ಲುಗಳನ್ನು ಹರಿತಗೊಳಿಸಲು ಅರ ಅಗತ್ಯ.



ಉಜ್ಜೋಡು



ಬಡಿಗೇರರು ಮರದ ಕೆತ್ತನೆ ಕೆಲಸ ಮಾಡುವ ಸಂದರ್ಭದಲ್ಲಿ ಬಾಚಿ ಅಥವಾ ಇತರೆ ವಸ್ತುವಿನಿಂದ ಕೆತ್ತಿದ ಮರವನ್ನು/ಹಲಗೆಯನ್ನು ನುನುಪಾಗಿ ಕೆತ್ತಲು ಬಳಸುವ ಪರಿಕರ. ಇದರ ಗಾತ್ರ ಮತ್ತು ವಿನ್ಯಾಸಗಳಲ್ಲಿ ಹಲವು ವ್ಯತ್ಯಾಸಗಳಿರುತ್ತವೆ. ಸಾಮಾನ್ಯವಾಗಿ ಒಂದು ಅಡಿ ಉದ್ದ, ನಾಲ್ಕು ಇಂಚು ಅಗಲ, ಮೂರು ಇಂಚು ಎತ್ತರದ ಆಯಾತಾಕಾರದ ಮರದ ತುಂಡಿನಿಂದ ತಯಾರಿಸುತ್ತಾರೆ. ಈ ತುಂಡಿನ ನಡುವೆ ಸುಮಾರು ಎರಡು ಇಂಚು ಅಳತೆಯುಳ್ಳ (ಗಾತ್ರಕ್ಕೆ ಅನುಕೂಲವಾಗುವಂತೆ ಬೇರೆ ಬೇರೆ ಅಳತೆಯ) ಹರಿತವಾದ ತಗುಡನ್ನು ಜೋಡಿಸಲಾಗುತ್ತದೆ. ಈ ತಗುಡನ್ನು ಬಿಗಿಗೊಳಿಸಿಕೊಳ್ಳಲು ಬಿಗಿಗೂಟವಿದೆ. ಉಜ್ಜೋಡಿನ ಒಂದು ಭಾಗದ ಮೇಲ್ಭಾಗದಲ್ಲಿ ಎರಡೂ ಕೈಯಲ್ಲಿ ಹಿಡಿಯಲು ಅನುಕೂಲವಾಗುವ ಹಿಡಿಕೆ ಇದೆ. ಇದನ್ನು ಒಬ್ಬರು ಅಥವಾ ಇಬ್ಬರೂ ಬಳಸಬಹುದು. ನುಣುಪುಗೊಳಿಸುವ ಆಧುನಿಕ ಯಂತ್ರಗಳು ಬಂದ ನಂತರ ಇದರ ಬಳಕೆ ಅತ್ಯಂತ ಕಡಿಮೆಯಾಗಿದೆ.



ಉಣ್ಣೆಕತ್ರಿ / ತುಪ್ಪಟ ಕತ್ರಿ



ಕುರಿಗಳ ತುಪ್ಪಟನ್ನು ಕತ್ತರಿಸಲು ಬಳಸುವ ಸಲಕರಣೆ. ಇದು ಸುಮಾರು ಒಂದು ಅಡಿಯಿಂದ ಸುಮಾರು ಹದಿನೈದು ಇಂಚು ಉದ್ದವಿರುತ್ತದೆ. ಮಧ್ಯದಲ್ಲಿ ಸುಮಾರು ಎರಡು ಇಂಚು ಅಗಲವಿದ್ದು ತುದಿ ಭಾಗಕ್ಕೆ ಬಂದಂತೆ ಕಡಿಮೆ ಅಗಲವಿರುವ ತೆಳು ತಗಡುಗಳನ್ನು ಒಂದಕ್ಕೊಂದು ಅಭಿಮುಖವಾಗುವಂತೆ ವಿನ್ಯಾಸಗೊಳಿಸಿದ ಒಂದೇ ತಗಡಿನ

ತುಂಡಿನಿಂದ ಇದನ್ನು ರಚಿಸುತ್ತಾರೆ. ಇದನ್ನು ಮಧ್ಯದಲ್ಲಿ ಸಂಪೂರ್ಣವಾಗಿ ಬಾಗಿಸಿದಾಗ ಕತ್ತರಿಯ ಆಕಾರವು ಲಭ್ಯವಾಗುತ್ತದೆ. ಬುಡಭಾಗವೇ ಹಿಡಿಯೂ ಆಗಿರುತ್ತದೆ ಹೊರತು ಪ್ರತ್ಯೇಕ ಹಿಡಿ ಇರುವುದಿಲ್ಲ.

ಕೈಗರಗಸ



ಮರದ ಸಣ್ಣ ಹಲಗೆಗಳನ್ನು ಹಾಗೂ ಸಣ್ಣ ಕಟ್ಟಿಗೆಗಳನ್ನು ತುಂಡು ಮಾಡಿಕೊಳ್ಳಲು ಬಳಸುವ ಸಾಧನ. ಇದು ಸುಮಾರು ಎರಡು ಅಡಿ ಉದ್ದವಿರುತ್ತದೆ. ಇದನ್ನು ಹಿಡಿಯಲು ಹಿಂಭಾಗದಲ್ಲಿ ಹಿಡಿಯನ್ನು ಹೊಂದಿರುತ್ತದೆ. ಹಿಡಿಯಿಂದ ಅಗಲ ಪಟ್ಟಿಯನ್ನು ಹೊಂದಿ ಮುಂದುವರಿದಂತೆಲ್ಲ ಅದರ ಅಗಲವು ಕಡಿಮೆಯಾಗುತ್ತದೆ. ಆಯತಾಕಾರದ ಪಟ್ಟಿಯ ಒಂದು ಪಾರ್ಶ್ವದಲ್ಲಿ ಮುಳ್ಳುಗಳ ಎಡೆಬಿಡದೆ ಇರುವ ಆಕಾರ ಹೊಂದಿರುತ್ತದೆ. ಹೀಗೆ ಮಾಡಿರುವುದರಿಂದ ಕಟ್ಟಿಗೆ ಕೊರೆಯುವಾಗ ಗರಗಸ ಹಿಂದು ಮುಂದೆ ಸರಿದಾಡಲು ಅನುಕೂಲವಾಗುತ್ತದೆ. ಇದರ ಮುಳ್ಳುಗಳು(ಹಲ್ಲುಗಳು) ಅಲ್ಪಸ್ವಲ್ಪ ಬಾಗಿರುತ್ತವೆ.

ಕೈಹಂಚಿನ ಪಡಿಯಚ್ಚು



ಮನೆಯ ಮೇಲ್ಛಾವಣಿಗೆ ಬಳಸುವ ಹಂಚುಗಳ ಪಡಿಯಚ್ಚು ತಯಾರಿಸಲು ಇದರಿಂದ ತಯಾರಿಸಲಾದ ಹಂಚುಗಳನ್ನು ಕರಿಹಂಚು/ಕೈಹಂಚುಗಳು ಎನ್ನುತ್ತಾರೆ. ಈ ಅಚ್ಚು ಸುಮಾರು ಒಂದೂವರೆ ಅಡಿ ಉದ್ದವಿದ್ದು ಅದರ ಹಿಂಭಾಗದಲ್ಲಿ ಹಿಡಿಕೆ ಇದೆ. ಅಚ್ಚು ದಪ್ಪವಾಗಿದ್ದು, ತುದಿಗೆ ಹೋದಂತೆ ಕಿರಿದಾಗುತ್ತದೆ. ಹಂಚುಗಳನ್ನು ತಯಾರಿಸುವಾಗ ಕೈಯಚ್ಚಿನ ಮೇಲೆ ಅರ್ಧಗೋಲಾಕಾರದಲ್ಲಿ ಮಣ್ಣನ್ನು ಮೆತ್ತಲಾಗುತ್ತದೆ. ಅಲ್ಲದೆ ಮನೆಯ ನೆಲವನ್ನು ಭದ್ರಗೊಳಿಸಲು, ನೆಲಸಮತಟ್ಟು ಮಾಡಲು ಸಹ ಕೈಯಚ್ಚು ಬಳಕೆಯಾಗುತ್ತದೆ. ಇದನ್ನು ಜಾಲಿಮರದಿಂದ ತಯಾರಿಸಲಾಗುತ್ತದೆ. ಹಂಚಿನ ಕಾರ್ಖಾನೆಗಳು ಬಂದ ಬಳಿಕ ಇದರ ಬಳಕೆ ಇಲ್ಲವಾಗಿದೆ.



ಕೊಡತಿ



ಬಡಿಗಿ ವೃತ್ತಿಯವರು ಮರಕ್ಕೆ ರಂಧ್ರ ತೋಡುವಾಗ/ಹಾಕುವಾಗ ಉಳಿಯನ್ನು ಬಳಸುತ್ತಾರೆ. ಆ ಉಳಿಯನಿಟ್ಟು ಹೊಡೆಯುವುದಕ್ಕೆ ಬಳಸುವ ಪರಿಕರವೇ ಕೊಡತಿ. ಅಂದರೆ ಮೊಳೆ, ಉಳಿ ಮುಂತಾದವನ್ನು ಮೇಲಿನಿಂದ ಬಡಿಯಲು/ಕುಟ್ಟಲು ಬಳಸುವ ಸಾಧನ. ಉಳಿಗೆ ಪೆಟ್ಟು ಹೊಡೆಯಲು ಇದನ್ನು ಬಳಸುತ್ತಾರೆ. ಇದು ಸುಮಾರು ಒಂದು ಅಡಿ ಉದ್ದವಿದ್ದು ಹಿಡಿಯನ್ನು ಹೊಂದಿದೆ. ಹಿಡಿಯನ್ನು ಹೊರತು ಪಡಿಸಿ ಅದರ ಮುಂಭಾಗ ದಪ್ಪವಾಗಿದ್ದು ಭಾರವಾಗಿದೆ. ಒಕ್ಕಲು ಸಂದರ್ಭದಲ್ಲಿ ಅಲಸಂಡೆ, ಹೆಸರು, ತೊಗರಿ ಬುಡ್ಡಿ ಬಡಿಯಲು ಸಹ ಅಪೂರ್ವವಾಗಿ ಬಳಕೆಯಾಗುತ್ತದೆ. ಇದರ ಗಾತ್ರದಲ್ಲಿ ಹಲವಾರು ವ್ಯತ್ಯಾಸಗಳಿವೆ. ಜಾಲಿ, ಹುಣಸೆ ಮರದಿಂದ ಇದನ್ನು ತಯಾರಿಸಿಕೊಳ್ಳುತ್ತಾರೆ.



ಗಾರೆ ಉಜ್ಜುವ ಮಣೆ/ಕತ್ತಿ/ತ್ಯಾಪೆ/ಕರ್ಣಿ



ಕಟ್ಟಡ ನಿರ್ಮಾಣ ಮಾಡುವಾಗ ಸಿಮೆಂಟನ್ನು ಗೋಡೆಗೆ ಲೇಪಿಸಲು ಹಾಗೂ ನಯಗೊಳಿಸಲು ಬಳಸುವ ಸಲಕರಣೆ. ಸಾಮಾನ್ಯವಾಗಿ ಪುರಾತನ ಕಾಲದಿಂದಲೂ ಮಣ್ಣನ್ನು ನಯಗೊಳಿಸಲು ಈ ಉಪಕರಣ ವಿವಿಧ ರೂಪಗಳಲ್ಲಿ ಬಳಕೆಯಾಗುತ್ತಿತ್ತು. ಅರಳಿ ಎಲೆ ಆಕಾರದಲ್ಲಿದ್ದು ಆರು ಇಂಚು ಉದ್ದ, ತಳದಲ್ಲಿ ನಾಲ್ಕು ಇಂಚು ಅಗಲವಿದೆ. ತ್ಯಾಪಿ ನಾನಾ ಗಾತ್ರಗಳಲ್ಲಿರುತ್ತವೆ. ಮರ ಹಾಗೂ ಕಬ್ಬಿಣದಿಂದ ಮಾಡಿದ ತ್ಯಾಪಿಗಳಿವೆ. ಕಬ್ಬಿಣದಿಂದ ತಯಾರಿಸಿದ ತ್ಯಾಪಿಯ ಹಿಡಿಕೆಯನ್ನು ಮರದಿಂದ ಮಾಡಲಾಗಿದೆ.



ಗಾರೆ ತಿಕ್ಕುವ ಕಲ್ಲು/ಬೆಣ್ಣಕಲ್ಲು

ಮನೆಗಳಲ್ಲಿ ನೆಲವನ್ನು ಸಮತಟ್ಟಾಗಿಯೂ ಹೊಳೆಯುವಂತೆಯೂ ತಿಕ್ಕಲು ಬಳಸುವ ಕಲ್ಲು. ಈ ಕಲ್ಲನ್ನು ಸಮುದ್ರ, ನದಿ, ಹೊಳೆಗಳ ದಡದಲ್ಲಿ ಆಯ್ದು ತರುತ್ತಾರೆ. ಇದು ಬೆಣ್ಣೆಯಂತೆ ನಯವಾಗಿರುವುದರಿಂದ ಇದಕ್ಕೆ





ಬೆಣ್ಣೆಕಲ್ಲು ಎಂತಲೂ ಕರೆಯುತ್ತಾರೆ. ಮನೆಗಳಲ್ಲಿ ಗೊಡೆ ಅಥವಾ ನೆಲ ಅಲ್ಲಲ್ಲಿ ಹೊಡೆದುಹೋದಾಗ ಆ ಜಾಗದಲ್ಲಿ ಅದಕ್ಕೆ ಗಾರೆ ಕಲಸಿ ಮೆತ್ತಿದ ನಂತರ ಅದರ ಮೇಲೆ ಸ್ವಲ್ಪ ಸಿಮೆಂಟ್ ಹಾಕಿ ಗಾರೆ ತಿಕ್ಕುವ

ಕಲ್ಲಿನಿಂದ ಚೆನ್ನಾಗಿ ತಿಕ್ಕಿ ನಯಗೊಳಿಸುತ್ತಾರೆ. ಸಿಮೆಂಟು ಬಳಕೆಗೆ ಬರುವ ಮೊದಲು ಸುಣ್ಣದ ಗಾರೆಯನ್ನು ಗೋಡೆ/ನೆಲಕ್ಕೆ ಹಾಕಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಹೆಚ್ಚು ಬಳಕೆಯಲ್ಲಿತ್ತು. ಮರಳು ಸುಣ್ಣ ಮಿಶ್ರಣ ಮಾಡಿ ಈ ಗಾರೆ ತಿಕ್ಕುವ ಕಲ್ಲಿನಿಂದ ಚೆನ್ನಾಗಿ ತಿಕ್ಕಿ ನಯಗೊಳಿಸುತ್ತಿದ್ದರು.

ಗೌರಿ ಮೂರ್ತಿ ಅಚ್ಚು



ಗೌರಿ ಹಬ್ಬದಲ್ಲಿ ಪೂಜಿಸಲು ಬಳಸುವ ನಿರ್ದಿಷ್ಟ ಗೌರಿ ಮೂರ್ತಿಯನ್ನು ತಯಾರಿಸಲು ಬಳಸುವ ಅಚ್ಚು. ಕಲಸಿದ ಆವೆ ಮಣ್ಣನ್ನು ಈ ಅಚ್ಚಿನಲ್ಲಿ ಹಾಕಿ ನಿಗದಿತ ಹೊತ್ತಿನ ಬಳಿಕ ಅಚ್ಚನ್ನು ಹೊರ ತೆಗೆದಾಗ ಮೂರ್ತಿ ರೂಪಗೊಳ್ಳುತ್ತದೆ. ಅಚ್ಚಿನ ಹೊರ ಮುಖ ನಯವಾಗಿದ್ದು ಒಳಭಾಗದಲ್ಲಿ ಮೂರ್ತಿಯ ಆಕಾರವು ಮಣ್ಣಿನಲ್ಲೂ ಮೂಡುವಂತೆ ತಯಾರಿಸಲಾಗಿದೆ. ತಲೆ ಕಿರೀಟ ಸಹಿತ ಎದೆಯ ವರೆಗೆ ಮೂರ್ತಿ ಮೂಡಿಬರುವಂತೆ ಸಂರಚನೆ ಇದೆ. ಇದು ಸುಮಾರು ಅರ್ಧ ಅಡಿ ಎತ್ತರವಿದ್ದು ಒಂದು ಇಂಚಿನಷ್ಟು ದಪ್ಪವಿರುತ್ತದೆ. ಸಾಂಸ್ಕೃತಿಕವಾಗಿ ಮಹತ್ವವಿರುವ ಗೌರಿ ಹಬ್ಬದಲ್ಲಿ ಜನರು ಇಂತಹ ಅಚ್ಚಿನಿಂದಾದ ಮೂರ್ತಿಯನ್ನು ಕೊಂಡು ಪೂಜಿಸುತ್ತಾರೆ. ಇದನ್ನು ಬಿಳಿಯ ಗಾರೆಯಿಂದ ತಯಾರಿಸಲಾಗಿದೆ.

ಡೊಪ್ಪಿ ಉಚ್ಚೋಡು



ಬಾಗಿಲ ತೋಳು ಕಿಟಿಕಿಗಳ ಪಟ್ಟಿ ಮುಂತಾದ ವಸ್ತುಗಳಿಗೆ ಆಲಂಕಾರಿಕ ಗೆರೆ ಹಾಕಲು ಬಳಸುವ ವಸ್ತು. ಇದರ ಉದ್ದ ಸುಮಾರು ಏಳೂವರೆ ಇಂಚು, ಎತ್ತರ ಎರಡೂವರೆ ಇಂಚು, ಅಗಲ ಒಂದೂವರೆ ಇಂಚು. ಇದು ಉಚ್ಚೋಡು ರೀತಿಯಲ್ಲಿದೆ. ಆದರೆ ಗಾತ್ರದಲ್ಲಿ ಚಿಕ್ಕದು. ಇದರ ಮಧ್ಯಭಾಗದಲ್ಲಿ ಗೀಟು ಕೊರೆಯುವ ಲೋಹದ ವಸ್ತುವಾಗಿದೆ. ಇದನ್ನು ಅಳತೆಗೆ ತಕ್ಕಂತೆ ಗೀಟು/ಗೆರೆ ಕೊರೆಯಲು ಅನುಕೂಲವಾಗುವಂತೆ ಹೊಂದಿಸಿಕೊಳ್ಳಬಹುದು. ಬಾಗಿಲ ತೋಳು, ತಟ್ಟಿ, ತಲೆಪಟ್ಟಿ ಬಾಗಿಲು ಎತ್ತಿನ ಗಾಡಿಯ ಪಟ್ಟಿ ಮುಂತಾದವುಗಳಿಗೆ ಆಲಂಕಾರಿಕ ಗೆರೆ ಹಾಕಿಕೊಳ್ಳಲು ಬಳಸುತ್ತಾರೆ.



ತಟ್ಟುಳಿ



ಮರದ ತುಂಡುಗಳನ್ನು ನಿಗದಿತ ಸ್ಥಳದಲ್ಲಿ ಜೋಡಿಸಲು ಅಗತ್ಯವಾದ ರಂಧ್ರ ಮಾಡಿಕೊಳ್ಳಲು ಬಳಸುವ ಸಾಧನ. ಇದು ಸುಮಾರು ಹನ್ನೊಂದು ಇಂಚು ಉದ್ದವಿದ್ದು ಇದರಲ್ಲಿ ಹಿಡಿಕೆಯ ಉದ್ದ ನಾಲ್ಕೂವರೆ ಇಂಚು, ನಾಲ್ಕು ಇಂಚು ದಪ್ಪವಿರುತ್ತದೆ. ಉಳಿಯ ತಗಡಿನ ಅಗಲ ಎರಡು ಇಂಚು ಇರುತ್ತದೆ. ತುದಿ ಹರಿತವಾಗಿರುತ್ತದೆ.



ತಿಗರಿ



ಕುಂಬಾರರು ಗಡಿಗೆ/ಪಾತ್ರೆ ತಯಾರಿ ಮಾಡುವ ಸಂದರ್ಭದಲ್ಲಿ ಬಳಸುವ ಸಾಧನ. ಇದು ಚಕ್ಕಡಿ ಗಾಲಿಯಂತಿದ್ದು ಗಾಲಿಯ ಗಡ್ಡೆಯ ಮಧ್ಯಭಾಗದಲ್ಲಿ ಒಂದು ಚಿಕ್ಕ ರಂಧ್ರವಿರುತ್ತದೆ. ಈ ರಂಧ್ರವನ್ನು ಗಾಲಿಯ ತಿರುಗುವಿಕೆಗೆ ಅನುಕೂಲವಾಗುವಂತೆ ಅಳವಡಿಸಲಾಗುತ್ತದೆ. ಗಡಿಗೆ ಮಾಡುವ ಸಂದರ್ಭದಲ್ಲಿ ಗಡಿಗೆ ತಯಾರಕ ಇದರ ಎದುರುಗಡೆ ಕುಳಿತುಕೊಂಡು ಮಧ್ಯಭಾಗದ ರಂಧ್ರದಲ್ಲಿ ಒಂದು ನಯವಾದ ಕೋಲಿನಿಂದ ತಿಗರಿಯನ್ನು ಗಡಿಗೆ ರಚನೆಗೆ ಅನುಕೂಲವಾಗುವಂತೆ ನಿಧಾನವಾಗಿ ಅಥವಾ ವೇಗವಾಗಿ ತಿರುಗಿಸಿಕೊಳ್ಳುತ್ತಾನೆ.

ತಿಗರಿ ತಿರುಗುವಾಗ ಹದಗೊಳಿಸಿದ ಅರ್ಲುಮುದ್ದೆ/ಮಣ್ಣಿನ ಮುದ್ದೆಯನ್ನು ತಿಗರಿಯ ಮಧ್ಯಭಾಗದ ಗಡ್ಡೆಯ ಮೇಲಿಟ್ಟು ತನ್ನ ಕೈಚಳಕದಿಂದ ತನಗೆ ಬೇಕಾದ ಆಕಾರದಲ್ಲಿ ಮಡಕೆಗೆ ರೂಪಕೊಡುತ್ತಾನೆ. ನಡುನಡುವೆ ತಿಗರಿಯ ವೇಗ ಕಡಿಮೆಯಾದಾಗ ಮಡಕೆ ತಯಾರಕನು ತಿಗರಿಯು ತಿರುಗಿಸುತ್ತ ಇರುವಾಗಲೇ ಗಡಿಗೆ ಪಾತ್ರೆಯನ್ನು ನಿರೀಕ್ಷಿತ ಆಕೃತಿಗೆ ತರುತ್ತಾನೆ. ಬಳಿಕ ಗಡಿಗೆ, ತಿಗರಿಗೆ ಅಂಟಿಕೊಂಡ ಪಾತ್ರೆಯನ್ನು ದಾರದಿಂದ ಕತ್ತರಿಸಿ ಬೇರ್ಪಡಿಸಿ ಪಕ್ಕದಲ್ಲಿ ಸಜ್ಜುಗೊಳಿಸಲಾದ ಹಾಸಿದ ಬೂದಿಯ ಮೇಲೆ ಇರಿಸುತ್ತಾನೆ.

ತಿಗರಿಯನ್ನು ಕಟ್ಟಿಗೆ/ಮರ ಮತ್ತು ಮಣ್ಣಿನಿಂದ ತಯಾರಿಸುತ್ತಾರೆ. ತಿಗರಿಯ ನಡುವಿನ ದಪ್ಪಗಾತ್ರದ ಗಡ್ಡೆಯು ಮರದ್ದಾಗಿದ್ದು ಅದಕ್ಕೆ ಸ್ವಲ್ಪ ಸ್ವಲ್ಪ ಅಂತರದಲ್ಲಿ ಜೋಡಿಸಲಾಗುವ ಹಲ್ಲು/ಎಲೆಗಳೂ ಮರದ್ದೇ ಆಗಿವೆ. ಒಳಗೆ ಬಳ್ಳಿಗಳನ್ನು ಸುತ್ತಿ ಮಣ್ಣು ಲೇಪನ ಮಾಡಿ ಹೊರಗಿನ ಸುತ್ತಿನ ಚಕ್ರವನ್ನು ಕೆಲವರು ತಯಾರಿಸಿಕೊಂಡಿರುತ್ತಾರೆ. ಇವತ್ತಿನ ಕುಂಬಾರಿಕೆ ಸಣ್ಣ ಸಣ್ಣ ಪಾತ್ರೆಗಳ ತಯಾರಿಕೆಗೆ ಸೀಮಿತವಾಗಿರುವುದರಿಂದ ಹಾಗೂ ಮಹಿಳೆಯರು ಪಾತ್ರೆ ತಯಾರಿಸಿಕೊಳ್ಳುವುದಕ್ಕೆ ಸೀಮಿತವಾಗಿರುವುದರಿಂದ ಈಗ ಇದರ ಬಳಕೆ ಕಡಿಮೆಯಾಗಿದೆ. ತಿಗರಿಯು ಕುಲಾಲಚಕ್ರವೆಂಬ ಹೆಸರಿನಿಂದ ಕಾಲಗತಿಯ ಸಂಕೇತವಾಗಿ ಪರಿಗಣಿತವಾಗಿದೆ.

ತಿದಿ



ಕಮ್ಮಾರರು ಕಬ್ಬಿಣದ ಉಪಕರಣಗಳನ್ನು ತಯಾರಿಸುವಾಗ ಅವುಗಳ ಭಾಗಗಳನ್ನು ಬೆಂಕಿಯಲ್ಲಿ ಕಾಯಿಸಲು, ಕೆಂಡಗಳು ಚೆನ್ನಾಗಿ ಉರಿಯುವಂತೆ ಗಾಳಿ ಹಾಕಿಕೊಳ್ಳಲು ಬಳಸುವ ಉಪಕರಣ. ತಿದಿಯು ನಾಲ್ಕು ಅಡಿ ಉದ್ದ ಎರಡು ಅಡಿ ಅಗಲವಿದೆ. ಮೇಲ್ಭಾಗ ಮತ್ತು ಕೆಳಭಾಗಕ್ಕೆ ಮರದ ತೆಳು ಹಲಗೆಗಳನ್ನು ಜೋಡಿಸಿ ಹಿಂದಿನ ಭಾಗಕ್ಕೆ ಎಮ್ಮೆಯ ಚರ್ಮದಿಂದ ಬಿಗಿಯಲಾಗುತ್ತದೆ. ಕೆಳಭಾಗಕ್ಕೆ ಕಬ್ಬಿಣದ ಸರಳನ್ನು ಜೋಡಿಸಿರುತ್ತಾರೆ. ತಿದಿಯ ಮುಂದಿನ ಭಾಗಕ್ಕೆ ಕೊಳವೆಯಾಕಾರದ ಕಬ್ಬಿಣದ ಪೈಪನ್ನು ಹಾಕಿರುತ್ತಾರೆ. ತಿದಿಯ ಹಿಂಭಾಗಕ್ಕೆ ಒಂದು ಹಗ್ಗವನ್ನು ಕಟ್ಟಿ ಅದನ್ನು ಒಂದು ಉದ್ದವಾದ ಮರದ ಕೋಲಿಗೆ ಕಟ್ಟುತ್ತಾರೆ. ಕುಲುಮೆಯ ಮೇಲ್ಭಾಗಕ್ಕೆ ಬರುವಂತೆ ಕೋಲಿಗೆ ಸರಪಳಿಯನ್ನೂ ಕಟ್ಟುತ್ತಾರೆ. ಈ ಸರಪಳಿಯನ್ನು ಹಿಡಿದು ಮೇಲೆ ಕೆಳಗೆ ಎಳೆದಾಗ ಗಾಳಿಯು ಬರುತ್ತದೆ. ಆಗ ಕುಲುಮೆಯಲ್ಲಿ ಬೆಂಕಿ ಹೆಚ್ಚುತ್ತದೆ. ಸರಪಳಿಯಿಂದ ತಿದಿಯನ್ನು ಮೇಲಕ್ಕೆ ಎಳೆದಾಗ ಗಾಳಿಯು ಬರುತ್ತದೆ. ಕೆಳಕ್ಕೆ ಇಟ್ಟಾಗ ಗಾಳಿ ಬರುವುದು ನಿಲ್ಲುತ್ತದೆ. ತಿದಿಯು ವೀಣೆಯ ಆಕಾರದಲ್ಲಿದೆ. ಇತ್ತೀಚಿಗೆ ಟೈರ್ ಟ್ಯೂಬ್‌ಗಳಿಂದ ತಿದಿಯನ್ನು ಬಿಗಿಯುತ್ತಾರ

ತೂಕದ ಗುಂಡು



ಕಟ್ಟಡ ಕಟ್ಟುವಾಗ ಗೋಡೆಗಳಿಗೆ ಇಟ್ಟ ಕಲ್ಲು/ಇಟ್ಟಿಗೆಗಳ ಗುರುತ್ವಾಕರ್ಷಣ ನೆಲೆಯನ್ನು ಪರೀಕ್ಷಿಸಲು ಬಳಸುವ ಉಪಕರಣ. ಕಬ್ಬಿಣದ ಗುಂಡನ್ನು ಮೇಲಿಂದ ಕೆಳಗೆ ಇಳಿ ಬಿಡಲು ದಾರವನ್ನು ಕಟ್ಟಿರುತ್ತಾರೆ. ಗುಂಡು ಸುಮಾರು ಮೂರು ಇಂಚು ಉದ್ದವಿರುತ್ತದೆ. ಇದಕ್ಕೆ ಸುಮಾರು ಎರಡು ಮೀಟರ್ ಉದ್ದದ



ದಾರವನ್ನು ಪೋಣಿಸಿದೆ. ದಾರದಲ್ಲಿ ಚೌಕಕಾರದ ಪುಟ್ಟ ಹಲಗೆ ಕೂಡ ಜೋಡಣೆಯಾಗಿದೆ. ಕಟ್ಟಡದ ಮೂಲೆಯನ್ನು ಅಳತೆ ಮಾಡುವಾಗ ಹಲಗೆ ತುಂಡನ್ನು ಕೈಯಲ್ಲಿ ಗೋಡೆಗೆ ಹಿಡಿದು ದಾರದಲ್ಲಿ ನೇತಾಡುವ ಗುಂಡನ್ನು ಇಳಿಬಿಟ್ಟು ಕಟ್ಟುತ್ತಿರುವ ಗೋಡೆಯು ಸರಿಯಾಗಿದೆಯೋ ಇಲ್ಲವೋ ಎಂದು ಪರೀಕ್ಷೆ ಮಾಡುವುದಕ್ಕೆ ಬಳಸುತ್ತಾರೆ. ಗುಂಡು ಸುಮಾರು ಎರಡನೂರ ಐವತ್ತು ಗ್ರಾಂ ತೂಕದ್ದಾಗಿದೆ. ಇದು ಗೋಲಾಕಾರವಿದಲ್ಲಿರುತ್ತದೆ.

ತೆಪ್ಪ/ಹರಿಗೋಲು

ನದಿ ಹಾಗೂ ಕೆರೆಗಳಲ್ಲಿ ಮೀನುಗಾರಿಕೆ ಮತ್ತು ನದಿ ದಾಟಲು ಬಳಸುವ ಸಾಧನ. ಸಣ್ಣ ತೆಪ್ಪವು ತಟ್ಟೆಯ ಆಕಾರದಲ್ಲಿ ಸುಮಾರು ಒಂದರಿಂದ ಒಂದೂವರೆ ಅಡಿ ಎತ್ತರವಿರುತ್ತದೆ. ಮೇಲ್ಭಾಗದ ವ್ಯಾಸ ಆರು ಅಡಿ ಇದ್ದು ತಳಭಾಗ ಚಪ್ಪಟೆಯಾಗಿದೆ. ಬಿದಿರು ಅಥವಾ ತಟಿಕೆಯ ಸೀಳುಗಳಿಂದ ಹೆಣೆದು ಅದರ ಹೊರ ಮೈಮೇಲೆ ಪ್ಲಾಸ್ಟಿಕ್ ಚೀಲವನ್ನು ಹೊದಿಸಿ ಚೀಲದ ಮೇಲ್ಭಾಗದಲ್ಲಿ ಡಾಂಬರ್ ಹಾಕಿದ್ದಾರೆ ನೀರು ಒಳಹೋಗದಂತೆ ತಡಯುವುದು ಇದರ ಮುಖ್ಯ ಉದ್ದೇಶ. ಜೋರಾಗಿ ಗಾಳಿ ಬೀಸದ ಎಲ್ಲಾ ನೀರಿನ ತಾಣಗಲ್ಲಿ ಇದು ಸಾಮಾನ್ಯವಾಗಿ ಬಳಕೆಯಾಗುತ್ತದೆ.



ಪುಚ್ಚೂಳಿ

ಅತ್ಯಂತ ಕಿರುತೊರೆ/ಕಿರು ಕಾಲುವೆಗಳಲ್ಲಿ, ಹೊಂಡ/ಕಟ್ಟೆ/ಕೆರೆಗಳಿಂದ ಹರಿಯುವ ನೀರಲ್ಲಿನ ಮೀನುಗಳನ್ನು ಹಿಡಿಯಲು ಬಳಸುವ ಉಪಕರಣ. ವಿಶೇಷವಾಗಿ




ಹತ್ತುಮೀನು ಹಾಗೂ ಏಡಿ ಹಿಡಿಯಲು ಬಳಕೆಯಾಗುತ್ತದೆ. ಇದನ್ನು ಬಿದಿರ ಸೀಳುಗಳಿಂದ ತಯಾರಿಸಲಾಗುತ್ತದೆ. ಇದು ಹಕ್ಕಿಗಳ ಪುಕ್ಕದ ಆಕಾರದಲ್ಲಿ ಇರುವುದರಿಂದ ಇದಕ್ಕೆ ಪುಚ್ಚ+ಕೂಳಿ= ಪುಚ್ಕುಳಿ ಎಂದು ಹೆಸರು. ತೆಂಗಿನ ಕಡ್ಡಿಗಳಿಂದ ಹೆಣೆದು ಇದನ್ನು ರಚಿಸುತ್ತಾರೆ. ಇದರ ಬಾಯಿ ವೃತ್ತಾಕಾರದಲ್ಲಿದ್ದು ಮಧ್ಯೆ ಒಂದು ಕೋಲನ್ನು ಹಿಡಿಕೆಯಾಗಿ ಜೋಡಿಸಲಾಗಿರುತ್ತದೆ. ಹಿಂಭಾಗವನ್ನು ಜೋಡಿಸಿ ಕಟ್ಟಿದಾಗ ಅದು ಹಕ್ಕಿಯ ಪುಕ್ಕದಂತಿರುತ್ತದೆ. ಹರಿಯುವ ನೀರಲ್ಲಿ ಕೂಡಾ ಮೀನು ಹಿಡಿದುಕೊಳ್ಳಲು ಬಳಸಿಕೊಳ್ಳುತ್ತಾರೆ. ಒಂದು ಕೋಲನ್ನು ಇದರ ಮುಂಭಾಗಕ್ಕೆ ಅಡ್ಡವಾಗಿ ಕಟ್ಟುತ್ತಾರೆ. ಕಾಲುವೆಯ ಎರಡು ಬದಿಗಳಿಗೆ ಎರಡು ಗೂಟಗಳನ್ನು ನಾಟಿ ಅವಕ್ಕೆ ಪುಚ್ಕುಳಿಗೆ ಕಟ್ಟಿದ ಅಡ್ಡ ಕಟ್ಟಿಗೆಯನ್ನು ಕಟ್ಟಿ ಮೀನು ಹಿಡಿಯುತ್ತಾರೆ. ಅಂತೆಯೇ ಹಿಂದಿನ ಭಾಗದಲ್ಲಿ ಸಂಗ್ರಹಿತವಾಗುವ ಮೀನುಗಳನ್ನು ಇನ್ನೊಂದು ಚೀಲದಲ್ಲಿ ತುಂಬುವಂತೆ ಹಿಂಭಾಗಕ್ಕೆ ಚೀಲವನ್ನು ಕಟ್ಟುವುದೂ ಇದೆ. ಇತ್ತೀಚೆಗೆ ಪಾರಂಪರಿಕ ಕೆರೆ, ಕಟ್ಟೆ, ಬಾವಿಗಳು ನಿರ್ನಾಮವಾಗುತ್ತಿರುವುದರಿಂದ ಪುಚ್ಕುಳಿಯಂಥ ಸಲಕರಣೆಗಳು ಕಣ್ಮರೆಯಾಗುತ್ತಿವೆ. ಸರಕಾರದ ಪ್ರೋತ್ಸಾಹದಿಂದ ಮೀನು ಸಾಕಣೆ ಹೆಚ್ಚಿ ಮತ್ತೆ ಪುಚ್ಕುಳಿಗಳು ಚಾಲ್ತಿಗೆ ಬರುವ ಸಾಧ್ಯತೆಗಳಿವೆ.

ಪೆಟಾರಿ/ಟ್ರಂಕು



ಬೇರೆ ಬೇರೆ ಗ್ರಾಮೀಣ ಕಸುಬುಗಳವರು ತಮ್ಮ ಪರಿಕರಗಳನ್ನು ಇಟ್ಟುಕೊಂಡು ಹೋಗಲು ಬಳಸುವ ಸಾಧನ. ಇದು ಸುಮಾರು ಹದಿನೇಳುವರೆ ಇಂಚು ಉದ್ದ ಹನ್ನೊಂದೂವರೆ ಇಂಚು ಅಗಲ, ಐದು ಇಂಚು ಎತ್ತರ ಹೊಂದಿದೆ. ಇದಕ್ಕೆ ಮುಚ್ಚುವ ಮತ್ತು ತೆರೆಯುವ ವ್ಯವಸ್ಥೆ ಇದ್ದು ಬೀಗ ಹಾಕುವ ವ್ಯವಸ್ಥೆ ಕೂಡ ಇದೆ. ಮನೆಯಲ್ಲಿ ಬಟ್ಟೆ, ಕಾಗದ ಪತ್ರಗಳನ್ನು ಇಟ್ಟುಕೊಳ್ಳಲು ಬಳಸುತ್ತಾರೆ. ಲೋಹದಿಂದ ತಯಾರಿಸಿದ ಇವು ಈಗಲೂ ಬಳಕೆಯಲ್ಲಿವೆ.

ಬಾತಿ



ಚಮ್ಮಾರರು ತಮ್ಮ ವೃತ್ತಿಗೆ ಸಂಬಂಧಿಸಿದ ಪರಿಕರಗಳನ್ನು ಹಾಕಿಟ್ಟುಕೊಳ್ಳಲು ಬಳಸುವ ಚರ್ಮದ ಚೀಲ. ಇದು ಸುಮಾರು ಒಂದೂವರೆ ಅಡಿ ಉದ್ದ ಒಂದು ಅಡಿ ಅಗಲ ಇದೆ. ಇದನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕೊಂಡೊಯ್ಯಬಹುದು. ಹಿಡಿದುಕೊಳ್ಳಲು ಹಿಡಿಕೆ ಇದೆ. ತಮ್ಮ ಹರಿತವಾದ ಪರಿಕರಗಳನ್ನು ಹಾಕಿಟ್ಟುಕೊಳ್ಳಲು ಇದನ್ನು ಉಪಯೋಗಿಸುತ್ತಾರೆ. ಇದನ್ನು ಚರ್ಮದಿಂದ ತಯಾರಿಸುತ್ತಾರೆ.

ಬಾಚಿ




ಮರದ ತುಂಡುಗಳನ್ನು ಅಗತ್ಯಾನುಸಾರ ಕ್ರಮಬದ್ಧವಾಗಿ ಕೆತ್ತನೆ ಮಾಡಲು ಬಡಗಿಗಳು ಬಳಸುವ ಆಯುಧ. ಬಾಚಿಯು ಆರು ಇಂಚು ಉದ್ದ, ಸುಮಾರು ಮೂರು ಇಂಚು ಅಗಲವಿರುತ್ತದೆ. ಅಲಗಿನ ತುದಿ ಭಾಗವು ಹರಿತವಾಗಿರುತ್ತದೆ. ಹಿಡಿಕೆಯು ಸುಮಾರು ಎರಡು ಅಡಿ ಉದ್ದವಿರುತ್ತದೆ. ಕಬ್ಬಿಣದಿಂದ ಬಾಚಿಯನ್ನು ತಯಾರಿಸಲಾಗುತ್ತದೆ. ಅದಕ್ಕೆ ಮರದ ಹಿಡಿಕೆಯನ್ನು ಹಾಕುತ್ತಾರೆ. ಬಾಚಿಯ ಗಾತ್ರಗಳಲ್ಲಿ ವ್ಯತ್ಯಾಸಗಳಿರುತ್ತವೆ.

ಬಿದಿರ ಕಡ್ಡಿ ಪಾಕೀಟು



ಮಹಿಳೆಯರು ತಮ್ಮ ಅಲಂಕಾರ ಹಾಗೂ ಮುಖಾಲಂಕಾರಕ್ಕೆ(ಮೇಕಪ್‌ಗೆ) ಸಂಬಂಧಿಸಿದ ವಸ್ತುಗಳನ್ನು ಇಟ್ಟುಕೊಳ್ಳಲು ಬಳಸುತ್ತಿದ್ದ ಸಾಧನ. ಬೊಟ್ಟು, ಕಾಡಿಗೆ, ಪೌಡರ್, ಇತ್ಯಾದಿ ವಸ್ತುಗಳನ್ನು ಇಟ್ಟುಕೊಳ್ಳಬಹುದು. ಆಯತಾಕಾರದಲ್ಲಿರುವ ಈ ಪರ್ಸ್/ಪಾಕೀಟಿನ ಎತ್ತರ ಐದು ಇಂಚು, ಉದ್ದ ಅರ್ಧ ಅಡಿ, ದಪ್ಪ ಎರಡು ಇಂಚು ಇದೆ. ಮೇಲ್ಭಾಗದಲ್ಲಿ ಮುಚ್ಚಳವಿದ್ದು ಪರ್ಸ್‌ನ ಕಾಲು ಭಾಗದಷ್ಟಿವೆ. ಬಿದಿರಿನ ಕಡ್ಡಿಗಳಿಂದ ಸುಂದರವಾಗಿ ಈ ವಸ್ತುವನ್ನು ಹೆಣೆದಿದ್ದಾರೆ. ಬಹಳ ಹಿಂದಿನಿಂದಲೂ ಇಂಥ ಪಾಕೀಟುಗಳು ಬಳಕೆಯಲ್ಲಿದ್ದವು. ಆಧುನಿಕತೆಯ ಈ ಕಾಲದಲ್ಲಿ ಈ ದೇಸಿ ಅಲಂಕಾರ ಸಾಮಗ್ರಿಗಳು ಕಣ್ಮರೆಯಾಗುತ್ತಿದೆ. ಅದರ ಸ್ಥಾನವನ್ನು ಪಾಲಿಸ್ಟರ್, ಬಟ್ಟೆ, ಚರ್ಮದ ಪರ್ಸಗಳು ಆವರಿಸಿವೆ.

ಬೈರಿಗೆ



ಕೊರಡುಗಳಿಗೆ ರಂಧ್ರ ಕೊರೆಯಲು ಬಳಸುವ ವಸ್ತು. ಇದು ಸುಮಾರು ಒಂದು ಅಡಿಯಿಂದ ಎರಡು ಅಡಿ ಉದ್ದವಿದೆ. ಇದರ ಮೇಲ್ಭಾಗದಲ್ಲಿ ಒಂದು ಬೇರಿಂಗ್ ಜೋಡಿಸಿದ್ದಾರೆ. ಮಧ್ಯದಲ್ಲಿ ಹಗ್ಗ ಸರಿಯದಂತೆ ಗೀರುಗಳನ್ನು ಮಾಡಿ ಕೆಳಭಾಗದಲ್ಲಿ ರಂಧ್ರ ಕೊರೆಯುವುದಕ್ಕೆ ಸುಮಾರು ಅರ್ಧ ಅಡಿ ಉಳ್ಳ ಚೂಪು ಕಬ್ಬಿಣವನ್ನು ಹಾಕಿದ್ದಾರೆ. ಒಬ್ಬನು ಬೇರಿಂಗಿನ ಇದರ ಮೇಲ್ಭಾಗವನ್ನು ಹಿಡಿದುಕೊಂಡರೆ ಮತ್ತೊಬ್ಬನು ಹಗ್ಗದಿಂದ ಹಿಂದಕ್ಕೂ ಮುಂದಕ್ಕೂ ಎಳೆದಾಗ ಕೊರಡಲ್ಲಿ



ರಂಧ್ರವಾಗುತ್ತದೆ. ಇದನ್ನು ಜಾಲಿ ಮರ ಮತ್ತು ಲೋಹದಿಂದ ತಯಾರಿಸಿದ್ದಾರೆ. ನಾನಾ ತರದ ಬೈರಿಗೆಗಳು ಇವೆ. ಇತ್ತೀಚಿಗೆ ಯಂತ್ರ ಬೈರಿಗೆಗಳು, ಡ್ರಿಲ್ ಮಿಷನ್‌ಗಳು ಬಂದದ್ದರಿಂದ ಇದರ ಬಳಕೆ ಕಡಿಮೆಯಾಗಿದೆ.

ಭರ್ಚಿ



ಪ್ರಾಣಿಗಳನ್ನು ಬೇಟೆಯಾಡಲು ಮುಖ್ಯವಾಗಿ ಬಳಕೆಯಾಗುವ ಒಂದು ಸಾಧನ. ಕೆಲಮೊಮ್ಮೆ ಆತ್ಮರಕ್ಷಣೆಗಾಗಿಯೂ ಇದು ಬಳಕೆಯಾಗುತ್ತದೆ. ಸುಮಾರು ಆರರಿಂದ ಎಂಟು ಅಡಿಗಳಷ್ಟು ಉದ್ದದ ಈ ಆಯುಧಕ್ಕೆ ಕಬ್ಬಿಣದ ದಪ್ಪ ತಗಡಿನ, ಸುಮಾರು ಒಂದುವರೆ ಅಡಿ ಉದ್ದದ, ತುದಿ ಚೂಪಾಗಿರುವ ಇನ್ನೊಂದು ಸಲಕರಣೆಯು ಭದ್ರವಾಗಿ ಜೋಡಿಸಲ್ಪಟ್ಟಿರುತ್ತದೆ. ಈ ಸಲಕರಣೆಯ ಬುಡಭಾಗವು ಕೊಳವೆಯಾಕಾರದಲ್ಲಿ ನಿರ್ಮಿತವಾಗಿದ್ದು ಮರದ ಉದ್ದದ ಹಿಡಿಗೆ ಭದ್ರವಾಗಿ ಜೋಡಿಸುವುದಕ್ಕೆ ಅನುಕೂಲವಾಗುವಂತಿರುತ್ತದೆ. ಭರ್ಚಿಯ ತುದಿಯಲ್ಲಿನ ಕಬ್ಬಿಣದ ಭಾಗವು ಸು. ಮೂರು ಇಂಚು ಅಗಲದ ಅಲಗಿನಿಂದ ನಿರ್ಮಾಣಗೊಂಡಿರುತ್ತದೆ. ಭರ್ಚಿಯನ್ನು ಎರಡು ಕೈಗಳನ್ನು ಬಳಸಿಕೊಂಡು ಉಪಯೋಗಿಸುತ್ತಾರೆ. ಬೇಟೆಯಲ್ಲಿ ಒಂದೇಕೈಯಲ್ಲಿ ಹಿಡಿದು ಎಸೆಯುವುದು ಹೆಚ್ಚು ಪರಿಣಾಮಕಾರಿ. ರಾತ್ರಿಹೊತ್ತು ಹೊಲ, ತೋಟಗಳ ಕಾವಲಿಗೆ ಹೋಗುವಾಗ ಭರ್ಚಿ ಹೆಚ್ಚು ಉಪಯೋಗವಾಗುತ್ತದೆ. ಅಂತೆಯೇ ಮನೆಯ ಥಾವಣಿ, ಜಂತೆ ಮುಂತಾದೆಡೆ ಇಲ್ಲವೇ ಇತರೆಡೆ ಹಾವು ಮುಂತಾದ ಅಪಾಯಕಾರಿ ಪ್ರಾಣಿಗಳನ್ನು ಕೊಲ್ಲಲು ಗೃಹಬಳಕೆಯ ಸಾಧನವಾಗಿಯೂ ಬಳಕೆಯಾಗುತ್ತದೆ. ಉತ್ತರ ಕರ್ನಾಟಕದ ಹಳ್ಳಿಯ ಎಲ್ಲ ಮನೆಗಳಲ್ಲಿಯೂ ಭರ್ಚಿಯು ಒಂದು ಅತ್ಯವಶ್ಯಕ. ಸಾಮಾನ್ಯವಾಗಿ ಇದಕ್ಕೆ ಕರಿಮತ್ತಿ ಸಾಗುವಾನಿ ಮುಂತಾದ ಮರಗಳ ಬಳಕೆಯಾಗುತ್ತವೆ.



ಭರ್ಚಿಗಳಲ್ಲಿ ಇನ್ನೂ ಕೆಲವು ಪ್ರಕಾರಗಳಿರುತ್ತವೆ. ಸಣ್ಣ ಗಾತ್ರದ ಇನ್ನೊಂದು ಭರ್ಚಿಯು ಸುಮಾರು ನಾಲ್ಕು ಅಡಿ ಉದ್ದವಿರುತ್ತದೆ. ಗಾತ್ರಕ್ಕೆ ಅನುಗುಣವಾಗಿ ಇದರ ಹಿಡಿಕೆ ಕೂಡ ಚಿಕ್ಕದೇ. ಸುತ್ತಳತೆ ಸುಮಾರು ಒಂದೂವರೆಯಿಂದ ಎರಡೂವರೇ ಇಂಚು ಅಷ್ಟೆ. ಅತಿ ಚಿಕ್ಕ ಗಾತ್ರದ ಭರ್ಚಿಗೆ ಕೈ ಭರ್ಚಿ ಎಂದು ಹೆಸರು. ಇದು ಒಟ್ಟು ಸುಮಾರು ಒಂದಡಿಯಷ್ಟು ಉದ್ದವಿರುತ್ತದೆ, ಇದರ ಕಬ್ಬಿಣದ ಭಾಗ ಮತ್ತು ಮರದ ಹಿಡಿಕೆ ಸಮ ಉದ್ದವಾಗಿರುತ್ತದೆ. ಕೈ ಭರ್ಚಿಯನ್ನು ಸೊಂಟದಲ್ಲಿ ಕೂಡ ಸಿಕ್ಕಿಸಿಕೊಳ್ಳಬಹುದು. ಸಣ್ಣ ಭರ್ಚಿ ಮತ್ತು ಕೈ ಭರ್ಚಿಗಳನ್ನು ಬಳಸಲು ಒಂದೇ ಕೈ ಸಾಕು. ಓಡುತ್ತಿರುವ ಪ್ರಾಣಿಗಳಿಗೆ ಎಸೆದು ಕೊಲ್ಲುವುದಕ್ಕೆ/ಬೇಟೆಯಾಡುವುದಕ್ಕೆ ಸಣ್ಣ ಭರ್ಚಿಯು ಬಳಕೆಯಾಗುತ್ತದೆ. ಹಿಂದಿನ ಕಾಲದ ಗ್ರಾಮ ಜೀವನದಲ್ಲಿ ತಳವಾರರು ತಮ್ಮ ವೃತ್ತಿಯ ಸಂದರ್ಭದಲ್ಲಿ ಭರ್ಚಿಗಳನ್ನು ಹಿಡಿದು ತಿರುಗಾಡುತ್ತಿದ್ದರು.

ಮೀನು ಕೂಳಿ



ಕಿರುಪ್ರಮಾಣದ ಮೀನು ಬೇಟೆಗೆ ಬಳಸುವ ಸಾಧನ. ಇದನ್ನು ಇರಿಗೂಣೆ ಎಂದು ಕರೆಯುತ್ತಾರೆ. ಸುಮಾರು ಮೊಣಕಾಲೆತ್ತರ ನಿಂತ ನೀರಲ್ಲಿ ಇದನ್ನು ಫಕ್ಕನೆ ಮುಳುಗಿಸಲಾಗುತ್ತದೆ. ಇದರ ತಳಭಾಗವು ಸುಮಾರು ಒಂದೂವರೆ ಅಡಿ ವ್ಯಾಸದ್ದಾಗಿದ್ದು ಮೇಲ್ಭಾಗವು ಕಿರಿಯ ಗಾತ್ರದ್ದಾಗಿರುತ್ತದೆ. ಮೇಲ್ಭಾಗವು ಸುಮಾರು ಒಂಬತ್ತು/ಹತ್ತು ಇಂಚು ವ್ಯಾಸವಿದ್ದು ಒಳಗೆ ಕೈ ತೂರಿಸಿ ಕೂಣಿಯಲ್ಲಿ ಬಂಧಿತವಾದ ಮೀನನ್ನು ಹಿಡಿಯಲಾಗುತ್ತದೆ.

ಮೀನಿನ ಗಾಳ



ಕೆರೆ, ಕಟ್ಟೆ, ನದಿ, ಸರೋವರಗಳಲ್ಲಿ ಮೀನು ಹಿಡಿಯಲು ಬಳಸುವ ಸಾಧನ. ಸುಮಾರು ಹತ್ತು ಮೀಟರ್ ಉದ್ದವಿರುವ ಗಟ್ಟಿ ದಾರವನ್ನು ಸುಮಾರು ಎರಡುವರೆ ಅಡಿ ಉದ್ದದ ಬಿದಿರಿನ ಕೋಲಿಗೆ ಕಟ್ಟುತ್ತಾರೆ. ದಾರದ ತುದಿಗೆ ಉಕ್ಕಿನ ಕೊಂಡಿಯನ್ನು(ಗಾಳ) ಕಟ್ಟುತ್ತಾರೆ. ಈ ಕೊಂಡಿಯ ಮುಂದಿನ ತುದಿಯು ಚೂಪಾಗಿದೆ. ಇದಕ್ಕೆ ಎರೆಹುಳು, ಪುಟ್ಟಮೀನು, ಕರಿದ ತಿಂಡಿಗಳು ಮುಂತಾದ ಎರೆಗಳನ್ನು ಸಿಕ್ಕಿಸಿ ನಂತರ ಕೊಕ್ಕೆಸಮೇತ ದಾರವನ್ನು ನೀರಿನಲ್ಲಿ ಬಿಡುತ್ತಾರೆ. ದಾರದ ಅರ್ಧಭಾಗಕ್ಕೆ ಬೆಂಡಿನ ತುಂಡೊಂದನ್ನು ಕಟ್ಟಿರುತ್ತಾರೆ. ಎರೆಯನ್ನು ತಿನ್ನಲು ಬಾಯಿಹಾಕಿದಾಗ ಮೀನು ಗಾಳದಲ್ಲಿ ಸಿಕ್ಕಿಕೊಳ್ಳುತ್ತದೆ. ಮೀನು ಗಾಳಕ್ಕೆ ಸಿಕ್ಕಿದಾಗ ಬೆಂಡು ಮುಳುಗಿಹೋಗುತ್ತದೆ. ಆಗ ಗಾಳವನ್ನು ಮೇಲಕ್ಕೆ ಎತ್ತುತ್ತಾರೆ. ಈ ಗಾಳವನ್ನು ಮೀನುಗಾರರು ಬಳಸುತ್ತಾರೆ. ಹಾಗೂ ಹವ್ಯಾಸಿ ಮೀನು ಬೇಟೆಗಾರರು ಬಳಸುತ್ತಾರೆ.

ಮೀನು ಬುಟ್ಟಿ



ನಿಂತನೀರಲ್ಲಿ ಮೀನು, ಏಡಿ ಮುಂತಾದುವನ್ನು ಹಿಡಿಯಲು ಬಳಸುವ ಸಾಮಗ್ರಿ. ಇದರ ಒಳಗೆ ಒಂದಿಷ್ಟು ಹಸಿ ಸೆಗಣಿ, ಆಹಾರ ಪದಾರ್ಥಗಳನ್ನು ತುಂಬಿ, ನಿಂತನೀರಿನಲ್ಲಿ ಇದನ್ನು ಮುಳುಗಿಸಿಡುತ್ತಾರೆ. ಸಾಮಾನ್ಯವಾಗಿ ಇದನ್ನು ಸಾಯಂಕಾಲ ನೀರಲ್ಲಿ ಮುಳುಗಿಸಿಟ್ಟು ಮರುದಿನ ಮುಂಜಾನೆ ನೀರಿನಿಂದ ಎತ್ತುವುದು ರೂಢಿ. ಆಗ ಇದರೊಳಗಿನ ಆಹಾರವನ್ನು ತಿನ್ನಲು ಬಂದ ಮೀನು ಏಡಿಗಳು ಅದರಲ್ಲಿ ಸಿಕ್ಕಿಹಾಕಿಕೊಂಡಿರುವುದು ಕಾಣುತ್ತದೆ. ಏಕೆಂದರೆ ಇದನ್ನು ನೀರಿನಲ್ಲಿ ಅಡ್ಡ ಮಲಗಿಸಿ ಇರಿಸಿದಾಗ ಅದರ ತಳದಲ್ಲಿ ಮೀನು ಏಡಿಗಳು ಒಳಪ್ರವೇಶಿಸಲು ಅನುಕೂಲವಾಗುವಂತೆ ಒಂದು ರಚನೆಯಿದ್ದು ಅದರ



ಮೂಲಕ ಒಳಗೆ ಪ್ರವೇಶಿಸಿದ ಮೀನು ಏಡಿಗಳು ಅದೇ ದಾರಿಯಲ್ಲಿ ಮರಳಿಬಾರದಂತೆ ರಚನೆಯ ತುದಿಯಲ್ಲಿ ಚೂಪಾದ ಎಂಟು–ಹತ್ತು ಉಲಿಬರಲು(ಕಡ್ಡಿ)ಗಳು ಒಂದೆಡೆ ಸೇರಿಕೊಳ್ಳುತ್ತವೆ. ನೀರಿನಲ್ಲಿ ಈ ಬುಟ್ಟಿಯನ್ನು ಅತ್ತಿತ್ತ ಸರಿಯದಂತೆ ತಡೆದಿಡಲು ಒಂದು ಕೋಲನ್ನು ಇದಕ್ಕೆ ಕಟ್ಟಿ ಕೋಲಿನ ತುದಿಯನ್ನು ಕೆಸರಲ್ಲಿ ಭದ್ರವಾಗಿ ನಾಟಲಾಗುತ್ತದೆ ಮತ್ತು ಬುಟ್ಟಿಯು ಎಲ್ಲಿದೆಯೆಂದು ಗುರುತು ಹಿಡಿಯಲು ಕೂಡ ಈ ಕೋಲು ಸಹಾಯಕವಾಗುತ್ತದೆ. ಇತ್ತೀಚೆಗೆ ಕೃಷಿ ಹೊಂಡಗಳು ಮುಚ್ಚುಗಡೆಯಾಗುತ್ತಿರುವುದರಿಂದ ಈ ತರಹದ ಮೀನುಗಾರಿಕೆ ಕೂಡ ಕಡಿಮೆಯಾಗುತ್ತಿದೆ.

ರಂಪಿಗೆ



ಪಾದರಕ್ಷೆಗಳನ್ನು ತಯಾರಿಸುವಾಗ ಚರ್ಮ, ದಾರ ಇತ್ಯಾದಿಗಳನ್ನು ಕತ್ತರಿಸಿಕೊಳ್ಳಲು ಬಳಸುವ ಉಪಕರಣ. ಇದು ತೆಳುವಾದ ತಗಡಿನಿಂದ ನಿರ್ಮಾಣವಾಗಿದ್ದು ಇದರ ಅಲಗು ಅರ್ಧ ಚಂದ್ರಾಕಾರದಲ್ಲಿರುತ್ತದೆ. ಇದನ್ನು ಹಿಡಿದುಕೊಳ್ಳಲು ಮೇಲ್ಭಾಗದಲ್ಲಿ ಒಂದು ಹಿಡಿ ಇರುತ್ತದೆ. ಈ ಹಿಡಿಯು ಅಲಗಿನ ತಗಡಿನ ಭಾಗವೇ ಆಗಿರುತ್ತದೆ. ರಂಪಿಗೆಗಳ ಗಾತ್ರದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸವಿರುತ್ತದೆ. ಇದು ತುಂಬ ಹರಿತವಾಗಿದೆ. ಪಾದರಕ್ಷೆಗಳು ಕಾರ್ಖಾನೆಗಳಲ್ಲಿ ತಯಾರಾಗುತ್ತಿರುವ ಇಂದಿನ ದಿನಗಳಲ್ಲಿ ಸಮಗಾರರ ರಂಪಿಗೆಯು ನಿಧಾನವಾಗಿ ಮರೆಯಾಗುತ್ತಿದೆ.

ಲಗಾಮು



ಕುದುರೆಗಳನ್ನು ನಿಯಂತ್ರಿಸಲು ಬಳಸುವ ಸಾಧನ. ಇದು ಸುಮಾರು ಆರರಿಂದ ಏಳು ಅಡಿ ಉದ್ದವಿದ್ದು ಸುಮಾರು ಅರ್ಧದ ಬಳಿಕ ಎರಡಾಗಿ ವಿಭಾಗಗೊಂಡು ತುದಿಯಲ್ಲಿ ಪರಸ್ಪರ ಸಿಕ್ಕಿಸಿರುವ ಎರಡು ಕಬ್ಬಿಣದ ಪುಟ್ಟದಿಂಡುಗಳನ್ನು ಹೊಂದಿರುತ್ತದೆ. ಈ ಕಬ್ಬಿಣದ ರಚನೆಗಳು ಸುಮಾರು ಎರಡು ಇಂಚು ಉದ್ದವಿರುತ್ತವೆ. ಇವುಗಳ ಇನ್ನೆರಡು ತುದಿಗೆ ಸುಮಾರು ಎರಡು ಇಂಚು ವ್ಯಾಸದ ಉಂಗುರ(ರಿಂಗ್)ಗಳನ್ನು ಜೋಡಿಸಿರುತ್ತಾರೆ. ಕಬ್ಬಿಣದ ಕಿರುದಿಂಡುಗಳು ಕುದುರೆಯ ಬಾಯೊಳಗೆ ಹೋಗಿರುತ್ತವೆ. ಲಗಾಮಿನ ಹಗ್ಗಗಳನ್ನು ಚರ್ಮದ ಮಿಣಿಗಳಿಂದಲೂ ನೂಲನ್ನು ಚೆನ್ನಾಗಿ ಹೆಣೆದ ಹಗ್ಗಗಳಿಂದಲೂ ರಚಿಸುತ್ತಾರೆ. ಬಾಯೊಳಗೆ ಸಲಕರಣೆ ಅಳವಡಿಸಿ ಪ್ರಾಣಿಗಳನ್ನು ನಿಯಂತ್ರಿಸಲು ಬಳಸುವ ಏಕೈಕೆ ಸಾಧನ ಲಗಾಮು ಮಾತ್ರ.



ಸೊಳ/ಸ್ವಳ



ಮಡಕೆ ಮಾಡುವಾಗ ಅದಕ್ಕೆ ನಿರ್ದಿಷ್ಟ ಆಕಾರ ತರಲು ಬಳಸುವ ಒಂದು ಸಾಧನ. ಇದು ಸುಮಾರು ನಾಲ್ಕರಿಂದ ಐದು ಇಂಚುಗಳಷ್ಟು ಅಗಲ ಉದ್ದಗಳಿರುವ ಮರದ ಹಲಗೆಯ ತುಂಡು. ಇದು ಒಂದು ಪುಟ್ಟ ಹಿಡಿಕೆಯನ್ನೊಳಗೊಂಡಿರುತ್ತದೆ. ಹಿಡಿಕೆಯೂ ಸೇರಿ ಸುಮಾರು ಎಂಟರಿಂದ ಹತ್ತು ಇಂಚು ಉದ್ದವಿರುತ್ತದೆ. ಸ್ವಳದ ಹಲಗೆಯು ಸುಮಾರು ಒಂದು ಒಂದೂವರೆ ಇಂಚು ದಪ್ಪವಿರುತ್ತದೆ. ಮಡಕೆಯು ಹಸಿಯಿದ್ದು ನಿರ್ಮಾಣಗೊಳ್ಳುತ್ತಿರುವ ಸಂದರ್ಭದಲ್ಲಿ ಅದರ ಒಳಭಾಗದಲ್ಲಿ ಆಸರೆಯಾಗಿ 'ಬಡೆಕಲ್ಲು' ಇರಿಸಿಕೊಂಡು ಹೊರಗಿನಿಂದ ಆಯವರಿತು ಸ್ವಳದಿಂದ ತಟ್ಟುತ್ತ ಮಡಕೆಗೆ ಉದ್ದೇಶಿತ ಆಕಾರ ನಿಡಲಾಗುತ್ತದೆ. ಸ್ವಳವನ್ನು ಹಗುರವಾದ ಅತ್ತಿಯಂಥ ಮರಗಳಿಂದ ನಿರ್ಮಿಸಿಕೊಳ್ಳುತ್ತಾರೆ.



ಹಗ್ಗ ಹೊಸೆಯುವ ಮಣೆ



ತೆಂಗಿನ ನಾರು, ರಕ್ಕಸಬಳ್ಳಿ ನಾರು, ಪುಂಡೆನಾರು ಮುಂತಾದ ನಾರಿನಿಂದ ಹಗ್ಗ ಹೊಸೆಯುವುದಕ್ಕೆ ಬಳಸುವ ಪರಿಕರ. ಸುಮಾರು ಒಂದು ಅಡಿ ಉದ್ದವಿರುತ್ತದೆ. ಇದರ ಮಧ್ಯಭಾಗವು ವೃತ್ತಾಕಾರದಲ್ಲಿದ್ದು ಸುಮಾರು ಒಂದು ಅಡಿ ಸುತ್ತಳತೆಯನ್ನು ಹೊಂದಿರುತ್ತದೆ. ಇದರಲ್ಲಿ ಒಂದು ಇಂಚು ಸುತ್ತಳತೆಯ ಮೂರು ರಂಧ್ರಗಳಿರುತ್ತವೆ. ಮಣೆಯ ಎರಡು ತುದಿಗಳಲ್ಲಿ ಹಿಡಿಕೆಗಳಿದ್ದು ಇವುಗಳನ್ನು ಹಿಡಿದುಕೊಂಡು ಹಗ್ಗವು ಹುರಿ ಬೀಳುವಂತೆ ತಿರುವಲಾಗುತ್ತದೆ. ಈ ಸಾಧನವನ್ನು ಸಾಗುವಾನಿ ಮರದಿಂದ ತಯಾರಿಸಿದ್ದಾರೆ.

ಬೇಸಾಯ

ಅಂಗಡ
ಅಟ್ಟ/ಮ್ಯಾಟ
ಆಲೆಮನೆ ಕತ್ತಿ (ಹನುಮಂತ)
ಉಡಿ
ಎಡೆಕುಂಟೆ
ಏತರಾಟೆ/ಕಪ್ಲಿರಾಟೆ
ಕಂಗ್ಲಿ
ಕತ್ತಿ
ಕದರು
ಕಲ್ಲಿ/ಜಾನುವಾರಗಳ ಮೈಯುಜ್ಜುವ ಕಲ್ಲಿ
ಕುರ್ಚಿಗೆ
ಕುಡುಗೋಲು
ಕೂರಿಗೆ ತಾಳು
ಕೂರಿಗೆ ಬಟ್ಟಲು
ಕೊಡಲಿ
ಗ್ವಾರಿಮಣೆ/ನೆಲ್ಲುಕೋರಿ
ಗುದ್ದಿ
ಗೂಡೆ/ನೀರೆತ್ತುವ ಬುಟ್ಟಿ
ಚಕ್ಕಡಿಗಾಲಿ
ಚಕ್ಕಡಿಗುಂಭ/ಬಂಡಿಗಡ್ಡಿ
ಜಂತಕುಂಟೆ
ಜತಿಗೆ/ಪಟಗಾಣಿ
ತತ್ರಾಣಿ
ನೆರೆಕೋಲು/ಒಕ್ಕುಲು ಕೋಲು/ಒಕ್ಕಣೆ ಕೋಲು
ನೊಗ
ಪಿಕಾಸಿ/ಗುದ್ದಲಿ
ಬಂಕ
ಬಂಟ
ಬಂಡಿಗಾಲಿ
ಬಡೆಮಣೆ/ಕೊಡತಿ/ಕೊಡಚಿ
ಬ್ಯಾಕೋಲು/ಕವೆಗೋಲು
ಬಾಯಿಕುಕ್ಕೆ/ಬಾಯಿಕಲ್ಲಿ
ಬಾರ್‌ಕೋಲು
ಬುಕ್ಕ/ಶೆಡ್ಡಿಬುಕ್ಕ
ಬೆಲ್ಲದ ಬಂಡಿಗಾಲಿ
ಮಚ್ಚು
ಮುಂದೂಟಿ/ನೊಗಸುತ್ತು
ಮೇಳಿ (ರಂಟೆ ಮೇಳಿ)
ರಂಟೆ/ಮಡಕೆ
ರೋಣಗಲ್ಲು/ರೋಲ್‌ಗುಂಡು
ವರ್ಜಿಮಿಣಿ

ಹತ್ತಿರಾಟಿ
ಹರ್ತಿಕುಡ/ಕುಂಟೆಕುಡ
ಹಾಳೆಕೊರೆಯುವ ಕುಡಗೋಲು
ಹೆಂಟೆಕೊಡತಿ

ಮನೆಬಳಕೆ

ಅಡಕತ್/ಅಡಕತ್ತರಿ
ಅಡಕೆ ಬುಟ್ಟಿ
ಅಡ್ಡಣಿಗೆ
ಅರನಾಳಿಗೆ/ಹೊರನಳಿಗೆ
ಇಲಿಬೋನು/ಬಲೆ
ಈರುಳ್ಳಿ ಬುಟ್ಟಿ
ಈಳಿಗೆಮಣೆ/ಮೆಟ್ಟುಕತ್ತಿ
ಊರುಗೋಲು
ಎತ್ತಿನ ಕೊಂಬಿನ ನಶ್ಯಡಬ್ಬಿ
ಎರ್ಮ್ಳು/ಹೆರೆಮಣೆ
ಒನಕೆ
ಒರಳುಕಲ್ಲು
ಔಂಗು ಗಡಿಗೆ
ಕರ್ಜಿಕಾಯಿ ಒತ್ತೊಳ್ಳು
ಕಡಬತ್ ಕಲ್ಲು
ಕಡೆಗೋಲು/ಮಂತು
ಕಲ್ಬಟ್ಟಿ/ಕಲ್ಪಟ್ಟಿ
ಕಲ್ಲು ಕುಡಿಕೆ
ಕಲ್ಲು ಚಟಿಗೆ
ಕಲ್ಲುಬಾನಿ/ಕಲ್ಬಾನಿ
ಕಾಗದದ ಬುಟ್ಟಿ/ರದ್ದಿಬುಟ್ಟಿ
ಕಾಗಡಿ/ಕಾಗ್ಡಿ
ಕಾಲುದೀಪ/ದೀಪದ ಕಾಲು
ಕ್ವಿಂಟಾಲ್ ಬುಟ್ಟಿ/ಗೂಡೆ
ಕುಟಾಣಿ/ಕುಟ್ನಿ
ಕುಂದಣಿಗೆ
ಕೆರ್ಸಿ/ಗೆರಸೆ
ಕೈ ಪೆಟ್ಟಿಗೆ/ಆಭರಣ ಪೆಟ್ಟಿಗೆ
ಕೊಣಮಿಗೆ
ಗಂಧ ತೇಯುವ ಕಲ್ಲು/ಸಾಣೆಕಲ್ಲು
ಗುಳಬುಟ್ಟಿ
ಗೂಡೆ/ಎಣ್ಣೆಬು(ಪು)ಟ್ಟಿ
ಚಂಚಿ/ಸಂಚಿ
ಚಕ್ಕುಲಿ ಒತ್ತೊಳ್ಳು/ಒತ್ತೊರಳು
ಚಿಬ್ಲು/ಚಿಬ್ಲಿ
ಟೊಪ್ಪಿಗೆ
ತಾಬಂಡಿ
ತೀಡೋಗಣೆ/ಬೇಳೆಗುಂಡು

ತುಪ್ಪದ ಕುಡಿಕೆ–ಚಟಿಗೆ
ತವೆ/ಹೆಂಚು
ತೊಟ್ಟಿಲು
ತೊರಳಿಕಲ್ಲು/ತೊಳಲಿಕಲ್ಲು
ದಿನಸಿ ಬಟ್ಟಲು
ದೀಪದ ಗೊಗ್ಗೆ
ದೋಸೆ ಮುಚ್ಚಳ
ನಾಕರಬಟ್ಲು
ನಿಂಬೆ ಒತ್ತೊಳ್ಳು
ನೆಲುವು/ಸಿಕ್ಕ
ಪಡ್ಡಿನ ಹೆಂಚು/ಪಡ್ಡಂಚು
ಪುರಾತನ ಇಟ್ಟಿಗೆ
ಬಟ್ಟೆ ಗೂಟ
ಬಾಣಂತಿ ಕತ್ತಿ
ಬಾದ್ಲ(ಬಾದಾಳ)
ಬಾನಸಾಲು/ಅಡಕಲು ಗಡಿಗೆಗಳು
ಬಾರಾಗೂಟ/ಗಿಳಿಗೂಟ
ಬಾಳಿ/ಬಾಳೆ
ಬೀಸುವ ಕಲ್ಲು/ಬೀಸೋಗಲ್ಲು
ಬುಜುಣಿಗೆ ಬುಟ್ಟಿ
ಬೇಳೆ ಒಡೆಯುವ ಬೀಸೋಕಲ್ಲು
ಭಾರಕಲ್ಲು
ಮಣ್ಣಿನ ಮಗಿ
ಮಡ್ಡೊನಕೆ/ಮೊಡ್ಡೊನಕೆ
ಮಣ್ಣಿನ ಕೊಡ/ಪಟ್ಟಿಕೊಡ
ಮಣ್ಣಿನ ತಟ್ಟೆ
ಮರದ ಒರಳು/ಬಡ್ಡೆ ಒರಳು
ಮರದ ನಶ್ಯ ಡಬ್ಬಿ
ಮರದ ಬಾಗಿಲು
ಮಸಿದವತಿ
ಮುದ್ದೆಬಟ್ಲು/ಕೈಬಟ್ಟಲು
ಮೊರ/ಗೆರೆಸೆ
ಲಾಟೀನು/ಲಾಟಾಣ
ವಾಡೆ/ವಾಡೇವು
ಸಾಣಿಗೆ
ಸಿಂಬಿ(ಬೆ)
ಸುಣ್ಣಕಾಯಿ
ಶ್ಯಾವಿಗೆ ಒತ್ತೊಳ್ಳು
ಶ್ಯಾವಿಗೆ ಮಣೆ
ಹಳೇಬೀಗಗಳು/ಕೊಲ್ಲಾಪುರದ ಬೀಗಗಳು
ಹುಟ್ಟು
ಹೂಜಿ

ಆರಾಧನೆ

ಅಲ್ಲಿಪಿಲ್ಲಿಗಿಂಡಿ/ಅಲ್ಲೆಪಿಲ್ಲೆಗಿಂಡಿ
ಆಂಜನೇಯ ವಿಗ್ರಹ
ಊದುಬತ್ತಿ ಸ್ಟಾಂಡ್
ಎಣ್ಣೆಕಾಯಿ
ಎಳೆಗೌರಮ್ಮನ ಮೂರ್ತಿ
ಕುಂಕುಮ ಭರಣಿ/ಬಟ್ಲು
ಕೂರಿಗೆವ್ವ
ಗಂಡುಗೊಡಲಿ
ಗುಗ್ಗುಳ ಕೊಡ
ಗುಳ್ಳವ್ವನ ಬಾಗಿಲು
ಚೊಂಗ್ಯಾನ ಮಣೆ/ಚೊಂಗ್ಯೆ ಮಣೆ
ತೂಗುದೀಪ
ಡೋಣಿ
ದಂಡ/ಯೋಗದಂಡ
ದ್ವಿಮುಖ ಕಾಮಧೇನು
ದೇವರ ಚೌಕಿ
ದೇವರ ಪೀಠ
ದೊಣ್ಣೆಪ್ಪ
ನಾಮದಯಾ
ಮರದ ನಾಗರಹಾವು
ಮರದ ಸುತ್ತಿಗೆ/ಜಾಗಟಿ ಸುತ್ತಿಗೆ
ಲಕ್ಷ್ಮೀಕೊಡ
ವ್ಯಾಸಪೀಠ
ವಿಭೂತಿ ಕರಡಿಗೆ/ಭಸ್ಮದ ಕರಡಿಗೆ
ಸರಸ್ವತಿ ವಿಗ್ರಹ
ಶಸ್ತ್ರ
ಶಂಖ
ಹಣತೆ
ಹರಕೆ ತೊಟ್ಟಿಲು
ಹಾಸಕ್ಕಿ ಕಲ್ಲು/ತೊಳಲಿ ಕಲ್ಲು
ಹೂಬುಟ್ಟಿ
ಹೂವಾರತಿ/ಆರತಿ ತಟ್ಟೆ

ಅಲಂಕಾರ

ಅಂಗೂಟ
ಕನ್ನಡಿ ಪೆಟ್ಟಿಗೆ
ಕಾಡುಕೋಣದ ಕೋಡು
ಕುಲಾವಿ/ಕುಲಾಯಿ
ಕೃಷ್ಣಚಕ್ರ
ಕೋಡಣಸು/ಕೊಡಂಚು
ಗಣ್ಣೋ
ಗಾಜಿನ ಸೀಸೆ

ಗುಂಗ್ರೋ
ಚಟಿಗೆ / ಕಾಲುಂಗುರ
ಚಿರತೆಯ ಮುಖ
ಜರಿ ಪಟಗ
ದಿಕಾಂಬ್ಲಿ ಬೀಜ
ಬಲಿಯಾ
ದೃಷ್ಟಿಗೊಂಬೆ
ಮರದ ಸರಪಳಿ
ಮುತ್ತಿನಸರ
ಸಾರಂಗದ ಕೊಂಬು
ಸ್ವಾಗತ ಮೂರ್ತಿ
ಹಣೆಕಟ್ಟು

ಆಟ/ಆಟಿಕೆ

ಅಳುಗುಳಿಮಣೆ/ಚೆನ್ನೆಮಣೆ
ಆನೆಗೊಂಬೆ
ಆನೆಗೊಂಬೆ
ಕಲ್ಪಟ್ಟಿ
ತತ್ರಾಣಿ
ದೂಡುಬಂಡಿ
ಬೀಸೋಕಲ್ಲು
ಬುಗುರಿ
ಬುಟ್ಟಿ
ಮಂಕರಿ/ಮುತ್ಲ

ಕಲೆ

ಏಕತಾರಿ/ತಂಬೂರಿ
ಕೋಲಾಟದ ಕೋಲುಗಳು
ಗೆಜ್ಜೆಪಟ್ಟಿ
ಡೊಳ್ಳಿನ ಪಡಗ
ತಾಳ
ಮದ್ದಲೆ ಪಡಗ
ಶಹನಾಯಿ/ಸುಂದರಿ
ಹಲಗೆ/ತಮಟೆ

ಮಾಪನ

ಗೆಜ್ಜೆ ಚಟಾಕು
ಚಟಾಕು
ಚಿನಿವಾರ ತಕ್ಕಡಿ
ದಂಡಿಗೆ/ತಕ್ಕಡಿ
ಪಾವು
ಪಂಚೇರುಗಲ್ಲು
ಮಣಗಲ್ಲು

ವೈದ್ಯಕೀಯ

ಗುಲ್ಲು
ಗೊಟ್ಟ
ಚಿಮಟಿಗೆ/ಮುಳ್ಳುಗಡ್ಡಿ

ಇತರ ಕಸುಬುಗಳು

ಅಡಿಗಲ್ಲು/ಸೋರೆ ಬಡೆಯುವ ಕಲ್ಲು
ಅರ
ಉಜ್ಜೋಡು
ಉಣ್ಣೆಕತ್ರಿ/ ತುಪ್ಪಟ ಕತ್ರಿ
ಕೈಗರಗಸ
ಕೈಹಂಚಿನ ಪಡಿಯಚ್ಚು
ಕೊಡತಿ
ಗಾರೆ ಉಜ್ಜುವ ಮಣೆ/ಕತ್ತಿ/ತ್ಯಾಪೆ/ಕರ್ಣಿ
ಗಾರೆ ತಿಕ್ಕುವ ಕಲ್ಲು/ಬೆಣಕಲ್ಲು
ಗೌರಿ ಮೂರ್ತಿ ಅಚ್ಚು
ಡೊಪ್ಪಿ ಉಚ್ಚೋಡು
ತಟ್ಟುಳಿ
ತಿಗರಿ
ತಿದಿ
ತೂಕದ ಗುಂಡು
ತೆಪ್ಪ/ಹರಿಗೋಲು
ಪುಚ್ಕೂಳಿ
ಪೆಟಾರಿ/ಟ್ರಂಕು
ಬಾತಿ
ಬಾಚಿ
ಬಿದರಿನ ಕಡ್ಡಿ ಪಾಕೀಟು
ಬೈರಿಗೆ
ಭರ್ಚಿ
ಮೀನಿನ ಕೂಳಿ
ಮೀನಿನ ಗಾಳ
ಮೀನು ಬುಟ್ಟಿ
ರಂಪಿಗೆ
ಲಗಾಮು
ಸೊಳ/ಸ್ವಳ
ಹಗ್ಗ ಹೊಸೆಯುವ ಮಣೆ



ಜಾನಪದ ವಸ್ತುಕೋಶ

ವಸ್ತುಸಂಗ್ರಹಾಲಯಗಳು ಸ್ಥಾವರದ ಚೌಕಟ್ಟಿನಿಂದ ಬಿಡಿಸಿಕೊಂಡು ಜಂಗಮತ್ವದ ಗುಣವನ್ನು ಹೊಂದಿ, ನಿರ್ಮಾಣವಾಗುತ್ತಿರುವ ಈ ಹೊತ್ತಿನಲ್ಲಿ ಅವನ್ನು ಬಹುದ್ದೇಶ ಸಾಧನೆಯ ಅಗತ್ಯತೆಯ ಆಕರಗಳನ್ನಾಗಿ ರೂಪಿಸಬೇಕಾದ ಜವಾಬ್ದಾರಿ ಇದೆ. ಈ ನಿಟ್ಟಿನಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಮಹತ್ವದ ಹೆಜ್ಜೆಗುರುತುಗಳನ್ನು ಮೂಡಿಸಲು ಮುಂದಾಗಿದೆ. ಅದಕ್ಕೆ 'ಗ್ರಾಮ ಕರ್ನಾಟಕ ಬಯಲು ವಸ್ತುಸಂಗ್ರಹಾಲಯ'ದ ನಿರ್ಮಾಣವೇ ಸಾಕ್ಷಿ.

ಜನಪದರ ಜೀವನ ಶೈಲಿ, ಪೂರ್ವಿಕರ ಗತವೈಭವದ ದಿನಗಳನ್ನು ದೃಗ್ಗೋಚರಗೊಳಿಸುವ ಭೌತಿಕ ಸಾಕ್ಷಿರೂಪದ ಸಾಧನ-ಸಲಕರಣೆಗಳ ಬಗೆಗೆ ಸಚಿತ್ರ ವಿವರವನ್ನು ಒದಗಿಸುವ ಮೂಲಕ ನೋಡುಗರನ್ನೊಳಗೊಂಡಂತೆ ಓದುಗರನ್ನು ಒಳಗು ಮಾಡಿಕೊಳ್ಳುವ ಪ್ರಯತ್ನವಾಗಿ, ಪ್ರಕೃತ ಜಾನಪದ ವಸ್ತುಕೋಶದ ಸಂಪುಟ ಸರಣಿಯ ಮೊದಲ ಸಂಚಿಕೆ ರೂಪುಗೊಂಡಿದೆ. ಈ ಮೂಲಕ ಜನಪದ ವಸ್ತುಸಂಗ್ರಹಾಲಯದ ಸದ್ಬಳಕೆಯ ಸದುದ್ದೇಶದ ಪರಿಕಲ್ಪನೆ ಇನ್ನಷ್ಟು ವ್ಯಾಪಕಗೊಂಡಂತಾಗಿದೆ. ಇಂತಹ ಶ್ರಮದಾಯಕ ಕಾರ್ಯವನ್ನು ತುಂಬ ಶ್ರದ್ಧೆಯಿಂದ, ಪ್ರಾಮಾಣಿಕವಾಗಿ ಆಗು ಮಾಡಿಕೊಟ್ಟ ವಸ್ತುಸಂಗ್ರಹಾಲಯದ ನಿರ್ದೇಶಕರು ಮತ್ತು ಸಂಪಾದಕರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಕ್ಷೇತ್ರಸಹಾಯಕರಿಗೆ ವಿಶೇಷ ಅಭಿನಂದನೆಗಳು ಸಲ್ಲಬೇಕು.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ



₹ ೧೪೦/-

ISBN 938314906-X
9789383149063
ISBN : 978-93-83149-06-3

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ